ಸಂಪುಟ: 13 Volume | ಸಂಚಿಕೆ: 293 Issue | ಪುಟಗಳು 08 Pages | ಶುಕ್ರವಾರ 09 ಜನವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇಬೇಕೆಂದಿಲ್ಲ ಆದರೆ ನಂಬಿಕೆ ಇದ್ದಲ್ಲಿ ಪ್ರೀತಿ ಇದ್ದೇ ಇರುವುದು.

–ಸಂತ ಕಬೀರ

ರಕ್ತದಾನದ ಮೂಲಕ ಪ್ರಾಣ ಉಳಿಸಲು ಮುಂದಾಗಿ 6

ಕಾಮಗಾರಿಗೆ ವೇಗ ಪ್ರಗತಿ ಸಾಧಿಸದಿದ್ದರೆ ಕ್ರಮ 7

ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿಗಳಿಗಾಗಿ ಅರ್ಜಿ 8

## ಸಿಎಂ ಪರಿಹಾರ ನಿಧಿಗೆ 5 ಕೋಟಿ



**ಬೆಂಗಳೂರು:** ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ 2024–25ನೇ ಸಾಲಿನ ಡಿವಿಡೆಂಡ್ 77,17,50,000 ರೂ.ಅನ್ನು ಇಂಧನ ಸಚಿವ ಕೆ.ಜೆ ಜಾರ್ಜ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಸಲ್ಲಿಸಿದರು. ಕ್ರೆಡಲ್ 2024–25ನೇ ಸಾಲಿನಲ್ಲಿ 257.25 ರೂ. ನಿವ್ವಳ ಲಾಭ ಗಳಿಸಿದ್ದು, ಲಾಭದ ಶೇ. 30ರಷ್ಟು ಡಿವಿಡೆಂಡ್ 77,17,50,000 ರೂ. ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಪಿಸಿಎಲ್ ಕಚೇರಿಯಲ್ಲಿ ಸ್ವೀಕರಿಸಿದರು.

ಇದೇ ವೇಳೆ ಕ್ರೆಡಲ್ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 5 ಕೋಟಿ ರೂ. ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಚಿವರು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕ್ರೆಡಲ್ ಅಧ್ಯಕ್ಷರೂ ಆಗಿರುವ ಶಾಸಕ ಟಿ.ಡಿ. ರಾಜೇಗೌಡ, ಇಂಧನ ಇಲಾಖೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಾಧನೆಗೆ ಪಟ್ಟದ್ದೇವರು ಹರ್ಷ



**ಭಾಲ್ಕಿ:** ತಾಲ್ಲೂಕಿನ ತಳವಾಡ (ಕೆ) ಗ್ರಾಮದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಅಡಿಯಲ್ಲಿ ನಡೆಯುತ್ತಿರುವ ಅಲ್ಲಮಪ್ರಭು ಶಿಕ್ಷಣ ಮಹಾವಿದ್ಯಾಲಯದ 26 ವಿದ್ಯಾರ್ಥಿಗಳು ಡಿಸೆಂಬರ್, 2025ರಲ್ಲಿ ನಡೆದ ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಎಂದು ಪ್ರಾಚಾರ್ಯ ಪಾಂಡುರಂಗ ವಿ. ಕುಂಬಾರ ತಿಳಿಸಿದ್ದಾರೆ.

ಹರ್ಷ :ವಿದ್ಯಾರ್ಥಿಗಳ ಸಾಧನೆಗೆ ಹಿರೇಮಠ ಸಂಸ್ಥಾನ ವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷರಾದ ನಾಡೋಜ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿಗಳಾದ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಮಹಾಲಿಂಗ ದೇವರು, ಆಡಳಿತಾಧಿಕಾರಿಗಳಾದ ಶ್ರೀ ಮೋಹನ್ ರೆಡ್ಡಿ, ಪ.ಪೂ. ಕಾಲೇಜಿನ ಪ್ರಾಚಾರ್ಯರಾದ ಶ್ರೀ ಬಸವರಾಜ ಮೊಳಕೇರಿ, ಸಂಯೋಜಕರಾದ ಶ್ರೀ ಬಾಲಾಜಿ ವಲ್ಲೂರೆ, ಅಲ್ಲಮಪ್ರಭು ಶಿಕ್ಷಣ ಮಹಾವಿದ್ಯಾಲಯದ ಎಲ್ಲಾ ಪ್ರಾಧ್ಯಾಪಕರು ಮತ್ತು ಪ್ರಶಿಕ್ಷಣಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

## ರಾಜ್ಯಾದ್ಯಂತ 900 ಕೆಪಿಎಸ್ ಶಾಲೆ..!



**ಕಲಬುರಗಿ:** ಗ್ರಾಮೀಣ ಭಾಗದ ಮಕ್ಕಳಿಗೆ ಖಾಸಗಿ ಕಾನ್ವೆಂಟ್ ಶಾಲೆ ಮೀರಿಸುವ ಗುಣಮಟ್ಟದ ಶಿಕ್ಷಣ ಒದಗಿಸಲು ಸರ್ಕಾರ ಬದ್ಧವಾಗಿದ್ದು, ಆಯವ್ಯಯದಲ್ಲಿ ಘೋಷಿಸಿದಂತೆ ಮುಂದಿನ ದಿನದಲ್ಲಿ ರಾಜ್ಯದಾದ್ಯಂತ 900 ಹೊಸ ಕರ್ನಾಟಕ ಪಬ್ಲಿಕ್ ಶಾಲೆ ನಿರ್ಮಿಸಲಾಗುತ್ತದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಎಸ್. ಮಧು ಬಂಗಾರಪ್ಪ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ 5,800 ಸೇರಿ ರಾಜ್ಯದಾದ್ಯಂತ 11 ಸಾವಿರ ಶಿಕ್ಷಕರ ಭರ್ತಿ ಕಾರ್ಯ ಪ್ರಗತಿಯಲ್ಲಿದ್ದು, ಬರುವ ಮೇ–ಜೂನ್ ನಲ್ಲಿ ನೂತನ ಶಿಕ್ಷಕರ ನೇಮಕಾತಿಯಾಗಿ ಪಾಠ ಮಾಡಲು ಹಾಜರಾಗಲಿದ್ದಾರೆ. ರಾಜ್ಯದಲ್ಲಿ 51 ಸಾವಿರ ಶಿಕ್ಷಕರ ಕೊರತೆ ನಡುವೆಯೂ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದಂತೆ ಕಳೆದ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಅತಿಥಿ ಶಿಕ್ಷಕರ ನೇಮಕಗೊಳಿಸಲಾಗಿದೆ ಎಂದಿದ್ದಾರೆ. ಶಾಸಕ ಜಗದೇವ ಗುತ್ತೇದಾರ, ರಾಹುಲ ಪಾಂಡ್ವೆ, ಜಿ.ಪಂ. ಸಿ.ಇ.ಒ ಭಂವರ್‌ಸಿಂಗ್ ಮೀನಾ ಇದ್ದರು.

## ಆಟಕ್ಕೆ ಮೂರು, ಲೆಕ್ಕಕ್ಕೆ ಎರಡು ಪಕ್ಷ



**ಬೆಂಗಳೂರು:** ಕುಮಾರಸ್ವಾಮಿ ಅವರ ಧೋರಣೆ ನೋಡುತ್ತಿದ್ದರೆ, ಸದ್ಯದಲ್ಲೇ ಜೆಡಿಎಸ್ ಪಕ್ಷ ಬಿಜೆಪಿ ಜತೆ ವಿಲೀನವಾಗುವ ಸಾಧ್ಯತೆ ಇದೆ. ವಿಲೀನವಾದರೆ ನಮಗೂ ಒಳ್ಳೆಯದೇ. ನಾವೂ ನೇರವಾಗಿ ಬಿಜೆಪಿ ಜೊತೆ ಹೋರಾಟ ಮಾಡಬಹುದು. ಆಗ ಆಟಕ್ಕೆ ಮೂರು ಪಕ್ಷ, ಲೆಕ್ಕಕ್ಕೆ ಮಾತ್ರ ಎರಡು ಪಕ್ಷ ಎಂಬ ಗೊಂದಲ ಇರುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ. ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಜೊತೆ ನಡೆಸಿದ ಸಭೆಗೆ ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, ರಾಜಕೀಯದಲ್ಲಿ ಕುಮಾರಸ್ವಾಮಿ ಅವರಿಗಿಂತ ಹೆಚ್ಚಿನ ಅನುಭವವಿದೆ. ನಾನು ಸಿಎಂ ಆಗದೇ ಇರಬಹುದು, ಆದರೆ ಆಡಳಿತ ವಿಚಾರದಲ್ಲಿ ಅವರಿಗಿಂತ ಅನುಭವ ಹೊಂದಿದ್ದೇನೆ. ಅವರಿಂದ ಕಲಿಯುವ ಅಗತ್ಯ ನನಗಿಲ್ಲ ಎಂದಿದ್ದಾರೆ.

# ಸಿಎಂ ಶಕ್ತಿಗೆ ಹೈ ಅಸ್ತು..?

## ಸಂಪುಟ ಪುನಾರಚನಗೆ ರಾಹುಲ್‌ಗಾಂಧಿ ಒಪ್ಪಿಗೆ..? ಸಿದ್ದರಾಮಯ್ಯ ಕುರ್ಚಿ ಭದ್ರತೆಗೆ ಕಸರತ್ತು



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ದೇವರಾಜ್ ಅರಸು ಅವರ ದಾಖಲೆ ಹಿಂದಿಕ್ಕಿರುವ ಸಿದ್ದರಾಮಯ್ಯ ಅವರು ರಾಜ್ಯ ಬಜೆಟ್‌ಗೆ ಮುಂಚಿತವಾಗಿ ಸಂಪುಟ ಪುನಾರಚನೆ ಮಾಡಲಿದ್ದಾರೆ. ಈ ಮೂಲಕ ತಮ್ಮ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಳ್ಳಲಿದ್ದಾರೆ ಎಂದು ಮೂಲಗಳು ಖಚಿತ ಪಡಿಸಿವೆ.

ಈ ವಿಷಯದ ಬಗ್ಗೆ ಚರ್ಚಿಸಲು ಜ. 13ರಂದು ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಸಿಎಂ ಭೇಟಿ ಮಾಡಲಿದ್ದಾರೆ.

**ವೇಣುಗೋಪಾಲ್ ಜತೆ ಚರ್ಚೆ..?:** ಸಿಎಂ ಸಿದ್ದರಾಮಯ್ಯ ಅವರು ರಾಹುಲ್ ಅವರ ಆಪ್ತ ಸಹಾಯಕ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಿರುವುದಾಗಿ ಮೂಲ ತಿಳಿಸಿದೆ. ಬಜೆಟ್ ಅಧಿವೇಶನದ ಪೂರ್ವ, ನಂತರ ಪುನರ್ರಚನೆಗೆ ರಾಹುಲ್ ಒಪ್ಪಿಗೆ ನೀಡುವುದರ ಮೇಲೆ ರಾಜ್ಯರಾಜಕೀಯ ನಿಂತಿದೆ.

### ಸಂಪುಟದ ಇತರ ಪ್ರಮುಖ ನಿರ್ಧಾರ..?

- ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಬೆಂಗಳೂರು ಸಂಕೀರ್ಣಕ್ಕೆ ಸಾಬೂನು ತಯಾರಿಸುವ ಯಂತ್ರವನ್ನು 17.70 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಸಲು ಅನುಮೋದನೆ.
- ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯವನ್ನು ಗೇಲ್ ಸಂಸ್ಥೆಯವರು ಕೋಲಾರದಲ್ಲಿ ಸ್ಥಾಪಿಸುತ್ತಿರುವ 150 ಟಿಪಿಡಿ ಸಿಬಿಜಿ ಘಟಕಕ್ಕೆ ಪೂರೈಸಲು ಒಪ್ಪಿಗೆ.
- ಪಿಎಂ ಎಬಿಎಚ್‌ಐಎಂ ಯೋಜನೆಯಡಿ 2024–2026ನೇ ಸಾಲಿನಲ್ಲಿ ರಾಜ್ಯದಾದ್ಯಂತ 196 ಎಸ್ಸಿ–ಎಎಎಂಗಳನ್ನು 127.40 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು 31.12.2025 ರಂದು ಸರ್ಕಾರಿ ಆದೇಶ ಹೊರಡಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ.
- ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಲ್ಲಿರುವ 33 ಜೀವಾವಧಿ ಶಿಕ್ಷಾಬಂಧಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ಒಪ್ಪಿಗೆ. ಎರಡು ಶಿಕ್ಷಾಬಂಧಿಗಳನ್ನು ಕೇಂದ್ರದ ಅನುಮತಿ ಪಡೆದುಕೊಂಡು ಬಿಡುಗಡೆಗೆ ಮಾಡಲು ನಿರ್ಧಾರ.
- ಕಲಬುರಗಿ ಜಿಲ್ಲೆಯ ಕಲಬುರಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಜಿಟಿಟಿಸಿ ಬಹುಕೌಶಲ್ಯಾಭಿವೃದ್ಧಿ ಕೇಂದ್ರವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಿಂದ ಎರಡನೇ ಹಂತದಲ್ಲಿ 66.75 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ.

### ಜ.10ರ ಬಳಿಕ ಪುನಾರಚನೆ..!

ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರಂತಹ ಸಚಿವ ಸ್ಥಾನದ ಆಕಾಂಕ್ಷಿಗಳು ಜ. 10ರ ಬಳಿಕ ಪುನರ್ರಚನೆ ಪ್ರಕ್ರಿಯೆ ಆರಂಭ ವಾಗಲಿದೆ ಎಂದಿದ್ದಾರೆ. ರಾಹುಲ್ ಗಾಂಧಿ ಪುನಾರಚನೆಗೆ ಒಪ್ಪಿಗೆ ನೀಡಿದರೆ, ಡಿಸಿಎಂ ಡಿಕೆ ಶಿವಕುಮಾರ್ ಅವರ ಪಾಳಯ ಸಿಎಂ ಬದಲಾವಣೆಗೆ ಒತ್ತಾಯಿಸುತ್ತಿದ್ದರೂ ಸಿಎಂ ನಾಯಕತ್ವಕ್ಕೆ ತೊಂದರೆಯಿಲ್ಲ ಎನ್ನಲಾಗಿದೆ.

### ರಾಜ್ಯದ ಜನತೆಗೆ ಗುಡ್ ನ್ಯೂಸ್..!

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರ ಅನುಮೋದನೆ ಪಡೆಯದೆ ರಚಿಸಿರುವ ಬಡಾವಣೆಗಳಲ್ಲಿ ಬಿ ಖಾತಾ ನಿವೇಶನ, ಕಟ್ಟಡ, ಪ್ಲಾಟ್‌ಗಳಿಗೆ ಎ ಖಾತಾ ಸರ್ಕಾರ ನೀಡಲಿದೆ. ರಾಜ್ಯದ ಜನತೆಗೆ ಗುಡ್ ನ್ಯೂಸ್ ಸಿಕ್ಕಿದೆ. ಸಿಎಂ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.







## ಎಂಎಲ್ಸಿ ಆರೋಪ ಶುದ್ಧ ಸುಳ್ಳು: ಮರಿಯಪ್ಪ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಸ್ಥಳೀಯ ಎಂಎಲ್ಸಿ ಬಸನಗೌಡ ಬಾದರ್ಲಿ ಮಾಡುತ್ತಿರುವ ಆರೋಪ ಶುದ್ಧ ಸುಳ್ಳು, ಸತ್ಯಕ್ಕೆ ದೂರವಾದದ್ದು, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸಲುವಾಗಿ ಎಸ್ಸಿ ಎಸ್ಟಿ ಹಿಂದುಳಿದ ಅಲ್ಪಸಂಖ್ಯಾತರ ಸಮುದಾಯಗಳನ್ನು ಎತ್ತಿಕಟ್ಟುತ್ತಿದ್ದಾರೆ ಎಂದು ಮಾದಿಗ ಸಮುದಾಯದ ಅಧ್ಯಕ್ಷ ಮರಿಯಪ್ಪ ಜಾಲಿಹಾಳ ತಿರುಗೇಟು ನೀಡಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿ ನಡೆಸಿ ಮಾತನಾಡಿ, ತಾಲೂಕಿನ ಜನಪ್ರಿಯ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ತಮ್ಮ 50 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಸತತವಾಗಿ ಅಹಿಂದ ಎಸ್ ಸಿ ಎಸ್ಟಿ ಅಲ್ಪಸಂಖ್ಯಾತ ಎಲ್ಲರನ್ನು ಸಮಾನವಾಗಿ ಕಾಣುವ ವ್ಯಕ್ತಿ ಯಾರಾದರೂ ಇದ್ದರೆ ಅದು ಶಾಸಕ ಹಂಪನಗೌಡ ಬಾದರ್ಲಿ ಅವರು ಯಾವತ್ತೂ ಸಹ ಜಾತಿ ತಾರತಮ್ಯ ಮಾಡಿದವರಲ್ಲ. ತಾಲೂಕಿನಲ್ಲಿ ಪ.ಜಾತಿ ಪರಿಶಿಷ್ಟ ಪಂಗಡದವರಿಗೆ ಸರ್ಕಾರದಿಂದ ಅನುದಾನವನ್ನು ತರುವುದರ ಮೂಲಕ ನಮ್ಮ ಸಮಾಜಕ್ಕೆ ಸಮುದಾಯ ಭವನ ನಿರ್ಮಾಣ ಮಾಡಬೇಕೆಂದು ಶಾಸಕ ಹಂಪನಗೌಡ ಬಾದರ್ಲಿ ಒಂದು ಎಕರೆ ಭೂಮಿಯನ್ನು ಕೊಡಿಸಿದ್ದಾರ ಎಂದಿದ್ದಾರೆ.

ಅಂಬ್ರೊಸ್ ಹನುಮಂತಪ್ಪ ಗೋಮರ್ಷಿ. ನರಸಪ್ಪ ಕಟ್ಟಿಮನಿ. ಸುಭಾಶ್ ಫ್ರಾಂಕ್ಲಿನ್. ಶೇಖರಪ್ಪ ವಕೀಲರು ದುಮತಿ. ಹನುಮಂತಪ್ಪ ವಕೀಲರು. ಅನಿಲ್ ಕುಮಾರ್ ವೈ. ಶರಣಬಸವ ಮಲ್ಲಾಪುರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಬಾದರ್ಲಿಗೆ ಉಮಲೂಟಿ ಸವಾಲ್:** ಇವತ್ತು ಐದು ಬಾರಿ ಶಾಸಕರಾಗಿ ಸಾಕಷ್ಟು ರಾಜಕೀಯದ ಅನುಭವ ಹೊಂದಿರುವ ರಾಜಕಾರಿಣಿ ಎಂದರೆ ಶಾಸಕರು ಹಂಪನಗೌಡ ಬಾದರ್ಲಿ ಅವರು. ಎಂಎಲ್ಸಿ ಬಸನಗೌಡ ನೀವು ಎಲ್ಲಿದ್ದೀರಿ ನೀವು ಇವತ್ತು ಕಾಂಗ್ರೆಸ್ ಪಕ್ಷದ ರಾಜ್ಯಮಟ್ಟದಲ್ಲಿ ಬೆಳೆದಿದ್ದೀರಿ ಎಂದರೆ ಹಂಪನ ಗೌಡ್ರುಬಾದರ್ಲಿ ಎಂಬ ಹೆಸರಿಂದ ಅದನ್ನು ಅರ್ಥ ಮಾಡಿಕೊಳ್ಳಿ ಎಂದು ಭೋವಿ ಸಮಾಜದ ತಾಲ್ಲೂಕು ಅಧ್ಯಕ್ಷ ಅಶೋಕ್ ಉಮಲೂಟಿ ಎಂದಿದ್ದಾರೆ.

### ಪಕ್ಷದ ವಿರುದ್ಧ ನಡೆದವರು..!

ವೆಂಕಟೇಶ್ ನಾಯಕ್ ಗೋನವಾರ ತಿಮ್ಮಣ್ಣ, ಹುಲಗುಂಚಿ ಮಲ್ಲಯ್ಯ ಅಯ್ಯನಗೌಡ ಸೇರಿದಂತೆ ಇವರೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಪಕ್ಷದ ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಹಾಗಾಗಿ ಇವರು ಬೋರವೆಲ್ ಅರ್ಜಿಗಳು ರದ್ದುಪಡಿಸಿ ಎಂದು ಪತ್ರ ಬರೆದಿದ್ದಾರೆ ಎಂದು ಛಲವಾದಿ ಮಹಾಸಭಾದ ತಾಲೂಕಾಧ್ಯಕ್ಷ ಡಾ. ರಾಮಣ್ಣ ಗೊನವಾರ ತಿಳಿಸಿದ್ದಾರೆ.

## ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲ. ಮಹಿಳೆಯರಿಗೆ ರಕ್ಷಣೆ ಇಲ್ಲ: ಪ್ರತಿ ಪಕ್ಷದ ನಾಯಕ ಆರ್ ಅಶೋಕ್

# ಜ.12ರಿಂದ ಕುಡಲಸಂಗಮದಲ್ಲಿ 39ನೇ ಶರಣ ಮೇಳ: ಬಸವರಾಜ ಬುಳ್ಳಾ



ಮಲ್ಲಮ್ಮ ನುಡಿ ವಾರ್ತೆ

**ಬೀದರ್:** ಈ ತಿಂಗಳ 12, 13 ಹಾಗೂ 14ರಂದು ಮೂರು ದಿನಗಳ ಕಾಲ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಕುಡಲಸಂಗಮದಲ್ಲಿ 39ನೇ ಶರಣ ಮೇಳ ಆಯೋಜಿಸಲಾಗುತ್ತಿದೆ ಎಂದು 39ನೇ ಶರಣ ಮೇಳದ ಗೌರವಾಧ್ಯಕ್ಷ ಬಸವರಾಜ ಬಳ್ಳಾ ತಿಳಿಸಿದರು.

ಗುರುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ವಿಶ್ವಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮಿಯರಾದ ಲಿಂಗಾಯತರು ಮತ್ತು ಬಸವತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರವಿದ್ಯಾಭೂಮಿ,ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವನ್ನು ಬಸವ(ಲಿಂಗಾಯತ)ಧರ್ಮಿಯರ ಧರ್ಮಕ್ಷೇತ್ರಎಂದುಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನುನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ಇಂತಹ ಶರಣ ಮೇಳವು ಪ್ರತಿ ವರ್ಷ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು 38ನೇ ಶರಣ ಮೇಳವು 2026ನೇ ಜನವರಿ 12,13 ಮತ್ತು 14 ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗಪೂಜೆ,ಗಣಲಿಂಗದರ್ಶನ, ಸಾಮೂಹಿಕ ವಚನ ಪಠಣ, ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14 ರಂದು ಬೆಳಿಗ್ಗೆ 9 ರಿಂದ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ, ಪಥ ಸಂಚಲನ ಇರುತ್ತದೆ. ಪ್ರತಿದಿನ ಬೆಳಿಗ್ಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40 ದಿವಸ, 30 ದಿವಸ, 20 ದಿವಸ ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ಮುಸಲ್ಮಾನ್ ಧರ್ಮಿಯರಿಗೆ ಮೆಕ್ಕಾ, ಸಿಖ್ ಧರ್ಮಿಯರಿಗೆ ಅಮೃತಸರ, ಬೌದ್ಧ ಧರ್ಮಿಯರಿಗೆ ಬುದ್ಧಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಶರಣ ಮೇಳಕ್ಕೆ ಜಾತಿ, ಮತ, ಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಾಂತರ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ ಕೊಟ್ಟರು.

ಕಾರ್ಯಕ್ರಮವನ್ನು ವಿವರಿಸಿದ ಅವರು, ಜ.12ರಂದು ಬೆಳಿಗ್ಗೆ 10.30 ಗಂಟೆಗೆ ಶರಣ ಮೇಳ ಉದ್ಘಾಟನೆ ಸಮಾರಂಭ ಜರುಗಲಿದೆ. ಸಮಾರಂಭದ ದಿವ್ಯ ಸಾನಿಧ್ಯವನ್ನು ಪೂಜ್ಯ ಮಾತೆ ಗಂಗಾದೇವಿಯವರು ಹಾಗೂ ಪೂಜ್ಯ ಸಿದ್ಧರಾಮೇಶ್ವರ ಸ್ವಾಮಿಜಿ ಸಾನಿಧ್ಯ ವಹಿಸಲಿದ್ದು, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಸುಶಿಲಕುಮಾರ ಶಿಂಧೆ ಉದ್ಘಾಟಿಸುವರು. ರಾಜ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ ಪಾಟೀಲ ತರಂಗಿಣಿ ಕೃತಿ ಲೋಕಾರ್ಪಣೆಗೊಳಿಸುವರು. ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ ಧ್ವಜಾರೊಹಣ ನೆರವೇರಿಸುವರು. ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಇದೇ ವೇಳೆ ಸ್ವಾಮಿ ಲಿಂಗಾನಂದ ಶ್ರೀ ರಾಷ್ಟ್ರೀಯ ಪ್ರಶಸ್ತಿಯನ್ನು ಗೋ.ರು ಚನ್ನಬಸಪ್ಪ ಅವರಿಗೆ, ಬಸವಾತ್ಮಜ ರಾಷ್ಟ್ರೀಯ ಪ್ರಶಸ್ತಿಯನ್ನು ಗಾಯಕಿ ಸಂಗೀತಾ ಕಟ್ಟಿ ಅವರಿಗೆ ವಿತರಿಸಲಾಗುತ್ತದೆ. ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಕ್ಷರಿ ಅವರಿಗೆ ಶರಣ ಕಾಯಕರತ್ನ ಪ್ರಶಸ್ತಿ ಹಾಗೂ ಟಿ.ವಿ 9 ವರದಿಗಾರ ರವಿ ಮೂಕಿ ಅವರಿಗೆ ಶರಣ ಜ್ಞಾನ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ ಎಂದವರು ವಿವರಿಸಿದರು.

ರಾಷ್ಟ್ರೀಯ ಬಸವದಳದ ರಾಜ್ಯ ಉಪಾಧ್ಯಕ್ಷ ರಾಜೇಂದ್ರ ಜೊನ್ನಿಕೇರಿ, ಜಿಲ್ಲಾಧ್ಯಕ್ಷ ಸೋಮಶೇಖರ ಪಾಟೀಲ ಗಾದಗಿ, ಲಿಂಗಾಯತ ಸಮಾಜದ ಜಿಲ್ಲಾಧ್ಯಕ್ಷ ಕುಶಾಲರಾವ ಪಾಟೀಲ ಖಾಜಾಪುರ, ಪದಾಧಿಕಾರಿ ರಾಜೇಂದ್ರಕುಮಾರ ಗಂದಗೆ, ಪ್ರಧಾನ ಕಾರ್ಯದರ್ಶಿ ಸುರೇಶ ಸ್ವಾಮಿ, ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಮಾತನಾಡಿದರು. ಇತರೆ ಪದಾಧಿಕಾರಿಗಳಾದ ಸಂಜು ಪಾಟೀಲ, ಕಂಟೆಪ್ಪ ಗಂದಿಗುಡಿ, ಮಲ್ಲಿಕಾರ್ಜುನ ಪಂಚಾಕ್ಷರಿ, ವೀರಶೆಟ್ಟಿ ಪಾಟೀಲ ಮರಖಲ, ಯೋಗೇಶ ಶ್ರೀಗೇರಿ, ನೆಹರು ಸ್ವಾಮಿ, ಗಣೇಶ ಬಿರಾದಾರ, ಉಮೇಶ ಗಾಯತೊಂಡೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ನಾರ್ಕೋಟಿಕ್ ಮಾದಕ ದ್ರವ್ಯ ವಶಕ್ಕೆ



ಮಲ್ಲಮ್ಮ ನುಡಿ ವಾರ್ತೆ

**ಬೀದರ್ :**

ನಗರದ ಗಾಂಧಿಗಂಜ್ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ 20 ಸಾವಿರಕ್ಕೂ ಅಧಿಕ ಮೌಲ್ಯದ ಮಾದಕ ದ್ರವ್ಯ ಹಾಗೂ 20 ಸಾವಿರ ರೂ.ಮೌಲ್ಯದ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದ್ದು, ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಲಾಡಗೇರಿಯ ಓಣಿ ರಸ್ತೆಯ ಕ್ರಾಸ್ ಸಮೀಪ ಒಬ್ಬ ವ್ಯಕ್ತಿ ಮೋಟಾರ್ ಸೈಕಲ್‌ನಲ್ಲಿ ಕಾಟನ್ ಬಾಕ್ಸ್ ಹಾಗೂ ಪ್ಲಾಸ್ಟಿಕ್ ಕವರ್‌ನಲ್ಲಿ ನಾರ್ಕೋಟಿಕ್ ಮಾದಕ ದ್ರವ್ಯ ಅಂಶ ಹೊಂದಿರುವ ಗುಳಿಗೆಗಳು ಮತ್ತು ಸಿರಪ್ ಬಾಟಲಿಗಳನ್ನು ಸಾರ್ವಜನಿಕರಿಗೆ ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಗಾಂಧಿಗಂಜ್ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರಾದ ಆನಂದರಾವ್ ಅವರು ತಮ್ಮ ಠಾಣೆಯ ಸಿಬ್ಬಂದಿಗಳೊಂದಿಗೆ ದಾಳಿ ನಡೆಸಿದ್ದರು.

ಪಂಚರ ಸಮಕ್ಷಮ ಹಾಗೂ ಗೆಜೆಟೆಡ್ ಅಧಿಕಾರಿ ಎಡಿಸಿ ಮತ್ತು ಸಿಪಿಐ ಅವರ ಸಮ್ಮುಖದಲ್ಲಿ ಕಾಟನ್ ಬಾಕ್ಸ್ ಪರಿಶೀಲನೆ ನಡೆಸಿದಾಗ, ಅದರೊಳಗೆ ಮಾದಕ ದ್ರವ್ಯ ವಸ್ತುಗಳು ಪತ್ತೆಯಾಗಿವೆ.

ಈ ದಾಳಿಯಲ್ಲಿ ಒಟ್ಟು 20,882 ರೂ. ಮೌಲ್ಯದ ಮಾದಕ ದ್ರವ್ಯ ವಸ್ತುಗಳು ಹಾಗೂ 20,000 ರೂ. ಮೌಲ್ಯದ ಒಂದು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದ್ದು, ಈ ಸಂಬಂಧ ಗಾಂಧಿಗಂಜ್ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಕಲಿಕಾ ಹಬ್ಬ| ಮಕ್ಕಳ ಪ್ರತಿಭಾ ಅನಾವರಣಕ್ಕೆ ಸಹಕಾರಿ:ಬಿರಾದಾರ್



ಭಾಲ್ಕಿ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕಲಿಕಾ ಹಬ್ಬ ಸಹಕಾರಿಯಾಗಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್ ಹೇಳಿದರು. ತಾಲೂಕಿನ ಗಡಿಭಾಗದ ಭಾಟಸಾಂಗವಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ ಕಲಿಕಾ ಹಬ್ಬ–2026 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಲಿಕಾ ಹಬ್ಬವು ಮಕ್ಕಳಲ್ಲಿ ಕಲಿಯುವ ಆಸಕ್ತಿ ಹೆಚ್ಚಿಸಲು ಮತ್ತು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರ ಹಾಕಲು ಪೂರಕವಾಗಿದೆ. ಕಲಿಕಾ ಹಬ್ಬದಲ್ಲಿನ ಚಟುವಟಿಕೆಗಳು ಸರಕಾರಿ ಶಾಲಾ ಮಕ್ಕಳಿಗೆ ಮಾತ್ರ ನಡೆಯುತ್ತವೆ. ಮಕ್ಕಳ ಕಲಿಕೆಯ ಬಗ್ಗೆ ಸಮುದಾಯದ ಗಮನ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ಸಿಆರ್‌ಪಿ ಪೂರ್ಣಿಮಾ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಮೂಡುವಂತೆ ಮಾಡುವುದು, ಸಂತಸದಾಯಕ ಕಲಿಕೆ ಪ್ರಕ್ರಿಯೆ, ಆತ್ಮ ವಿಶ್ವಾಸ ಹೆಚ್ಚಿಸುವುದೇ ಕಲಿಕಾ ಹಬ್ಬದ ಉದ್ದೇಶ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಆರ್‌ಪಿ ಸಂಜುಕುಮಾರ, ಸಂತೋಷ, ರಂಜೀತ್, ಮುಖ್ಯಗುರು ಚನ್ನಪ್ಪ, ಅರ್ಜುನ ರಾಜಕುಮಾರ ಸೇರಿದಂತೆ ಹಲವರು ಇದ್ದರು. ಮಧುಕರ್ ಸ್ವಾಗತಿಸಿ, ನಿರೂಪಿಸಿದರು.

# ಕಡ್ಡಾಯವಾಗಿ ಸಂಚಾರಿ ನಿಯಮವನ್ನು ಎಲ್ಲರೂ ಪಾಲಿಸಿ: ಪ್ರಕಾಶ ಬನ್ಸೋಡೆ



• **ಮಲ್ಲಮ್ಮ ನುಡಿ ವಾರ್ತೆ**
**ಬೀದರ್ :**

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೇಟ ಧರಸಿ ವಾಹನ ಚಾಲನೆ ಮಾಡಬೆಕೆಂದು ಹಿರಿಯ ಸಿವಿಲ್ ನ್ಯಾಯಧಿಶರು ಹಾಗು ಜಿಲ್ಲಾ ಕಾನೂನ ಸೇವೆ ಪ್ರಾದಿಕಾರದ ಸದ್ಯಸ ಕಾರ್ಯದರ್ಶಿ ಗೌರವಾನ್ವಿತ ಪ್ರಕಾಶ ಅರ್ಜುನ ಬನ್ಸೋಡೆ ಅವರು ತಿಳಿಸಿದ್ದಾರೆ,

ಅವರು ಸೋಮುವಾರ ಜಿಲ್ಲಾ ಕಾನೂನ ಸೇವೆ ಪ್ರಾದಿಕಾರ ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಪೋಲಿಸ್ ಇಲಾಖೆ ಶ್ರೀ ಮಾತಾ ಮಾಣಿಕೇಶ್ವರಿ ಪಿ.ಯು.ಕಾಲೇಜ ಹಾಗು ಬೀದರ ಮೋಟಾರ ವಾಹನ ತರಬೇತಿ ಶಾಲೆಯ ಸಹಯೋಗದಲಿ 37 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮವನು ಸಸಿಗೆ ನೀರು ಹಾಕುವ ಮುಲಕ ಚಾಲನೆ ನೀಡಿದರು,

ವಿಧ್ಯಾರ್ಥಿ ವಿದ್ಯಾರ್ಥಿನಿಯರು 18 ವರ್ಷದನಂತರ ಚಾಲನಾ ಪತ್ರ ಪಡೆದು ವಾಹನ ಚಲಾಯಿಸಬೆಕು. ಇಲವಾದರೆ 18 ವರ್ಷಕಿಂತ ಕಮ್ಮಿ ಇರುವ ವಿಧ್ಯಾಥಿಗಳೂ ವಾಹನ ಚಲಾಯಿಸಿದರೆ ಕಾನೂನಬಾಹಿರವಾಗಿರುತ್ತದೆ .ಒಂದು ವೇಳೆ ರಸ್ತೆ ಅಪಘಾತಕ್ಕೆ ವಳಗಾದರೆ ಕುಟುಂಬದವರು ನಷ್ಟ ಭರಿಸಬೇಕಾಗುತ್ತದೆ. ವಿಧ್ಯಾರ್ಥಿಗಳು ರಸ್ತೆ ಮೆಲೆ ನಡೆದುಕೋಂಡು ಹೊಗುವರು ಎಡದಿಂದ ನಡಯಬೇಕು.

ವಾಹನ ನಡೆಸುವಾಗ ವಾಹನದ ಸಂಬಂಧಿತ ದಾಖಲೆಗಳು ಆರ ಸಿ. ಕಾರ್ಡ ಇನ್ಸುರೆನ್ಸ. ಪಿಯುಸಿ ಇನತರ ಸಂಬಪಟ್ಟ ಧಾಕಲೆಗಳನ್ನು ವಾಹನದಲಿ ಒಂದು ಪ್ರತಿ ಕಡ್ಡಾಯವಾಗಿ ಇಟ್ಟುಕೋಳಬೇಕು. ರಸ್ತೆ ಅಪಘಾತಗಳು ಕಡಿಮೆ ಮಾಡಬೇಕಾದರೆ ರಸ್ತೆ ನಿಯಮಗಳು ಪಾಲನೆ ಮಾಡುವುದರಿಂದ ಅಪಘಾತ ಕಡಿಮೆ ಮಾಡಲು ಸಾಧ್ಯ ಎಂದು ನುಡಿದರು.

ಮೋಟಾರ ವಾಹಾನ ನಿರಿಕ್ಷರಾದ ಹುಸೇನಸಾಬ ಲಾದ ಮಾತನಾಡಿ ಅಪಘಾತಗಳಲಿ ಅತ್ತಿ ಹೆಚ್ಚು ಬೈಕ ಸವಾರರು ಅಪಘಾತದಲಿ ಒಳಗಾಗುತ್ತಿದೆ ವಾಹನ ನಡೆಸುವಾಗ ಪೋನ ಹೆಡ ಪೋನ

ಬಳಸಬಾರದು ಅತ್ತಿವೇಗ ವಾಗಿ ವಾಹನ ನಡೆಸಬಾರದು ವಾಹನದ ಮೇಲೆ ಇಬ್ಬರಿಗಿಂತ ಹೆಚ್ಚು ವಿಧ್ಯಾರ್ಥಿಗಳು ಸವಾರಿ ಮಾಡವಾರದು ಮಧ್ಯ ಪಾನ ಮಾಡಿ ವಾಹಾನ ಚಲಾಯಿಸಬಾರದು ಎಂದು ಹೇಳಿದರು.

ಸಂಚಾರಿ ಪೋಲಿಸ ಠಾಣೆಯ ಪಿ.ಐ.ರಮೇಶ ಮೈಲುರಕರ ಮಾತನಾಡಿ ವಿಧ್ಯಾರ್ಥಿಗಳು ಮನೆಯಿಂದ ಕಾಲೇಜಿಗಿ ಬರುವಾಗ 10 ನಿಮಿಷ ಮುಂಚಿತವಾಗಿ ಬರಬೆಕು ರಸ್ತೆ ಮೆಲೆ ಬರುವಾಗ ಬಹಳ ಎಚ್ಚರಿಕರಯಿಂದ ರಸ್ತೆ ದಾಟಬೇಕು. ಸಣ್ಣ ಪುಟ ಕೇಲಸ ಗಳಿಗೆ ವಾಹನ ಉಪಯೋಗಿಸಬಾರದು. ರಸ್ತೆಯ ಮೇಲೆ ಬರುವ ಸಂಚಾರಿ ಚಿಹ್ನೆ ನೊಡಿ ವಾಹನ ಚಲಾಯಿಸುವ ಹವ್ಯಾಸ ಬಳಿಸಕೊಳಬೆಕು ಎಂದು ಹೆಳಿದರು.

ವೆದಿಕೆಯಮೆಲೆ ಶ್ರೀ ಮಾತಾ ಮಾಣಿಕೇಶ್ವರಿ ಪಿ.ಯು.ಕಾಲೇಜಿನ ಪ್ರಾರ್ಚಯರಾದ ಪಿ.ಎಸ.ಕುಮಾರಸೆಟ್ಟಿ ರಾಜ್ಯ ವಾಹನ ತರಬೇತಿ ಶಾಲೆಯ ಸಂಘಟನ ಕಾರ್ಯದಶಿ ಶಿವರಾಜ ಜಮಾದರ ಖಾಜಾಪುರ ಬೀದರ ಮೋಟಾನ ವಾಹನ ತರಬೇತಿ ಶಾಲೆಯ ಸಂಘದ ಅಧ್ಯಕ್ಷರಾದ ಪ್ರಾಕಾಶ ಗುಮ್ಮೆ.ಹಾಗು ಕಾಲೆಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




ಬಾಸುಮಿಯ್ಯಾ ಕೊಂಚನೂರ ಆರಕ್ಷಕ ಉಪ ನಿರೀಕ್ಷಕರು ಜನವಾಡ ಅವರನ್ನು 2026ನೇ ಸಾಲಿನ ಮಲ್ಲಮ್ಮ ನುಡಿ ಪ್ರಾದೇಶಿಕ ಪತ್ರಿಕೆಯ ಕ್ಯಾಲೆಂಡರ್ ವಿತರಿಸಲಾಯಿತು,
(ಮಲ್ಲಮ್ಮ ನುಡಿ ಚಿತ್ರ)

# ಸಂಕ್ರಾಂತಿ ಹಬ್ಬದ ಅಂಗವಾಗಿ ಜಿಲ್ಲಾ ಮಟ್ಟದ ರಂಗೋಲಿ ಸ್ಪರ್ಧೆ

(ವರದಿ.ಡಿ.ಕೆ. ಪ್ರಹ್ಲಾದ)

• ಮಲ್ಲಮ್ಮ ನುಡಿ ವಾರ್ತೆ.
ಬಸವಕಲ್ಯಾಣ:




ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನ ಶಿಕ್ಷಣ ಸಂಸ್ಥೆಯಲ್ಲಿ ಹಾಗೂ ಗ್ಯಾರಂಟಿ ನ್ಯೂಸ್ ಚಾನೆಲ್ ಮತ್ತು ಬಸವೇಶ್ವರ ಸಿಬಿಎಸ್ ಸಿ ಶಾಲಾ ಆವರಣದಲ್ಲಿ ಸಂಕ್ರಾಂತಿ ಹಬ್ಬದ ಅಂಗವಾಗಿ ರಂಗೋಲಿ ಹಬ್ಬ, ಜಿಲ್ಲಾ ಮಟ್ಟದ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು. ಯುವತಿಯರು ಹಾಗೂ ಯುವಕರು ಒಳಗೊಂಡು ನೂರಾರು ಜನರು ಭಾಗವಹಿಸಿ ವಿಧವಿಧದ ರಂಗೋಲಿ ಬಿಡಿಸಿದ್ದರಿಂದ ಎಲ್ಲೆಡೆ ಬಣ್ಣಬಣ್ಣದ ಆಕರ್ಷಕ ಚಿತ್ತಾರ ಮೂಡಿತ್ತು.

ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ್ ಸಸಿಗೆ ನೀರೆರೆದು ಉದ್ಘಾಟಿಸಿದರು. ಶ್ರೀ ಬಸವೇಶ್ವರ ದೇವಸ್ಥಾನದ ಪಂಚ ಕಮಿಟಿ ಅಧ್ಯಕ್ಷರಾದ ಬಸವರಾಜ ಕೋರಕೆ ಅಧ್ಯಕ್ಷತೆ ವಹಿಸಿದ್ದರು.

ಅಕ್ಕ ಪಡೆ ಕರ್ನಾಟಕದ ರಾಜ್ಯ ಸಂಯೋಜಕಿ ಶ್ರೀಮತಿ ಶೈನಿ ಪ್ರದೀಪ ಗುಂಟಿ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣಪತ್ರ ವಿತರಿಸಿ ಮಾತನಾಡಿ, ಗ್ಯಾರಂಟಿ ನ್ಯೂಜ್ ಚಾನೆಲ್ ವತಿಯಿಂದ ರಂಗೋಲಿ ಸ್ಪರ್ಧೆ ಏರ್ಪಡಿಸಿ ಸಂಕ್ರಾಂತಿ ಹಬ್ಬದ ರಂಗು ಹೆಚ್ಚಿಸಲಾಗಿದೆ. ಇದರಿಂದ ಮಹಿಳೆಯರಲ್ಲಿ ಧೈರ್ಯ ಮೂಡುತ್ತದೆ. ಅವರಲ್ಲಿನ ಸೂಪ್ತ ಪ್ರತಿಭೆ ಹೊರಬರಲು ವೇದಿಕೆ ಒದಗಿಸಿದಂತಾಗಿದೆ ಎಂದರು.

ನಗರಸಭೆ ಆಯುಕ್ತರಾದ ರಾಜೀವ ಬಣಕಾರ್, ಸಾವಿತ್ರಿ ಶರಣು ಸಲಗರ, ಸಿಡಿಪಿಓ ಗೌತಮ್ ಶಿಂಧೆ, ನಗರ ಠಾಣೆ ಸಿಪಿಐ ಅಲಿಸಾಬ್, ಸಾಹಿತಿ ಮಾಣಿಕ ಆರ್ ಭುರೆ, ಗೋಕುಳ ಹರಿಓ ಶಿಕ್ಷಣ ಸಂಸ್ಥೆ ಅಧ್ಯಕ್ಷ ದಿಲೀಪಗಿರಿ ಗೋಸಾಯಿ, ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಸಂಜೀವಕುಮಾರ ಕಾಂಗೆ, ಅರ್ಜುನ ಕನಕ, ಬಸವೇಶ್ವರ ದೇವಸ್ಥಾನ ಸಮಿತಿಯ ಪ್ರಮುಖರಾದ, ಮಲ್ಲಿಕಾರ್ಜುನ ಚಿರಡೆ, ವೀರಣ್ಣ ಹಲಶೆಟ್ಟೆ, ವಿವೇಕಾನಂದ ಹೊದಲೂರೆ, ಶಿವರಾಜ ಶಾಶೆಟ್ಟೆ, ಯುವ ಮುಖಂಡರಾದ, ಪೋಪಟ ಜಮಾದಾರ, ಲೋಕೇಶ ಮೋಳಕೆರೆ ಹಾಗೂ ಗ್ಯಾರಂಟಿ ನ್ಯೂಜ್ ಚಾನೆಲ್ ಜಿಲ್ಲಾ ವರದಿಗಾರ ಶಿವು ಮಠಪತಿ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಅಶ್ವೀನ್ ಗೋರ್ಟೆ.

ಈ ಸಂದರ್ಭದಲ್ಲಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಜಯಲಕ್ಷ್ಮಿ ಜಮಾದಾರ,

ದ್ವಿತೀಯ ಸ್ಥಾನ ಪಡೆದ ಸಿದ್ಧಮ್ಮ ರಾಜೋಳೆ ಮತ್ತು ತೃತೀಯ ಸ್ಥಾನ ಪಡೆದ ಮಾಣಿಕೇಶ್ವರಿ ಅವರಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು.

ಈ ವೇಳೆ ಸಾಮಾಜಿಕ ಕಾರ್ಯಕರ್ತ ಲೋಕೇಶ್ ಮೊಳಕೆರೆ, ಪೋಪಟ್ ಜಮಾದಾರ, ಮಲ್ಲಿಕಾರ್ಜುನ್ ಬಂಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹರ್ಷ ಗ್ರಾಮಗಳಲ್ಲಿ ಹಸಿರು ಕರಣಕ್ಕೆ ಆದ್ಯತೆ ನೀಡಲು ಮನವಿ



ಮನವಿ :–ಬೀದರ್ ಜಿಲ್ಲೆಯ ಗ್ರಾಮಗಳ ಬಂಜರು ಭೂಮಿ ಗೋಮಾಳ ಪ್ರದೇಶಗಳಲ್ಲಿ ಹಸಿರು ಕರಣ ಮಾಡಲು ಪರಿಸರವಾದಿ ಶೈಲೇಂದ್ರ ಕಾವಡಿ ಮನವಿ ಮಾಡಿದರು.

ಮಲ್ಲಮ್ಮ ನುಡಿ ವಾರ್ತೆಬೀದರ್:

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಯಾಗಿ ಶರಣಬಸಪ್ಪ ಕೋಟೆಪಗೋಳ ರವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿದ್ದಾರೆ. ಇವರು ಈ ಹಿಂದೆ ಬೀದರ್ ಜಿಲ್ಲೆಯ ಬಸವಕಲ್ಯಾಣ ಉಪ ವಿಭಾಗದ ಸಹಾಯಕ ಆಯುಕ್ತರಾಗಿ ಅತ್ಯುತ್ತಮ ಸೇವೆ ಸಲ್ಲಿಸಿ ಜನರ ಹೃದಯ ಗೆದಿದ್ದರು. ಯಾದಗಿರಿ ಜಿಲ್ಲೆಯ ಅಪರ ಜಿಲ್ಲಾಧಿಕಾರಿಯಾಗಿ 3ವರ್ಷ ಅತ್ಯುತ್ತಮವಾಗಿ ಸೇವೆ ಸಲ್ಲಿಸಿ ಯಾದಗಿರ ಜಿಲ್ಲೆಯ ಜನರ ಅಚ್ಚು ಮೆಚ್ಚಿನ ಜನ ಸ್ನೇಹಿ ಅಧಿಕಾರಿ ಎಂಬ ಖ್ಯಾತಿ ಪಡೆದಿದ್ದಾರೆ. ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ ಇವರನ್ನು ಬೀದರ ಜಿಲ್ಲೆಯ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ. ಇವರು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಿದಕ್ಕೆ ಬೀದರ್ ಜಿಲ್ಲೆಯ ಅವರ ಅಭಿಮಾನಿಗಳು ಹರ್ಷ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ. ಬೀದರ್ ತಾಲೂಕ ಪಂಚಾಯತ ಕಾರ್ಯನಿರ್ವಾಹ ಅಧಿಕಾರಿ ಮಾಣಿಕರಾವ ಪಾಟೀಲ್ ಹಾಗೂ ಅವರ ಸಿಬ್ಬಂದಿ ವರ್ಗ ಸನ್ಮಾನಿಸಿ ಶುಭಾಶಯಗಳು ಕೋರಿದರು.

# ಬೃಹತ್ ಶೋಭಾಯಾತ್ರೆಯೊಂದಿಗೆ ಹಿಂದೂ ಸಮ್ಮೇಳನ ಜರುಗಲಿದೆ ಡಾ. ಬಸವರಾಜ ಸ್ವಾಮಿ.



ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ :

ನಗರದಲ್ಲಿ ಇದೇ 11. ರಂದು ರವಿವಾರ ಹಿಂದೂ ಸಮ್ಮೇಳನ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ.

ಹಿಂದೂ ಭಾವದ ಜಾಗರಣ ಎಂಬ ಸಂದೇಶವನ್ನು ಇಟ್ಟುಕೊಂಡು ಈ ಕಾರ್ಯಕ್ರಮ ಮಾಡಲಾಗುತ್ತಿದೆ, ಈ ಹಿಂದೂ ಸಮ್ಮೇಳನ ಶೋಭಾಯಾತ್ರೆ ಮಧ್ಯಾಹ್ನ 1. ಗಂಟೆಗೆ ಕೋಟೆಯಿಂದ ಪ್ರಾರಂಭವಾಗಿ ಮಹಾತ್ಮಾಗಾಂಧಿ ಚೌಕ, ಶ್ರೀ ಬಸವೇಶ್ವರ ಚೌಕ, ಅಂಬೇಡ್ಕರ ಚೌಕ, ಮಾರ್ಗವಾಗಿ ಸಾಗಿ ಅಕ್ಕಮಹಾದೇವಿ ಕಾಲೇಜು ಆವರಣದಲ್ಲಿ ಸಾಯಂಕಾಲ 4. ಗಂಟೆಗೆ ಸಾರ್ವಜನಿಕ ಕಾರ್ಯಕ್ರಮ ಪ್ರಾರಂಭವಾಗಲಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯವನ್ನು ತಡೋಳಾ. ಮೇಕರದ ಪೂಜ್ಯ ಶ್ರೀ ರಾಜೇಶ್ವರ ಶಿವಾಚಾರ್ಯರು. ತಿಪುರಾಂತಿನ ಗವಿಮಠದ ಪೂಜ್ಯಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಕಲಬುರ್ಗಿ ಸಾಮಾಜಿಕ ಕಾರ್ಯಕರ್ತರಾದ ಕೃಷ್ಣ ಜೋಶಿ. ಈ ಸಂದರ್ಭದಲ್ಲಿ ಭಿತ್ತಿ ಚಿತ್ರ ಮತ್ತು ಪ್ರಚಾರದ ವಾಹನಕ್ಕೆ ಚಾಲನೆ ನೀಡಲಾಯಿತೆಂದು ಹಿಂದೂ ಸಮ್ಮೇಳನ ಆಯೋಜನಾ ಸಮಿತಿ ಅಧ್ಯಕ್ಷರಾದ ಶ್ರೀ ಡಾ. ಬಸವರಾಜ ಸ್ವಾಮಿಯವರು ಭಿತ್ತಿ ಪತ್ರ ಹಾಗೂ ಪ್ರಚಾರದ ವಾಹನಕ್ಕೆ ಚಾಲನೆ ನೀಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಈ ವೇಳೆ ಸಮಿತಿಯ ಉಪಾಧ್ಯಕ್ಷರಾದ

ಡಾ. ಧನರಾಜ ಚಂದನಕೇರೆ, ಕಾರ್ಯದರ್ಶಿಗಳಾದ ಶಿವಾನಂದ ಶೀಲವಂತ, ಖಜಾಂಚಿಯಾದ ಬಾಲಾಜಿ ಖಂಡಾಳೆ, ಆರ್ಯ ಸಮಾಜದ ನಾರಾಯಣ ಬುನ್ನಾ, ಪ್ರಮುಖರಾದ ಪ್ರಕಾಶ ನಿರಾಳೆ, ಕೃಷ್ಣಾ ಗೋಣೆ, ಶಿವಕುಮಾರ ಆಗ್ರೆ, ನಿಲೇಶ ಖುಬಾ, ವಿಶಾಲ ಮೀನಕೇರಾ, ಶ್ರೀಕಾಂತ ಬಡದಾಳೆ, ಲಕ್ಷ್ಮೀಪುತ್ರ ನಿಂಬಾಳ್ಕರ, ರವಿ ನಾವದ್ಗೇಕರ, ಸಚೀನ ಗರುಡಕರ್, ವಿನೋದ ಬಡಗೇಕರ್, ಸಂಜು ದುರ್ಗೇ, ನಾಗೇಶ ರಾಮಣ್ಣನವರ, ಶಾಂತಕುಮಾರ, ಸ್ವಾಮಿ, ಅವಿನಾಶ ಮಾಮಾ, ಗುರು ಪವಾಡೆ ಇನ್ನಿತರರು ಭಾಗಿಯಾದ್ದರು.




ಹುಮನಾಬಾದ: ತಾಲೂಕಿನ ಸಾಮಾಜಿಕ ವಲಯ ಅರಣ್ಯಧಿಕಾರಿಯಾಗಿ ಪ್ರಕಾಶ ನಿಪ್ಪಾಣಿ ಅವರು ಇತ್ತಿಚೆಗೆ ಅಧಿಕಾರ ವಹಿಸಿಕೊಂಡ ಪ್ರಯುಕ್ತ ಚಿಟಗುಪ್ಪ ಪಟ್ಟಣದ ಪರಿಸರವಾದಿ ಹಾಗೂ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಶಾಲು ಹೊದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತರು ಹಾಗೂ ಪರಿಸರವಾದಿ ಶೈಲೇಂದ್ರ ಕಾವಡಿ, ರಾಜಕುಮಾರ್ ಆರ್. ಹಡಪದ, ಮಲ್ಲಿಕಾರ್ಜುನ ರೆಡ್ಡಿ, ರೈಸ್ ಸಗರಿ ಯಾದಗಿರ ಸೇರಿದಂತೆ ಇತರರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ರಣೋತ್ಸವ ನಿಮಿತ್ಯ ಜ.11 ರಂದು ಧರ್ಮಸಭೆ ಹಾಗೂ ರೈತರಿಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಜ.11 ರಂದು ನಡೆಯಲಿರುವ ಖಟಕಚಿಂಚೋಳಿಯ ಶ್ರೀ ಬಸವಲಿಂಗ ಶಿವಾಚಾರ್ಯರ 75ನೇ ಸ್ಮರಣೋತ್ಸವ ಹಾಗು ಜಿಲ್ಲೆಯ ಪ್ರತಿಭಾವಂತ ರೈತರಾಗಿ ಶ್ರೀಮಠದಿಂದ ಆಯೋಜಿಸಿದ್ದ ವಿಶೇಷ ಸನ್ಮಾನ ಕಾರ್ಯಕ್ರಮಕ್ಕೆ ಖಟಕಚಿಂಚೋಳಿಯ ಹಿರೇಮಠ (ಹುಗ್ಗೆಳ್ಳಿ)ಸಂಸ್ಥಾನದ ಶ್ರೀ ಬಸವಲಿಂಗ ಮಹಾಸ್ವಾಮಿಗಳು,ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರಿಗೆ ಆವ್ಹಾನ ನೀಡಿದರು.

ಪಟ್ಟಣದ ಸಚಿವರ ನಿವಾಸದಲ್ಲಿ ಸಚಿವರಿಗೆ ಭೇಟಿಮಾಡಿ,ಆಮಂತ್ರಣ ಪತ್ರ ನೀಡುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರಿಗೆ ಆವ್ಹಾನಿಸಿದರು. ನಂತರ ಮಾತನಾಡಿದ ಶ್ರೀಗಳು, ಜ.11 ರಂದು ನಡೆಯಲಿರುವ ಶ್ರೀ ಬಸವಲಿಂಗ ಶಿವಾಚಾರ್ಯರ ಸ್ಮರಣೋತ್ಸವದ ನಿಮಿತ್ಯ ಬೆಳಿಗ್ಗೆ 8 ಗಂಟೆಗೆ ವಿಶೇಷ ಪೂಜೆ ಹಾಗೂ ರೈತರಿಗೆ ಸನ್ಮಾನ ಕಾರ್ಯಕ್ರಮಗಳು ನಡೆಯುವವು. ನಂತರ ನಡೆಯುವ ಧರ್ಮ ಸಮಾರಂಭದ ದಿವ್ಯ ಸಾನಿಧ್ಯ ಕಟ್ಟಿಮನಿ ಹಿರೇಮಠ ಸಂಸ್ಥಾನ ಹುಡಗಿಯ ಶ್ರೀ ವಿರೂಪಾಕ್ಷ ಶಿವಾಚಾರ್ಯರು ವಹಿಸಿಕೊಳ್ಳುವರು. ಕಲಬುರಗಿ ಪಾಳಾದ ಶ್ರೀ ಗುರುಮೂರ್ತಿ ಶಿವಾಚಾರ್ಯರು,ಸುಗುರಸುಂಠಾಣದ ಡಾ।ಚನ್ನರುದ್ರಮುನಿ ಶಿವಾಚಾರ್ಯರು, ಮೋಳಕೇರಾದ ಶ್ರೀ ಹೊನ್ನಲಿಂಗ ಮಹಾಸ್ವಾಮಿಗಳು, ಚಾಂಬೋಳದ ಅಭಿನವರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸುವರು. ಹಿರೇಮಠ (ಹುಗ್ಗೆಳ್ಳಿ) ಖಟಕಚಿಂಚೋಳಿಯ ಶ್ರೀ ಬಸವಲಿಂಗ ಮಹಾಸ್ವಾಮಿಗಳು ನೇತೃತ್ವ ವಹಿಸಿವರು. ಶ್ರೀಮಠದ ರುದ್ರಮುನಿ ದೇವರು, ವೀರಮಹಾಂತೇಶ್ವರ ಮಠದ ಶ್ರೀ ನೀಲಕಂಠ ಸ್ವಾಮಿಗಳು, ದತ್ತ ಆಶ್ರಮದ ಶ್ರೀ ರಾಮಕೃಷ್ಣ ಶರಣರ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸುವರು. ಕಾರ್ಯಕ್ರಮದಲ್ಲಿ ಸಂಸದ ಸಾಗರ ಖಂಡ್ರೆ, ಶಾಸಕರಾದ ಸಿದ್ದಲಿಂಗಪ್ಪ ಪಾಟೀಲ, ಡಾ। ಶೈಲೇಂದ್ರ ಬೆಲ್ದಾಳೆ, ವಿಧಾನಪರಿಷತ್ ಸದಸ್ಯ ಎಮ್.ಜಿ.ಮುಳೆ, ಮಾಜಿ ಶಾಸಕ ಸುಭಾಷ ಕಲ್ಲೂರ, ಗ್ರಾ.ಪಂ ಅಧ್ಯಕ್ಷೆ ಸಂಗೀತಾ ಅನೀಲಕುಮಾರ ಚಿಲಶೆಟ್ಟಿ, ಸಂಜೀವಕುಮಾರ ಜವಾದೆ,ಯೋಗೇಶ ಯದಲಾಪೂರೆ ಉಪಸ್ಥಿತರಿರುವರು. ಇದೇವೇಳೆ ಜಿಲ್ಲೆಯ ಉತ್ತಮ ರೈತರಾದ ವೀರಯ್ಯಾಸ್ವಾಮಿ ಗೌಡನಗುರು, ಕರಸಬಸಯ್ಯಾಸ್ವಾಮಿ ಶೇರಿಕರ, ನಾಗಶೆಟ್ಟಿ ಬೇಲೂರೆ, ಆನಂದಕುಮಾರ ಎಸ್ ಶಿವಮೂರ್ತಿ, ಶಿವಕುಮಾರ.ವಿ.ಸ್ವಾಮಿ,ಗುರುಲಿಂಗಯ್ಯಾ ಮಂಗಲಗಿ, ವಿರಶೆಟ್ಟಿ ಕಲ್ಲಾ,ನಾಗಶೆಟ್ಟಿ ಬಿರಾದಾರ, ಶರಣಪ್ಪ ಚಾಂಬಳೆ, ಬಂಡೆಪ್ಪ ಗಿರೆಪ್ಪನೋರ ರವರಿಗೆ ವಿಶೇಷ ಸನ್ಮಾನ ನಡೆಸಲಾಗುವುದು ಎಂದು ತಿಳಿಸಿದರು.

# ಕೇಂದ್ರೀಯ ವಿ..ವಿ ಯಲ್ಲಿ ಯು.ಜಿ.ಕೋರ್ಸ್‌ಗೆ ಅರ್ಜಿ ಆಹ್ವಾನ

## ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ 8 ರಷ್ಟು ಮೀಸಲಾತಿ ಕುಲಪತಿ:ಪ್ರೊ ಬಟ್ಟು

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ 2026 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಕೋರ್ಸ್ ಒಳಗೊಂಡಂತೆ 15 ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಿದ್ದು ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಶೇಕಡ 8 ರಷ್ಟು ಮೀಸಲಾತಿ ನೀಡಲಾಗುವುದು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದ್ದಾರೆ.ಕೇಂದ್ರೀಯ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಇದೇ ಜನವರಿ 3 ರಂದು ಕ್ರೇಡಿಟ್/ಡೆಬಿಟ್ ಕಾರ್ಡ/ನೆಟ್–ಬ್ಯಾಂಕಿಂಗ್/ಯುಪಿಐ ಮೂಲಕ ಯಶಸ್ವಿಯಾಗಿ ಪಾವತಿಸಬೇಕು. ಜನೆವರಿ 2026 ರ 31 ಆನ್‌ಲೈನ್ ಮೂಲಕವೇ ಶುಲ್ಕ ಪಾವತಿಸಲು ಕೊನೆ ದಿನವಾಗಿದೆ. ಫೆಬ್ರುವರಿ 2 ರಿಂದ ಫೆಬ್ರುವರಿ 4ರ ರಾತ್ರಿ 11.50 ಗಂಟೆಯವರೆಗೆ ಅರ್ಜಿಯಲ್ಲಿ ಏನಾದರೂ ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಎಂದರು ತಿಳಿಸಿದರು.

ಸ್ನಾತಕೋತ್ತರ ಕೋರ್ಸಗಳ ಪರೀಕ್ಷೆ ಯೋಜನೆ ಅರ್ಹತೆ ಇತರೆ ಮಾಹಿತಿಗಾಗಿ ಅಭ್ಯರ್ಥಿಗಳು ಎನ್.ಟಿ.ಎ(ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ) ವೆಬ್ ಸೈಟ್ CUET (UG) -2026( https://cuet.nta.nic.in/) ನಲ್ಲಿ ಪರೀಕ್ಷೆ ನಡೆಯುವ ಸ್ಥಳ, ದಿನಾಂಕ, ಪ್ರವೇಶ ಕಾರ್ಡ್, ಫಲಿತಾಂಶ ಎಲ್ಲವು ತಿಳಿಸಲಾಗುತ್ತದೆ. ಅಭ್ಯರ್ಥಿಗಳು ಕ್ರಿಯಾಶೀಲವಾಗಿ ವೀಕ್ಷಿಸಬೇಕು ಮತ್ತು ವೆಬ್ ಸೈಟ್ ನಲ್ಲಿ ಮಾತ್ರ ಅರ್ಜಿ ಸಲ್ಲಿಸಬಹುದು



ಬೇರೆ ಯಾವುದೇ ವಿಧಾನದಲ್ಲಿ ಅರ್ಜಿ ಸ್ವೀಕರಿಸುವುದಿಲ್ಲ ಎಂದು ಕುಲಪತಿಗಳು ಮಾಹಿತಿ ತಿಳಿಸಿದರು. ಪಿಯುಸಿ ಪರೀಕ್ಷೆ ಬರೆಯುತ್ತಿರುವಂತ ಅಭ್ಯರ್ಥಿಗಳು ಕೂಡ ಅಪ್ಲಿಕೇಶನ್ ಹಾಕಿ ಪ್ರವೇಶಾತಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುವುದು. ಮೇ ತಿಂಗಳಲ್ಲಿ ಪ್ರವೇಶಾತಿ ಪ್ರಕ್ರಿಯೆ ನಡೆಯಲಿದೆ. ಹೀಗಾಗಿ ಎನ್.ಎ.ಟಿ. ನಡೆಸುವ ಪ್ರವೇಶ ಪರೀಕ್ಷೆ ಬರೆಯಬಹುದಾಗಿದೆ ಎಂದು ಅವರು ತಿಳಿಸಿದರು.ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸಗಳಾದ ಬಿ.ಟೆಕ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಬಿ ಟೆಕ್ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್,(ಆರ್ಟಿಫಿಷಿಯಲ್ ಇಂಟಲಿಜನ್ಸ್ ಅಂಡ್ ಮಷೀನ್ ಲರ್ನಿಂಗ್) ಬಿ.ಟೆಕ್ ಗಣಿತ ಮತ್ತು ಕಂಪ್ಯೂಟಿಂಗ, ಬಿ.ಟೆಕ್ ಕಂಪ್ಯೂಟರ್ ಸೈನ್ಸ್, ಬಿ.ಎಸ್ಸಿ ಭೌತಶಾಸ್ತ್ರ, ಬಿ.ಎಸ್ಸಿ ರಾಸಾಯನಶಾಸ್ತ್ರ,ಬಿ.ಎಸ್ಸಿ ಭೂವಿಜ್ಞಾನ, ಬಿ.ಎಸ್ಸಿ ಮನೋವಿಜ್ಞಾನ, ಬಿಬಿಎ, ಸಮಾಜ ಕಾರ್ಯದಲ್ಲಿ ಪದವಿ (ಬಿ ಎಸ್ ಡಬ್ಲ್ಯೂ), ಬಿ.ಎ ಅರ್ಥಶಾಸ್ತ್ರ, ಬಿ.ಎ ಇತಿಹಾಸ, ಬಿ.ಎ ಇಂಗ್ಲಿಷ್ ,ಬಿ.ಎ ಎಲ್ ಎಲ್ ಬಿ (ಐದು ವರ್ಷದ ಇಂಟಿಗ್ರೇಟೆಡ್ ಪ್ರೋಗ್ರಾಮ್) (ಆನರ್ಸ್) CUET (UG) –2026 ಅನ್ನು 13 ಭಾರತೀಯ ಭಾಷೆಗಳಲ್ಲಿ ನಡೆಸಲಾಗುವುದು. ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸಲಾಗುತ್ತದೆ, 13 ಭಾರತೀಯ ಭಾಷೆಯಲ್ಲಿ (ಇಂಗ್ಲಿಷ್, ಹಿಂದಿ, ಬಂಗಾಳಿ, ಗುಜರಾತಿ, ಕನ್ನಡ, ಮಲಯಾಳಂ, ಮರಾಠಿ, ಓಡಿಯಾ, ಪಂಜಾಬಿ, ತಮಿಳು, ತೆಲುಗು, ಮತ್ತು ಉರ್ದು) ನಡೆಸಲಾಗುವುದು ಎಂದರು.

ಅರ್ಜಿ ಸಲ್ಲಿಸುವಲ್ಲಿ ಅಭ್ಯರ್ಥಿಗಳಿಗೆ ತೊಂದರೆ ಎದುರಾದರೆ 011–40759000 ಸಂಪರ್ಕಿಸಿ ಅಭ್ಯರ್ಥಿಗಳು CUET(UG)–2026ಗೆ " ಆನ್ ಲೈನ್ ಮೂಲಕ (https/cuet-ug@nta.ac.in)ವೆಬ್‌ಸೈಟ್‌ನಲ್ಲಿ ಅರ್ಜಿ ಅರ್ಜಿ ಸಲ್ಲಿಸಬಹುದು. ಕರ್ನಾಟಕದ 15 ಸ್ಥಳಗಳಲ್ಲಿ ಪ್ರವೇಶ ಪರೀಕ್ಷೆ ಬರೆಯಬಹುದಾಗಿದೆ.ಬೆಳಗಾವಿ, ಬಳ್ಳಾರಿ, ಕಲಬುರಗಿ, ಬೆಂಗಳೂರು, ಬೀದರ್, ದಾವಣಗೆರೆ, ಹಾಸನ್, ಹುಬ್ಬಳ್ಳಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ, ಧಾರವಾಡ ಮತ್ತು ಮಂಗಳೂರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ ಅವರು ಸಿಯುಕೆ ಶೈಕ್ಷಣಿಕ ಸಾಧನೆ ಮತ್ತು ಪ್ರಗತಿಯ ಬಗ್ಗೆ ವಿವರಣೆ ನೀಡಿದರು. ಪರೀಕ್ಷಾ ನಿಯಂತ್ರಣಾಧಿಕಾರಿ ಕೋಟಾಸಾಯಿ ಕೃಷ್ಣಾ, ಪ್ರೊ.ಹನುಮೇಗೌಡ, ಪ್ರೊ. ಹೆಗಡೆ, ಸಹಾಯಕ ಸಂಪರ್ಕಾಧಿಕಾರಿ ಪ್ರಕಾಶ ಬಾಳಿಕಾಯಿ, ಡಾ. ಟಿ.ಎಸ್. ಕಟ್ಟಿಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ಗ್ರಂಥಾಲಯಕ್ಕೆ ಹೈಟೆಕ್ ಸ್ಮಾರ್ಟ್ ತಂತ್ರಜ್ಞಾನ.:-**

ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯದ ಗ್ರಂಥಾಲಯವು ಕೇವಲ ಪುಸ್ತಕಗಳ ಸಂಗ್ರಹವಲ್ಲ, ಆಧುನಿಕ ತಂತ್ರಜ್ಞಾನದ ಆಗರವಾಗಿದೆ. ಪುಸ್ತಕಗಳ ಭಂಡಾರ 85,000ಕ್ಕೂ ಹೆಚ್ಚು ಭೌತಿಕ ಪುಸ್ತಕಗಳಿವೆ. ರಾಷ್ಟ್ರೀಯ ಡಿಜಿಟಲ್ ಲೈಬ್ರರಿ ಮೂಲಕ 4.5 ಮಿಲಿಯನ್ ಇ–ಪುಸ್ತಕಗಳ ಬೃಹತ್ ಸಂಗ್ರಹವನ್ನು ಪಡೆಯಲು ಐಐಟಿ ಖರಗ್‌ಪುರ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಏಕಕಾಲದಲ್ಲಿ ಕುಳಿತು ಓದಬಹುದಾದ ವ್ಯವಸ್ಥೆ ಹೊಂದಿದೆ.ಪ್ರತಿವರ್ಷ ಅತಿ ಹೆಚ್ಚು ಗ್ರಂಥಾಲಯ ಬಳಸುವವರಿಗೆ 'ಬೆಸ್ಟ್ ಲೈಬ್ರರಿ ಯೂಸರ್ ಅವಾರ್ಡ್' ನೀಡುತ್ತಿದೆ. ಕರ್ನಾಟಕದ ಮೊದಲ 'ಕಂಪ್ಲೀಟ್ಲಿ ಆಟೋಮೇಟೆಡ್ ಲೈಬ್ರರಿ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಕೇಂದ್ರವು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳ ಯಶಸ್ಸಿಗೆ ಭದ್ರ ಬುನಾದಿಯಾಗಿದೆ ಎಂದು ಮುಖ್ಯ ಗ್ರಂಥಪಾಲಕರಾದ ಡಾ. ಪಿ.ಎಸ್. ಕಟ್ಟಿಮನಿ ಗ್ರಂಥಾಲಯದ ವಿಶೇಷತೆಗಳ ಕುರಿತು ಮಾಧ್ಯಮಗಳೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ.

# ಉತ್ತಮ ಆರೋಗ್ಯಕ್ಕಾಗಿ ಕುಸುಬೆ ಎಣ್ಣೆಕಾಳು ಬೆಳೆ

## ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಪ್ರಾತ್ಯಕ್ಷಿಕೆ

**ಮಲ್ಲಮ್ಮ ನುಡಿ ವಾರ್ತೆ**

**ಕೊಪ್ಪಳ :** ಉತ್ತಮ ಆರೋಗ್ಯಕ್ಕಾಗಿ ಕುಸುಬೆ ಎಣ್ಣೆಕಾಳು ಬೆಳೆಯಾಗಿದ್ದು, ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಪ್ರಾತ್ಯಕ್ಷಿಕೆಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗಿದೆ.

ಕುಸುಬೆ ನಮ್ಮ ರಾಜ್ಯದ ಒಂದು ಪ್ರಮುಖ ಎಣ್ಣೆಕಾಳು ಬೆಳೆಯಾಗಿದೆ. ನೆಲಗಡಲೆ ಹಾಗೂ ಸೂರ್ಯಕಾಂತಿ ನಂತರ ಹಿಂಗಾರಿನಲ್ಲಿ ಬರುವ ಮುಖ್ಯ ಎಣ್ಣೆಕಾಳು ಬೆಳೆ ಎಂದರೆ ಕುಸುಬೆ. ಈ ಬೆಳೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಆಳವಾದ ಕಪ್ಪುಮಣ್ಣಿನಲ್ಲಿ ಬೆಳೆಯಲು ಸೂಕ್ತವಾಗಿದ್ದು, ಕಡಿಮೆ ಅವಧಿಯಲ್ಲಿ ಉತ್ತಮ ಆದಾಯ ಕೊಡುವ ಬೆಳೆಯಾಗಿದೆ.

ಗುಜರಾತ, ಮಹಾರಾಷ್ಟ್ರ, ಬಿಹಾರ ರಾಜ್ಯಗಳಲ್ಲಿ ಕರಾಡಿ ಎಂಬ ಹೆಸರಿನಲ್ಲಿ ಈ ಬೆಳೆ ಖ್ಯಾತಿ ಹೊಂದಿದೆ. ಸೂರ್ಯಕಾಂತಿ ಎಣ್ಣೆಕ್ಕಿಂತಲೂ ಆರೋಗ್ಯಕ್ಕೆ ಅದರಲ್ಲೂ, ಹೃದಯ ಸಂಬಂಧಿ ಆರೋಗ್ಯಕ್ಕೆ ಕುಸುಬೆ ಎಣ್ಣೆ ಅತ್ಯುತ್ತಮವಾಗಿದೆ. ಕುಸುಬೆ ಹಿಂಡಿಯು ಕೂಡ ಜಾನುವಾರುಗಳಿಗೆ ಪ್ರಯೋಜನಕಾರಿಯಾಗಿದೆ. ಮಳೆಯ ಆಶ್ರಯದಲ್ಲಿ ಉತ್ತಮವಾಗಿ ಬರುವ ಈ ಬೆಳೆ ನೀರಾವರಿ ಇದ್ದಲ್ಲಿ ಉತ್ತಮ



ನಿರ್ವಹಣೆಯೊಂದಿಗೆ ಹೆಚ್ಚಿನ ಲಾಭಕೊಡಬಲ್ಲದು. ಮಳೆಆಶ್ರಯದಲ್ಲಿ ಕಡಿಮೆ ಗೊಬ್ಬರಗಳ ಬಳಕೆಯಲ್ಲಿ, ಕಡಿಮೆ ಖರ್ಚಿನಲ್ಲಿ ಈ ಬೆಳೆಯನ್ನು ಬೆಳೆಯಬಹುದಾಗಿದೆ. ಕೊಪ್ಪಳ ಜಿಲ್ಲೆಯಾದ್ಯಂತ ಸುಮಾರು 3000 ಎಕರೆ ಪ್ರದೇಶದಲ್ಲಿ ಕುಸುಬೆಯನ್ನು ಬೆಳೆಯಲಾಗುತ್ತಿದ್ದು, ಕುಕನೂರು ತಾಲೂಕಿನಲ್ಲಿ ಸುಮಾರು 1000 ಎಕರೆಯಷ್ಟು ಪ್ರದೇಶದಲ್ಲಿ ಎರೆ ಭೂಮಿಯಲ್ಲಿ ಬೆಳೆಯಲಾಗುತ್ತಿದೆ. ಈ ನಿಟ್ಟಿನಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ,ಕೊಪ್ಪಳದಿಂದ ಆಯ್ದ ರೈತರಿಗೆ ಕುಸುಬೆ ಬೆಳೆ (ತಳಿ :ಐ.ಎಸ್.ಎಫ್. 764) ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಎರೆಹಂಚಿನಾಳ ಹಾಗೂ ಮಾದಿನೂರು ಗ್ರಾಮಗಳಲ್ಲಿ ಹಮ್ಮಿಕೊಳ್ಳಾಗಿದ್ದು, ರೈತರಿಂದ ಉತ್ತಮ ಪ್ರತಿಕ್ರಿಯೆ ಬಂದಿರುತ್ತದೆ.

ಎಕರೆಗೆ ಬೀಜ ಪ್ರಮಾಣ 3 ರಿಂದ 4 ಕಿಲೋ ಗ್ರಾಂ. ಇದ್ದು, ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15ನೇ ತಾರೀಖಿನವರೆಗೂ ಬೀಜ ಬಿತ್ತನೆ ಮಾಡುವುದು ಸೂಕ್ತ. ಎಕರೆಗೆ 16 ಕೆ.ಜಿ. ಸಾರಜನಕ, 16 ಕೆ.ಜಿ. ರಂಜಕ ಹಾಗೂ 5 ಕೆ.ಜಿ. ಪೊಟ್ಯಾಶ್ ರಾಸಾಯನಿಕ ಗೊಬ್ಬರಗಳ ಜೊತೆಗೆ 10 ಕೆ.ಜಿ. ಗಂಧಕ ಮತ್ತು 6 ಕೇ.ಜಿ. ಎಷ್ಟು ಸತು ಒದಗಿಸಿದರೆ ಉತ್ತಮ ಫಸಲು ಪಡೆಯುವ ಸಾಧ್ಯತೆ ಇರುತ್ತದೆ. ಗಂಧಕವನ್ನು ಜಿಪ್ಸಂ ರೂಪದಲ್ಲಿ ಕಡಿಮೆ ಖರ್ಚಿನಲ್ಲಿ ಕೊಡಬಹುದಾಗಿದೆ. ಬೀಜೋಪಚಾರವಾಗಿ ಒಂದು ಎಕರೆ ಬಿತ್ತನೆ ಬೀಜಕ್ಕೆ 200 ಗ್ರಾಂ. ಅಜೋಸ್ಪಿರಿಲಂ ಬಳಸುವುದು ಸೂಕ್ತ. ಇದಕ್ಕೆ ಪೂರ್ವದಲ್ಲಿ ಬೀಜಗಳನ್ನು ಶೇಕಡ 2ರ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ 12 ಗಂಟೆಗಳ ಕಾಲ ನೆನೆಸಿ ಬಿತ್ತನೆ ಮಾಡುವುದು ಸೂಕ್ತ. ಸಾಲಿನಿಂದ ಸಾಲಿಗೆ 45 ಸೆಂಟಿಮೀಟರ್ ಮತ್ತು ಬೀಜದಿಂದ ಬೀಜಕ್ಕೆ 30 ಸೆಂಟಿಮೀಟರ್ ಅಂತರದಲ್ಲಿ ಜೋಡು ಸಾಲು ಮಾಡಿ ಬಿತ್ತುವುದು ಉತ್ತಮ. ತಳಿಗಳನ್ನು ಆಧರಿಸಿ 120 ರಿಂದ 130 ದಿನಗಳಲ್ಲಿ ಕಟಾವಿಗೆ ಬರುವ ಕುಸುಬೆ ಬೆಳೆ ಒಂದು ಲಾಭದಾಯಕ ಮಳೆಯಾಶ್ರಿತ ಬೆಳೆಯಾಗಿದೆ. ಎಕರೆಗೆ 3 ರಿಂದ 5 ಕ್ವಿಂಟಲ್ ಇಳುವರಿ ಪಡೆಯಬಹುದಾಗಿದ್ದು, ಸದ್ಯದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ 8600 ರೂ. ಇರುತ್ತದೆ.

*ಪ್ರಮುಖ ಕೀಟಗಳು:* ಕರಿ ಹೇನು– ಇದರ ಹತೋಟಿಗಾಗಿ ಡೈಮೆಥೊಯೇಟ್ 30 ಈ.ಸಿ ಎನ್ನುವ ಕೀಟನಾಶಕವನ್ನು 1.7 ಮಿ.ಲಿ. ಪ್ರತಿ ಲೀಟರ್ ನೀರಿಗೆ ಬಳಸಿ ಸಿಂಪಡಿಸಬೇಕು. ಎಲೆ ತಿನ್ನುವ ಕೀಟ ಕಾಣಿಸಿದಲ್ಲಿ ಕ್ವಿನಾಲ್ಫಾಸ್ 25 ಇ.ಸಿ. ಅಥವಾ ಇಮಾಮ್ಯಾಕ್ಟಿನ್ ಬೆಂಝೋಯೇಟ್ ಎನ್ನುವ ಕೀಟನಾಶಕವನ್ನು 0.40 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಪ್ರಮುಖ ರೋಗಗಳಾದ ಎಲೆ ಮಚ್ಚೆ ಮತ್ತು ಎಲೆ ಚುಕ್ಕಿ ರೋಗಗಳು ಕಂಡುಬಂದಲ್ಲಿ ಮ್ಯಾಂಕೋಜೆಮ್ 75 ಡಬ್ಲೂ. ಪಿ. 2 ಗ್ರಾಂ ಅಥವಾ ಸಾಫ್ ಎನ್ನುವ ಸಂಯುಕ್ತ ಶಿಲೀಂದ್ರ ನಾಶಕವನ್ನು 2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಹೆಚ್ಚಿನ ನಿರ್ವಹಣೆ ಇಲ್ಲದ ಈ ಬೆಳೆ ಬೇಸಿಗೆ ಹಂಗಾಮಿನಲ್ಲಿ, ಮಳೆಯಾಶ್ರಯದಲ್ಲಿ ಉತ್ತಮ ಲಾಭದಾಯಕ ಬೆಳೆಯಾಗಿದ್ದು, ರೈತರು ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳಾದ ವಿಸ್ತರಣಾ ಮುಂದಾಳು ಡಾ. ಎಂ.ವಿ.ರವಿ ಮೊ.ನಂ. 9480247745 ಮತ್ತು ಸಹಾಯಕಪ್ರಾಧ್ಯಾಪಕವಾಮನಮೂರ್ತಿ ಮೊ.ನಂ. 8217696837, ಇವರನ್ನು ಸಂಪರ್ಕಿಸಬಹುದು.

# 110 ಕೆ.ವಿ. ವಿದ್ಯುತ್ ಘಟಕ ಸ್ಥಾಪನೆಗೆ ಜಿಲ್ಲಾಧಿಕಾರಿಗಳಿಂದ ಸ್ಥಳ ಪರಿಶೀಲನೆ



**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ತಾಲೂಕಿನ ಚಾಂಗಲೇರಾ ಗ್ರಾಮದಲ್ಲಿ 110ಕೆ.ವಿ ಸಾಮರ್ಥ್ಯದ ವಿದ್ಯುತ್ ಘಟಕ ಸ್ಥಾಪನೆಗೆ ಸ್ಥಳ ಮಂಜೂರು ಮಾಡಲು ಬೀದರ್ ಜಿಲ್ಲಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶಿಷರೆಡ್ಡಿ ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಮಂಜುನಾಥ್ ಪಂಚಾಳ, ವಲಯ ಅರಣ್ಯಾಧಿಕಾರಿ ಶ್ರೀಕಾಂತ ರಾಠೋಡ, ಸೇರಿದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಭಾರತ ರಂಗ ಮಹೋತ್ಸವ ಹಾಗೂ ರಂಗ ಪರಿಷೆ

## ರಂಗಾಸಕ್ತರು ತಮ್ಮ ತಂಡಗಳ ವಿವರಗಳನ್ನು ಕಳುಹಿಸಲು ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕರ್ನಾಟಕ ನಾಟಕ ಅಕಾಡೆಮಿ ಹಾಗೂ ರಾಷ್ಟ್ರೀಯ ನಾಟಕ ಶಾಲೆ ದೆಹಲಿ ಇವರ ಸಹಯೋಗದೊಂದಿಗೆ "ಭಾರತ ರಂಗ ಮಹೋತ್ಸವ" ಹಾಗೂ "ರಂಗ ಪರಿಷೆ" ವಿಶೇಷ ರಂಗ ಉತ್ಸವವನ್ನು 2026ರ ಫೆಬ್ರವರಿ 1 ರಿಂದ 6ರವರೆಗೆ ಬೆಂಗಳೂರಿನ ಕಲಾಗ್ರಾಮದಲ್ಲಿ ಆಯೋಜಿಸಲಾಗುತ್ತಿದ್ದು, ರಂಗ ಗೌರವಕ್ಕೆ ಆಯ್ಕೆ ಮಾಡಿದ ರಂಗ ತಂಡಗಳಿಗೆ ಈ ಉತ್ಸವದಲ್ಲಿ ಗೌರವಿಸಲಾಗುತ್ತಿದ್ದು, ರಂಗಾಸಕ್ತರು ತಮ್ಮ ತಂಡಗಳ ವಿವರಗಳನ್ನು ನೀಡಬೇಕೆಂದು ಎಂದು ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಹಾಗೂ ಕಲಬುರಗಿ ರಂಗಾಯಣ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿರುವ, 40ಕ್ಕೂ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ಹಾಗೂ ಇಂದಿಗೂ ಸಹ ಕ್ರಿಯಾಶೀಲವಾಗಿರುವ, ವರ್ಷಕ್ಕೆ ಕನಿಷ್ಠ 4 ನಾಟಕ ಪ್ರದರ್ಶನಗಳನ್ನು ಈಗಲೂ ನೀಡುತ್ತಿರುವ ತಂಡಗಳನ್ನು ಗೌರವಿಸುವ ಕೆಲಸವನ್ನು ಅಕಾಡೆಮಿಯು ಈ ಉತ್ಸವದಲ್ಲಿ ಮಾಡುತ್ತಿದೆ. 40 ವರ್ಷ ಸೇವೆ ಸಲ್ಲಿಸಿರುವ ಬೆಂಗಳೂರೇತರ ರಂಗ ತಂಡಗಳು ದಯಮಾಡಿ ತಮ್ಮ ತಂಡಗಳ ವಿವರಗಳನ್ನು ಶೀಘ್ರವೇ ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002 (ದೂರವಾಣಿ 080–22237484 / 22244176 ) ವಿಳಾಸಕ್ಕೆ ಕಳುಹಿಸಬೇಕು. ಈ ಉತ್ಸವದಲ್ಲಿ ರಂಗ ಗೌರವಕ್ಕೆ ಆಯ್ಕೆ ಮಾಡಿದ ರಂಗ ತಂಡಗಳಿಗೆ ಊಟ ಮತ್ತು ವಸತಿ ನೀಡಿ, ಅವರ ಪ್ರದರ್ಶನಗಳ ಜೊತೆಗೆ ಗೌರವಿಸಲಾಗುತ್ತದೆ.

# ಮುಂದುವರೆದ ಶಾಸಕ ಪ್ರಭು ಚವ್ಹಾಣ ಗ್ರಾಮ ಸಂಚಾರ

## ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಸೂಚನೆ



• **ಮಲ್ಲಮ್ಮ ನುಡಿ ವಾರ್ತೆ ಜಂಬಗಿ**

ಎಲ್ಲ ಸರ್ಕಾರಿ ಶಾಲೆಗಳಿಗೆ ಒಳ್ಳೆಯ ಕಟ್ಟಡ ಮತ್ತು ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ಕಲ್ಪಿಸಲು ಪ್ರಯತ್ನಿಸುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಶಾಲೆಯ ಶಿಕ್ಷಕರು ಮತ್ತು ಇಲಾಖೆಯ ಅಧಿಕಾರಿಗಳು ಶ್ರಮಿಸಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಶಾಲೆಯ ಮುಖ್ಯಗುರುಗಳು ಮತ್ತು ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಸಂಚಾರದ ನಿಮಿತ್ತ ಜ.8ರಂದು ವಡಗಾಂವ ಹೋಬಳಿ ವ್ಯಾಪ್ತಿಯ ಖಾಶೆಂಪೂರ(ಬಿ), ಜಂಬಗಿ, ಮಹಾರಾಜವಾಡಿ, ಸೋರಳ್ಳಿ ಸೇರಿದಂತೆ ವಿವಿಧ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಎಲ್ಲ ಶಿಕ್ಷಕರು ಪ್ರತಿದಿನ ಬರುತ್ತಾರಾ ಎಲ್ಲ ತರಗತಿಗಳು ಸರಿಯಾಗಿ ನಡೆಯುತ್ತವೆಯೇ ಎಲ್ಲರೂ ಸರಿಯಾಗಿ ಪಾಠ ಮಾಡುತ್ತಾರಾ ಶಾಲೆಯಲ್ಲಿ ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ, ಮಧ್ಯಾಹ್ನದ ಬಿಸಿಯೂಟ ಸರಿಯಾಗಿ ಮಾಡುತ್ತಿದ್ದಾರಾ ? ಎಂದು ಮಕ್ಕಳಿಗೆ ವಿವಿಧ ಪ್ರಶ್ನೆಗಳನ್ನು ಕೇಳಿ ಸರ್ಕಾರಿ ಶಾಲೆಗಳ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು.ಖಾಶೆಂಪೂರ ಹಾಗೂ ಕೆಲವೊಂದು ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಿರುವುದನ್ನು ಗಮನಿಸಿ, ಮುಖ್ಯಗುರುಗಳಿಂದ ವಿವರಣೆ ಪಡೆದರು. ಮಕ್ಕಳ ಸಂಖ್ಯೆ ಕಡಿಮೆಯಿರುವ ಶಾಲೆಗಳನ್ನು ರಾಜ್ಯ ಸರ್ಕಾರ ಮುಚ್ಚಲು ಹೊರಟಿದೆ. ಶಾಲೆ ಮುಚ್ಚಿದರೆ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರಿಗೂ ತೊಂದರೆ–ಯಾಗುತ್ತದೆ. ಹಾಗಾಗಿ ಎಲ್ಲ ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ದಾಖಲಾತಿ ಹೆಚ್ಚಿಸಬೇಕು. ಇದಕ್ಕಾಗಿ ಶಿಕ್ಷಕರು ಗ್ರಾಮದ ಪ್ರತಿ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸುವ ಕೆಲಸ ಮಾಡಬೇಕೆಂದು ಹೇಳಿದರು.

ಸರ್ಕಾರಿ ಶಾಲೆಗಳಿಗೆ ಉತ್ತಮ ಕಟ್ಟಡಗಳು, ಮೂಲಸೌಕರ್ಯ, ಸ್ಮಾರ್ಟ್ ತರಗತಿಗಳು, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ, ವಿದ್ಯಾರ್ಥಿವೇತನ ಸೇರಿದಂತೆ ಹಲವು ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಬಡ ಮತ್ತು ಮಧ್ಯಮ ವರ್ಗದವರು ಖಾಸಗಿ ಶಾಲೆಗಳಿಗೆ ಲಕ್ಷಾಂತರ ಖರ್ಚು ಮಾಡುವ ಬದಲು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಬೇಕೆಂದು ಮನವಿ ಮಾಡಿದರು. ಎಲ್ಲ ಬೇಡಿಕೆಗಳನ್ನು ಆದ್ಯತೆಗೆ ಅನುಗುಣ ಈಡೇರಿಸುವುದಾಗಿ ಶಾಸಕರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಿಸಿ ರಸ್ತೆ, ಶಾಲೆ ಉನ್ನತೀಕರಣ ಕಾಮಗಾರಿ, ಹೈ ಮಾಸ್ಟ್ ವಿದ್ಯುತ್ ದೀಪ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಹೇಶ ಪಾಟೀಲ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಾಯತ್ರಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇಮಲಪ್ಪ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಮಾರುತಿ ರಾಠೋಡ, ಎಡಿಎಲ್‌ಆರ್ ರಾಜಶ್ರೀ, ಜೆಸ್ಕಾಂ ಎಇಇ ರವಿ ಕಾರಬಾರಿ, ಸಣ್ಣ ನೀರಾವರಿ ಇಲಾಖೆಯ ಸಂಗಮೇಶ ಖಳೂರೆ, ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಸಚಿನ ರಾಠೋಡ, ಖಂಡೋಬಾ ಕಂಗಟೆ, ಪ್ರಕಾಶ ಮೇತ್ರೆ, ಶಿವರಾಜ ಖಳೂರೆ, ಮಲ್ಲಪ್ಪ ನೇಳಗೆ, ಪ್ರಕಾಶ ಜೀರ್ಗೆ, ನೌನಾಥ, ಸಂದೀಪ ಪಾಟೀಲ, ಪ್ರದೀಪ ಪವಾರ, ಬಾಬುರಾವ ಮಸ್ಕಲೆ, ಅರವಿಂದ ಟೋಣಪೆ, ಪ್ರಕಾಶ ಖಾನಾಪೂರ, ವಿಜಯ ನಾಗೂರ, ಮಂಜು ಸ್ವಾಮಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**IN THE COURT OF THE ADDL CIVIL JUDGE & J.M.F.C AT BASAVAKALYAN**

**CRl. Misc. No. 2382/2025**

**Petitioner :**

**Shivasharanappa and others**

// Versus//

**Respondent:**

**The Tahasildar, Basavakalyan,**

**Sub: Claim: Fore Issue Of Death Certificate.**

**Petition U/Sec. 13(3) Of Birth and Death Registration Act. 1969**

**PAPER PUBLICATION**

Whereas the above named petitioner has field petition under section 13(3) of Birth & Death Registration Act 1969 for issue the direction to respondent to give death certificate of petitioner sister in law by name " By name " Eramma w/o Siddanna Akka who was died on 23/ 05/ 2020 in her house at village kohinoor, Tq, Basavakalyan, Dist. Bidar.

Hence this paper publication is issued to all concerned person to File necessary Objection If any on 07/02/ 2026 at 11.00. A.M.

**Given under my hand seal of of the court on this 30/12/2025**

/ By order Of the Court //

Chief Ministerial Officer

Civil Judge & JMFC Basavakalyan.

**IN THE COURT OF THE PRL CIVIL JUDGE & J.M.F.C AT BASAVAKALYAN**

**CRl. Misc. No. 1433/2025**

**Petitioner:**

**Mehmunna Begum and others**

// Versus//

**Respondent:**

**The Commissioner CMC, Basavakalyan,**

**Sub: Claim: Fore Issue Of Death Certificate.**

**Petition U/Sec. 13(3) Of Birth and Death Registration Act. 1969**

**PAPER PUBLICATION**

Whereas the above named petitioner has field petition under section 13(3) of Birth & Death Registration Act 1969 for issue the direction to respondent to give death certificate of petitioner No. 1 Husband by name " Mastan sab s/o Mehaboob sab who was died on 27/ 09/ 2007 in his house at village Shahapur Galli Basavakalyan, Tq, Basavakalyan, Dist. Bidar.

Hence this paper publication is issued to all concerned person to File necessary Objection If any on 09/02/ 2026 at 11.00. A.M.

**Given under my hand seal of of the court on this 09/1/2026**

**// By order Of the Court //**

Chief Ministerial Officer

PRL Civil Judge & JMFC court Basavakalyan.

# ಸಾಮಾನ್ಯ ಸದಸ್ಯರ ಕ್ಲಸ್ಟರ್ ತರಬೇತಿ ಕಾರ್ಯಕ್ರಮ

ವರದಿ: ಡಿ.ಕೆ ದೇವಿಂದ್ರ ಯಾದಗಿರಿ.

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಹಾಗೂ ಯಾದಗಿರಿ ಜಿಲ್ಲಾ ಸಹಕಾರ ಯೂನಿಯನ್ ಯಾದಗಿರಿ ಹಾಗೂ ಸಹಕಾರ ಇಲಾಖೆ ಯಾದಗಿರಿ ಹಾಗೂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಹಾಗೂ ನಿವೃತ್ತ ನೌಕರರ ಸಂಘ ಶಹಾಪುರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ಶಾಹಪುರ ಇವರುಗಳ ಸಂಯುಕ್ತಾ ಆಶ್ರಯದಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸಸಿಗೆ ನೀರು ಹಾಕುವುದರ ಮುಖಾಂತರ ಚಾಲನೆ ನೀಡಿ ನಮ್ಮ ಒಕ್ಕೂಟದ ಸದಸ್ಯತ್ವ ಪಡೆದುಕೊಂಡು ನಮ್ಮ ಒಕ್ಕೂಟದ ಮೂಲಕ ತರಬೇತಿಯಲ್ಲಿ ಭಾಗವಹಿಸಿ, ಸಹಕಾರ ಸಂಘಗಳ ಬಗ್ಗೆ ಹಾಗೂ ಒಕ್ಕೂಟದ ಸದಸ್ಯತ್ವ ಪಡೆಯಲಾರದೆ ಇರುವಂತಹ ಸರಕಾರ ಸಂಘಗಳು ಸದಸ್ಯತ್ವವನ್ನು ಪಡೆದು ಪ್ರವರ್ಧನೆ ಮಾಡಬೇಕೆಂದು ಹಾಗೂ ನಮ್ಮ ಒಕ್ಕೂಟದ ಜಿಲ್ಲಾ ಮಟ್ಟದ ರಾಜ್ಯಮಟ್ಟದ ಕ್ಲಸ್ಟರ್ ತರಬೇತಿಯಲ್ಲಿ ಭಾಗವಹಿಸಿ, ಅದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಎಂ ನಾರಾಯಣ ಉಪಾಧ್ಯಕ್ಷರು ಜಿಲ್ಲಾ ಸಹಕಾರ ಒಕ್ಕೂಟ ಯಾದಗಿರಿ ಇವರು ಸಲಹೆ ನೀಡಿದರು. 27 ವಾರ್ಷಿಕ ಸಾಮಾನ್ಯ ಸಭೆಯ ಜರುಗಿಸುವ ಬಗ್ಗೆ ಹಾಗೂ ಸಭೆಗಳ ಕುರಿತು ಹಾಗೂ ಸಾಮಾನ್ಯ ಸದಸ್ಯರ ಹಕ್ಕು ಕರ್ತವ್ಯ ಯಶಸ್ವಿನಿ ಯೋಜನೆ ಬಗ್ಗೆ ಪ್ರಶಾಂತ್ ಕುಮಾರ ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿಗಳು ಯಾದಗಿರಿ ವಿಶೇಷ ಉಪನ್ಯಾಸ ನೀಡಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೇಖರಪ್ಪ, ಉಪಾಧ್ಯಕ್ಷ ನಿವೃತ್ತ ನೌಕರರ ಸಂಘ ಶಹಾಪುರ ಇವರು ವಹಿಸಿದ್ದರು, ಮುಖ್ಯ ಅತಿಥಿಗಳಾದ ಸಹಕಾರ ಸಂಘದಲ್ಲಿ ಸದಸ್ಯರಾದ ಸದಸ್ಯರುಗಳಾದ ನಾವು ಸಹಕಾರ ಸಂಘದ ಬಗ್ಗೆ ತರಬೇತಿ ಪಡೆಯುವುದು ನಮ್ಮೆಲ್ಲರ ಕರ್ತವ್ಯ ಎಂದು ರವೀಂದ್ರನಾಥ್ ಪತ್ತಾರ್ ಹೇಳಿದರು, ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಡಾ. ಶಂಕರಗೌಡ ಯಕ್ಷಂತಿ ಇವರು ಸರ್ವರನ್ನ ಸ್ವಾಗತಿಸಿದರು ಹಾಗೂ ಕಾರ್ಯಕ್ರಮದ ನಿರೂಪಣೆ, ವಂದನಾರ್ಪಣೆಯನ್ನು ಶ್ರೀಮತಿ ಸುಜಾತ ಮಠ ಜಿಲ್ಲಾ ಸಹಕಾರ ಶಿಕ್ಷಕರು ನೆರವೇರಿಸಿದರು.

# ಹೆಚ್ಚುತ್ತಿರುವ ಕಳ್ಳತನ ತಡೆಗೆ ಆಗ್ರ : ಅಬ್ದುಲ್ ಚಿಗಾನೂರ

ವರದಿ: ಡಿ.ಕೆ ದೇವಿಂದ್ರ ಯಾದಗಿರಿ.



- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ವಡಗೇರಾ ತಾಲೂಕಿನ ಗೊಂದೆನೂರ,ತುಮಕೂರು, ಕೊಂಕಲ್,ಹಯ್ಯಾಳ, ವಡಗೇರಾ ಪಟ್ಟಣ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಕಳ್ಳತನ ಹೆಚ್ಚಳ ಕಳ್ಳತನ ತಡೆದು ಕಠಿಣ ಕಾನೂನು ಕ್ರಮಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಹಯ್ಯಾಳ (ಬಿ) ಗ್ರಾಮದಲ್ಲಿನ ಸುಕ್ಷೇತ್ರ ಹಯ್ಯಾಲಿಂಗೇಶ್ವರ ದೇವಸ್ಥಾನದಲ್ಲಿ ಬುಧವಾರ ಬೆಳಗ್ಗೆ 3 ಗಂಟೆ ಸುಮಾರಿಗೆ ದೇವಸ್ಥಾನದ ಒಳಗಡೆ ಇರುವ ಕಾಣಿಕೆ ಪೆಟ್ಟಿಗೆ (ಹುಂಡಿ) ಯನ್ನು ಇಬ್ಬರು ಅಪರಿಚಿತ ವ್ಯಕ್ತಿಗಳು ಬೈಕ್ ನಲ್ಲಿ ಬಂದು ಹುಂಡಿಯನ್ನು ತೆಗೆದುಕೊಂಡು ಹೋಗಲು ಪ್ರಯತ್ನಿಸಿದಾಗ ಗ್ರಾಮದ ನಿಂಗಪ್ಪ ನಾಗರಾಳ ಎಂಬ ವ್ಯಕ್ತಿ ನೋಡಿದ ತಕ್ಷಣವೇ ಎದರಿ ಆ ಇಬ್ಬರು ಕಳ್ಳರು ಹುಂಡಿಯನ್ನು ಅಲ್ಲಿಯೇ ಬಿಟ್ಟು ಬೈಕ್ ಮೂಲಕ ಪರಾರಿಯಾಗಿದ್ದಾರೆ.

ಇತ್ತೀಚಿಗೆ ಕೊಂಕಲ್ ಗ್ರಾಮದ ನಿವಾಸಿ ಮಹಾದೇವಪ್ಪ ಹಳಿಮನಿ ಎಂಬುವರ ಮನೆಯಲ್ಲಿ ಮನೆ ತ್ರಿಜೇರಿ ಮುರಿದು ಕಳ್ಳರು 2 ಲಕ್ಷ ನಗದು ಹಣವನ್ನು ದೋಚಿಕೊಂಡು ಹೋಗಿದ್ದಾರೆ.

ಅದೇ ರೀತಿ ಕೆಲವು ದಿನಗಳ ಹಿಂದಿನಿಂದಲೂ ತಾಲೂಕಿನಲ್ಲಿ ಮನೆಗಳತನ ದೇವಸ್ಥಾನದಲ್ಲಿನ ಮೂರ್ತಿಗಳು ಹುಂಡಿಗಳು, ಅಂಗಡಿಯಲ್ಲಿನ ಹಣ, ಬಂಗಾರದ ಆಭರಣಗಳು, ಗೋವುಗಳು,ಕುರಿಗಳು ಟ್ರ್ಯಾಕ್ಟರ್, ಬೈಕ್, ಹತ್ತಿ, ನೀರೆತ್ತುವ ಮೋಟಾರ್ ಪಂಪ್ಸೆಟ್ ,ಕಳ್ಳತನಗಳು ಹೆಗ್ಗಿಲದ ನಡೆಯುತ್ತಿವೆ ಇದಕ್ಕೆ ಪ್ರಮುಖ ಕಾರಣ ಪೊಲೀಸ್ ಇಲಾಖೆಯ ವೈಫಲ್ಯ ಬಿಟ್ ಪೊಲೀಸರ ರಾತ್ರಿಯ ಗಸ್ತು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರು ಅಂಗಡಿಯ ಮಾಲೀಕರು ರೈತರು ಭಯಬಿತರಾಗಿದ್ದಾರೆ.

ಕೂಡಲೆ ಪೊಲೀಸ್ ಇಲಾಖೆ ಎಚ್ಚೆತ್ತುಕೊಂಡು ಗ್ರಾಮೀಣ ಭಾಗದ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಸಿ ಕಳ್ಳರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆ ನೀಡುವುದರ ಜೊತೆಗೆ ಪೊಲೀಸರ ರಾತ್ರಿ ಗಸ್ತನ್ನು ಹೆಚ್ಚಿಸಬೇಕು ಸುಕ್ಷೇತ್ರ ಹಯ್ಯಾಳ ಗ್ರಾಮದ ದೇವಸ್ಥಾನದಲ್ಲಿ ಪದೇಪದೇ ಕಳವು ಪ್ರಕರಣ ಹೆಚ್ಚಾಗುತ್ತಿವೆ ತಹಸೀಲ್ದಾರರು ದೇವಸ್ಥಾನಕ್ಕೆ ಭೇಟಿ ನೀಡಿ ಪರಿಶೀಲಿಸಿ ರಾತ್ರಿ ಕಾವಲು ಗಾರರನ್ನು ನೇಮಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ, ಮಲ್ಲು ಜಡಿ, ಪೀರ್ ಸಾಬ್ ಮರಡಿ, ಶ್ರೀನಿವಾಸ್ ಮಡಿವಾಳ್,ಸತೀಶ್ ಜಡಿ, ಮಹಮ್ಮದ್ ಕತಾಲಿ,ಸುರೇಶ್ ಬಾಡದ, ಹಣಮಂತ ಒಡ್ಕರ್, ಬಸವರಾಜ್, ಹಾಗೂ ಇನ್ನಿತರರು ಒತ್ತಾಯಿಸಿದ್ದಾರೆ.

# ಮೈಲಾರಲಿಂಗೇಶ್ವರ ಜಾತ್ರೆಗೆ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಕಾರ್ಯಚರಣೆ ಆರಂಭ

ವರದಿ: ಡಿ.ಕೆ ದೇವಿಂದ್ರ ಯಾದಗಿರಿ.

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಮೈಲಾಪೂರ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಗೆ ಯಾದಗಿರಿ ವಿಭಾಗದಿಂದ ವಿಶೇಷ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಕಾರ್ಯಚರಣೆ ಆರಂಭಿಸಲಾಗಿದೆ ಎಂದು ಯಾದಗಿರಿ ವಿಭಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಜೆ.ಬಿ ಮಂಜುನಾಥ ಅವರು ತಿಳಿಸಿದ್ದಾರೆ.

2026ರ ಜನವರಿ 11 ರಿಂದ 17ರ ವರೆಗೆ ಮೈಲಾಪೂರ ಶ್ರೀ ಮೈಲಾರಲಿಂಗೇಶ್ವರ ದೇವರ ಜಾತ್ರೆ ಜರುಗಲಿರುವ ಹಿನ್ನೆಲೆ ಈ ಜಾತ್ರೆಗೆ ಬರುವ ಭಕ್ತಾಧಿ ಪ್ರಯಾಣಿಕರ ಸಾರಿಗೆ ಅನುಕೂಲಕ್ಕಾಗಿ ಯಾದಗಿರಿ ವಿಭಾಗದಿಂದ ವಿಶೇಷ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಈ ವಿಶೇಷ ಬಸ್‌ಗಳು ಯಾದಗಿರಿ, ಶಹಾಪೂರ, ಸುರಪುರ, ಗುರುಮಠಕಲ್, ವಾಡಿ, ಸೇಡಂ, ಕೊಡಂಗಲ್, ನಾರಾಯಣಪೇಟ, ತಾಳಿಕೋಟ, ಹುಣಸಗಿ, ಕೆಂಭಾವಿ, ಸಿಂದಗಿ, ಹುಬ್ಬಳ್ಳಿ, ಗದಗ, ಮುಂತಾದ ಸ್ಥಳಗಳಿಗೆ ಕಾರ್ಯಚರಣೆ ಮಾಡಲಾಗುತ್ತದೆ, ಸಾರ್ವಜನಿಕ ಪ್ರಯಾಣಿಕರು ಈ ವಿಶೇಷ ಬಸ್‌ಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಚ್ಛ ಭಾರತ ಅಭಿಯಾನ

# ರಕ್ತದಾನ ಆರೋಗ್ಯ ತಪಾಸಣೆ ಕಾರ್ಯ ಶ್ಲಾಘನೀಯ: ಶರಣಗೌಡ ಕಂದಕೂರ

ವರದಿ: ಡಿ.ಕೆ ದೇವಿಂದ್ರ ಯಾದಗಿರಿ.

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಲೋಕಕಲ್ಯಾಣಕ್ಕಾಗಿ ತಮ್ಮ ಸಂಘಟನೆ ವತಿಯಿಂದ ಉನ್ನತ ಕಾರ್ಯಗಳಾದ ಸ್ವಚ್ಛತಾ,ರಕ್ತದಾನ ಶಿಬಿರಗಳನ್ನು ಮಾಡುತ್ತಾ ಜನ ಮನಗಳಲ್ಲಿ ಉಳಿಯುವಂತ ಶಾಶ್ವತ ಕೆಲಸಗಳನ್ನು ಮಾಡುತ್ತಾ ಬಂದಿರುವುದು ಶ್ಲಾಘನೀಯವಾಗಿದೆ ಎಂದು ಗುರುಮಿಟಕಲ್ ಮತಕ್ಷೇತ್ರದ ಜನಪ್ರಿಯ ಶಾಸಕ ಶರಣಗೌಡ ಕಂದಕೂರ ಹೇಳಿದರು.

ಗುರುಮಿಠಕಲ್ ತಾಲೂಕಿನ ಇಡ್ಲೂರು ಗ್ರಾಮದ ಶ್ರೀ ಶಂಕರಲಿಂಗ ದೇವಸ್ಥಾನದ ಆವರಣದಲ್ಲಿ ನಡೆದ ಕರ್ನಾಟಕ ಜನಪರ ಹೋರಾಟ ಸಮಿತಿ(ರಿ) ವತಿಯಿಂದ ನಡೆದ ಕೆ.ಜೆ.ಹೆಚ್.ಎಸ್ ಕ್ಯಾಂಪನಲ್ಲಿ ಗ್ರಾಮ ಸ್ವಚ್ಛತಾ ಆಂದೋಲನ, ರಕ್ತದಾನ ಶಿಬಿರ, ಆರೋಗ್ಯ ತಪಾಸಣೆಗೆ ಚಾಲನೆ ನೀಡಿ ಮಾತನಾಡಿದರು. ಗಡಿ ಭಾಗದಲ್ಲಿ ಶಾಶ್ವತವಾಗಿ ಉಳಿಯುವ ಕೆಲಸಗಳು ಮಾಡುತ್ತಾ ಯುವ ಪೀಳಿಗೆಗೆ ಮಾದರಿಯಾಗಿ, ಅನೇಕ ಸಂಘ ಸಂಸ್ಥೆಗಳಿಗೆ ಭಿನ್ನವಾಗಿ ಪ್ರತ್ಯಕ್ಷವಾಗಿ ಪ್ರಾಮಾಣಿಕ ಕೆಲಸವ ಮಾಡಿ, ನಿಮ್ಮ ಕಾರ್ಯಗಳಿಗೆ ನನ್ನ ಪ್ರತ್ಯಕ್ಷ ಪರೋಕ್ಷವಾಗಿ ಸಹಕಾರ ಮತ್ತು ಬೆಂಬಲ ನೀಡುತ್ತೇನೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀ ಪಂಚಮಸಿದ್ದಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ನಂತರ ಕರ್ನಾಟಕ ಜನಪರ ಹೋರಾಟ ಸಮಿತಿವತಿಯಿಂದ ಗ್ರಾಮದಲ್ಲಿರುವ ಸಮಸ್ಯೆಗಳನ್ನು ತೆಗೆದು-ಕೊಂಡು ಸಂಬಂಧ ಪಟ್ಟ ಅಧಿಕಾರಿಗಳಿಗೆ ತಿಳಿಸಿ ಕೂಡಲೇ ಬಗೆಹರಿಸುವಂತೆ ಮನವಿಯನ್ನು ಸಲ್ಲಿಸಿದರು.

ಈ ವೇಳೆಯಲ್ಲಿ ಜನಪರ ಹೋರಾಟ ಸಮಿತಿಯ ರಾಜ್ಯ ಅಧ್ಯಕ್ಷ ದೇವರಾಜ್ , ಕಾರ್ಯಧ್ಯಕ್ಷ ಸುಂದರೇಶ, ರಾಜ್ಯ ಉಪಾಧ್ಯಕ್ಷ ರಾಜಶೇಖರ್. ಪ್ರಧಾನ ಕಾರ್ಯದರ್ಶಿ ರೆಹಮಾನ್ ಚಿನ್ನಿಕಟ್ಟಿ, ಸಂಘಟನೆ ಕಾರ್ಯದರ್ಶಿ ಸೋಮನಗೌಡ ರಹಮತ್ತಿ, ಬೆಂಗಳೂರು ಖಾದರ್ ಸಾಬ್, ಬೋಗೇಶ, ಸಂತೋಷ ಮುರಾಮನ್, ಸಮಿತಿಯ ನಾಮನಿರ್ದೇಶಕ ಗುಡದಯ್ಯ, ಎ.ಕೆ. ನರೇಗಾ ರಾಜ್ಯಧ್ಯಕ್ಷ ಹಾಗೂ ಮಹಿಳಾ ಘಟಕದ ರಾಜ್ಯಅಧ್ಯಕ್ಷ ರಾಜೇಶ್ವರಿ, ಉಪಾಧ್ಯಕ್ಷ ವಾಣಿಗೌಡ ಹಾಸನ, ರಾಜ್ಯ ಕಾನೂನು ಸಲಹೆಗರಾರು ವಕೀಲ ಮಾಲತೇಸ್ , ಬಳ್ಳಾರಿ ಈರಪ್ಪ. ಕಂಪ್ಲಿ ಅಂಕಲೇಶ್ , ಬಾಬುವರ್ಧನ್ , ಅಧ್ಯಕ್ಷತೆ ಅಮರಯ್ಯ ಸ್ವಾಮಿ, ರಾಜ್ಯ ಸಂಘಟನೆ ಕಾರ್ಯದರ್ಶಿ ಹಾಗೂ ಜಿಲ್ಲಾ ಅಧ್ಯಕ್ಷ ರಾಚಯ್ಯ ಸ್ವಾಮಿ, ಉಪಾಧ್ಯಕ್ಷ ಗೌರಿಶಂಕರ, ಪ್ರಧಾನ ಕಾರ್ಯದರ್ಶಿ ಮಾಳಪ್ಪ, ವೆಂಕಟೇಶ, ವಿ. ರಾಮಲಿಂಗ, ಮೌನೇಶ, ಶಂಕರಯ್ಯ ಸ್ವಾಮಿ, ಶರಣಯ್ಯ ಸ್ವಾಮಿ, ಮಹೇಶ, ಕೇದರನಾಥ, ಅಶೋಕ್ ಹಡಪದ, ಬಸಪ್ಪ ಕಾಂಚರ, ಅಂಜಪ್ಪ ನಾಯಕ, ವೆಂಕಟೇಶ, ಎಂ. ಶಂಕ್ರಪ್ಪ, ಎಂ.ಶರತ ಶೆಟ್ಟಿ, ಪ್ರಶಾಂತ್, ಬಸವರಾಜ, ಎಸ್. ಸುಬಾನಲ್ಲಿ, ಅಂಜಪ್ಪ, ಗುರಪ್ಪ, ಆಂಜನೇಯ.ಕೆ, ತಾ.ಪ್ರ.ಕಾ.ಅಂಜಪ್ಪಕಲಾಲ, ತಾ.ಸ.ಕಾ.ಬಸವರಾಜ, ಎಂ.ತಾ.ಸಂ. ಕಾ.ಖಾಲಿದ್, ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷ ಈರಮ್ಮ, ಉ.ಅ. ಅನುರಾಧ, ಪ್ರ.ಕ. ಉಮಾಭಾರತಿ, ಜಯಮ್ಮ, ಅರ್ಚನಾ , ಶ್ರುತಿ, ರಾಜಮ್ಮ, ಬಸವಲಿಂಗಮ್ಮ, ಶಂಕ್ರಮ್ಮ, ರಾಧಮ್ಮ, ಗುರುಮಿಠಕಲ್ ತಾಲೂಕ ಅಧ್ಯಕ್ಷ ಆಂಜನೇಯ ಇಡ್ಲೂರು ಮುಂತಾದವರಿದ್ದರು.



# ಮಠಾಧೀಶರು ರಾಜಕೀಯ ಗಣ್ಯರ ಭೇಟಿ ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಆಹ್ವಾನ



- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಬೆಂಗಳೂರು, ಮೈಸೂರು, ತುಮಕೂರು, ಧರ್ಮಸ್ಥಳ ಸೇರಿ ವಿವಿಧೆಡೆ ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮೂರನಾಲ್ಕು ದಿನಗಳ ಕಾಲ ಪ್ರವಾಸ ಕೈಗೊಂಡು ವಿವಿಧ ಮಠಾಧೀಶರು, ರಾಜಕೀಯ ಗಣ್ಯರನ್ನು ಭೇಟಿಯಾಗಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಆಹ್ವಾನ ನೀಡಿದರು.

ಬೆಂಗಳೂರಿನ ಆದಿಚುಂಚನಗಿರಿ ಮಠದ ನಿರ್ಮಲನಂದನಾಥ ಸ್ವಾಮೀಜಿ, ಮೈಸೂರು ಸುತ್ತೂರು ಮಠದ ಶಿವರಾತ್ರಿದೇಶಿಕೇಂದ್ರಸ್ವಾಮೀಜಿ, ತುಮಕೂರು ಸಿದ್ಧಗಂಗೆಯ ಮಠದ ಸಿದ್ಧಲಿಂಗ ಸ್ವಾಮೀಜಿ, ಧರ್ಮಸ್ಥಳದ ಡಾ.ವೀರೇಂದ್ರ ಹೆಗ್ಗಡೆ, ಮದುಸೂಧನ ಸಾಯಿ ಪೂಜ್ಯರು, ಮಲೆ ಮಹದೇಶ್ವರ ಬೆಟ್ಟದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಸೇರಿದಂತೆ ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಸೇರಿದಂತೆ ಮುಂತಾದವರನ್ನು ಭೇಟಿಯಾಗಿ ಭಾಲ್ಕಿ ಪಟ್ಟಣದಲ್ಲಿ 2026ರ ಏ.20 ರಿಂದ ಮೂರು ದಿವಸ ಐತಿಹಾಸಿಕವಾಗಿ ನಡೆಯಲಿರುವ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭಕ್ಕೆ ಸಾಕ್ಷಿಯಾಗಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಜತೆಗಿದ್ದರು.



ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಬೆಂಗಳೂರಿನಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಆಹ್ವಾನ ನೀಡಿದರು. ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಡಾ.ಸಿದ್ದು ಪಾಟೀಲ್ ಇದ್ದರು.

# ಕಾಳೆಬೆಳಗುಂದಿಯ ಕಲ್ಯಾಣ ಬಾವಿಯನ್ನು ಸ್ವಚ್ಛಗೊಳಿಸಿದ: ಕ.ಜ.ಹೋ ಸಮಿತಿ.



- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಗುರುಮಿಟ್ಕಲ್ ತಾಲೂಕಿನ ಸುಕ್ಷೇತ್ರ ಕಾಳೆಬೆಳಗುಂದಿಯಲ್ಲಿ ಕರ್ನಾಟಕ ಜನಪರ ಹೋರಾಟ ಸಮಿತಿ ವತಿಯಿಂದ ಸುಕ್ಷೇತ್ರದಲ್ಲಿ ಇತಿಹಾಸ ಹೊಂದಿರುವ ಕಲ್ಯಾಣ ಬಾವಿಯನ್ನು ಸ್ವಚ್ಛಗೊಳಿಸಲಾಯಿತು. ಮಹಾತ್ಮ ಶ್ರೀ ಬನದೇಶ್ವರ ಸಮೇತ ಭದ್ರಕಾಳಿ ಕಲ್ಯಾಣ ಮಹೋತ್ಸವ ಅಂಗವಾಗಿ

ಸುಕ್ಷೇತ್ರದಲ್ಲಿರುವ ಹಲವಾರು ದಶಕಗಳಿಂದ ಇರುವ ಬಾವಿಯನ್ನು ಕರ್ನಾಟಕ ಜನಪರ ಹೋರಾಟ ಸಮಿತಿ ವತಿಯಿಂದ ಸಂಪೂರ್ಣವಾಗಿ ಸ್ವಚ್ಛಗೊಳಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಜನಪರ ಹೋರಾಟ ಸಮಿತಿ (ರಿ )ರಾಜ್ಯಾಧ್ಯಕ್ಷ ದೇವರಾಜ್, ಉಪಾಧ್ಯಕ್ಷ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ರಹಿಮಾನ್ ಚಿನ್ನಿಕಟ್ಟಿ, ರಾಜ್ಯ ಸಂಘಟನೆ ಕಾರ್ಯದರ್ಶಿ ಅಮರಯ್ಯಸ್ವಾಮಿ,

ರಾಜ್ಯ ಕಾರ್ಯದರ್ಶಿ ಸೋಮಣ್ಣಗೌಡ, ನಾಮ ನಿರ್ದೇಶಕ ಗುಡದಯ್ಯ, ಜಿಲ್ಲಾಧ್ಯಕ್ಷ ರಾಚಯ್ಯ ಸ್ವಾಮಿ, ಉಪಾಧ್ಯಕ್ಷ ಗೌರಶಂಕರ್, ಪ್ರಧಾನ ಕಾರ್ಯದರ್ಶಿ ಮಾಳಪ್ಪ, ನಿರ್ದೇಶಕ ಶಂಕರ್ ಸ್ವಾಮಿ, ಸಹ ಕಾರ್ಯದರ್ಶಿ

ಕೇದಾರನಾಥ್, ನಿರ್ದೇಶಕ ಮಹೇಶ್, ಛಾಯಾಗ್ರಾಹಕ ರಾಯಚೋಟಿ ಇದ್ದರು.

# ಕರೆಂಟ್ ಕಂಬದ ನೆರಳಲ್ಲಿ ಮಕ್ಕಳ ಭವಿಷ್ಯ..? ಆಟದ ಮೈದಾನವೇ ಅಪಾಯದ ವಲಯ

ವರದಿ:ಡಿ.ಕೆದೇವಿಂದ್ರಯಾದಗಿರಿ.

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:



ನಗರದ ಸಪ್ನ ಗ್ರೌಂಡ್‌ನಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಮಕ್ಕಳ ಆಟದ ಮೈದಾನವೇ ಇಂದು ಭಯದ ಕೇಂದ್ರವಾಗಿ ಮಾರ್ಪಟ್ಟಿದೆ. ಮಕ್ಕಳ ಚೈತನ್ಯ, ಉತ್ಸಾಹ ಹಾಗೂ ಆರೋಗ್ಯಕ್ಕಾಗಿ ಮೀಸಲಾದ ಮೈದಾನದಲ್ಲೇ ಕರೆಂಟ್ ಕಂಬ ನೆಲೆಸಿರುವುದು ಪಾಲಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ತೀವ್ರ ಆತಂಕ ಮೂಡಿಸಿದೆ.

ಮೈದಾನದಲ್ಲಿ ಮುಕ್ತವಾಗಿ ಆಟವಾಡಬೇಕಾದ ಮಕ್ಕಳು, ಜೀವಭಯದ ನಡುವೆ ಆಟ ನಿಲ್ಲಿಸುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಒಂದು ಕ್ಷಣದ ಅಲಕ್ಷ್ಯ ಪ್ರಾಣಾಪಾಯಕ್ಕೆ ಕಾರಣವಾಗಬಹುದು ಎಂಬ ಆತಂಕ ಮಕ್ಕಳ ಮನಸ್ಸಿನಲ್ಲೇ ಮನೆಮಾಡಿದೆ. ಇದರಿಂದ ಶಾರೀರಿಕ ಚಟುವಟಿಕೆಗಳಿಗೆ ಬ್ರೇಕ್ ಬಿದ್ದಿದ್ದು, ಮಕ್ಕಳ ಸಹಜ ಬಾಲ್ಯಕ್ಕೂ ಅಡ್ಡಿಯಾಗಿದೆ. ಈ ಕುರಿತು ಶಾಲೆಯ ಮುಖ್ಯ ಗುರುಗಳು ಹಲವು ಬಾರಿ ಜೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ, ಇದುವರೆಗೆ ಯಾವುದೇ ಸ್ಪಷ್ಟಕ್ರಮ ಕೈಗೊಳ್ಳಲಾಗಿಲ್ಲ ಎಂಬುದು ಮತ್ತಷ್ಟು ನಿರಾಸೆ ಮೂಡಿಸಿದೆ. ಸಮಸ್ಯೆ ಬಗ್ಗೆ ಸ್ಪಂದನೆ ಸಿಗದ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳು ತಮ್ಮ ಅಸಹಾಯಕತೆಯನ್ನು ಪತ್ರಿಕೆಗೆ ಕಣ್ಣೀರಿನೊಂದಿಗೆ ವ್ಯಕ್ತಪಡಿಸಿದ್ದಾರೆ.

ಮಕ್ಕಳ ಮೈದಾನದಲ್ಲಿ ಕರೆಂಟ್ ಕಂಬ ಇರೋದು ಎಷ್ಟು ನ್ಯಾಯ? ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲೂ ಕೇಳಿಬರುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸ್ಪಂದಿಸಿ, ಕರೆಂಟ್ ಕಂಬವನ್ನು ತೆರವುಗೊಳಿಸಿ ಮಕ್ಕಳಿಗೆ ಸುರಕ್ಷಿತ ಆಟದ ವಾತಾವರಣ ಕಲ್ಪಿಸಬೇಕೆಂಬುದು ಪಾಲಕರು ಹಾಗೂ ಸ್ಥಳೀಯರ ಒತ್ತಾಯವಾಗಿದೆ.

# ಮಹಿಳಾ ನೌಕರರಿಗೆ ಋತುಚಕ್ರದ ವೇತನ ಸಹಿತ ರಜೆ ಸೌಲಭ್ಯಕ್ಕೆ ಸೂಚನೆ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ವಿವಿಧ ಕಾರ್ಮಿಕ ಕಾಯ್ದೆಗಳ ನೋಂದಣಿಯಾಗಿರುವ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಅವರ ಋತುಚಕ್ರದ ಸಮಯದಲ್ಲಿ ಮಾಸಿಕ ಒಂದು ದಿನದ ವೇತನ ಸಹಿತ ರಜೆ ಸೌಲಭ್ಯವನ್ನು ಉದ್ಯೋಗದಾತರು ಪಡೆಯಬೇಕು ಎಂದು ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರು ಡಾ.ವೆಂಕಟೇಶ ಅ.ಶಿಂದಿಹಟ್ಟಿ ಅವರು ತಿಳಿಸಿದ್ದಾರೆ.

ಕಾರ್ಖಾನೆಗಳ ಕಾಯ್ದೆ 1948, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961, ತೋಟ ಕಾರ್ಮಿಕರ ಕಾಯ್ದೆ 1951, ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯ್ದೆ 1966, ಮತ್ತು ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ 1961 ರಡಿ ನೋಂದಣಿಯಾಗಿರುವ ಎಲ್ಲಾ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲಾ ಖಾಯಂ, ಗುತ್ತಿಗೆ, ಹೊರಗುತ್ತಿಗೆ ಮಹಿಳಾ ಕಾರ್ಮಿಕರುಗಳಿಗೆ ಅವರ ಋತುಚಕ್ರದ ಸಮಯದಲ್ಲಿ ಪ್ರತಿ ಮಾಸಿಕ ಒಂದು ದಿನದ ರಜೆಯಂತೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು ಉದ್ಯೋಗದಾತರು ಒದಗಿಸುವಂತೆ ಸರ್ಕಾರವು ಆದೇಶಿಸಿದ್ದು, ಮಹಿಳಾ ನೌಕರರು ಆಯಾ ತಿಂಗಳ ಋತುಚಕ್ರ ರಜೆಯನ್ನು ಆಯಾ ತಿಂಗಳಿನಲ್ಲಿಯೇ ಬಳಿಸಿಕೊಳ್ಳಬೇಕು, ಮತ್ತು ಋತುಚಕ್ರ ರಜೆ ಪಡೆಯಲು ಮಹಿಳಾ ನೌಕರರು ಯಾವುದೇ ವೈದ್ಯಕೀಯ ಪ್ರಮಾಣಪತ್ರ ಒದಗಿಸುವ ಅವಶ್ಯಕತೆ ಇರುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಾಮಿ ವಿವೇಕಾನಂದ ಶಾಲೆಯಲ್ಲಿ ಗಮನ ಸೆಳೆದ ಪಾಲಕರ ಆಟೋಟಗಳು



- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :

ತಾಲ್ಲೂಕಿನ ಗುಳದಳ್ಳಿಯ ಹೊರವಲಯದಲ್ಲಿರುವ ಶ್ರೀ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ಶಾಲಾ ವಾರ್ಷಿಕೋತ್ಸವದ ನಿಮಿತ್ತವಾಗಿ ಪಾಲಕರಿಗೆ ಆಟೋಟ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಪಾಲಕ ಪ್ರತಿನಿಧಿಗಳು ಉದ್ಘಾಟಿಸಿದರು. ಇದೇ ವೇಳೆ ಪುರುಷ ಮತ್ತು ಮಹಿಳಾ ಪಾಲಕರಿಗೆ ಪ್ರತ್ಯೇಕ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಾಟರ್ ಗೇಮ್, ಮಿನಿಟ್ ಗೇಮ್ ,ಗುಂಡು ಎಸೆತ, ನೀರು ತುಂಬುವ ಆಟ, ಬಲೂನ್ ಗೇಮ್, ರಂಗೋಲಿ ಸ್ಪರ್ಧೆ ಹೀಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಎಲ್ಲಾ ಪಾಲಕರು ಭಾಗವಹಿಸಿ ಖುಷಿಪಟ್ಟರು ಇದೇ ವೇಳೆ ಮಕ್ಕಳ ಕಲಿಕಾ ಪ್ರಗತಿ ಗುಣಮಟ್ಟದ ಬಗ್ಗೆ ಚರ್ಚಿಸಲಾಯಿತು.

ಕಾರ್ಯಕ್ರಮದಲ್ಲಿ ರಾಮಪ್ಪ ಜೋಗಿನ್, ಶರಣಪ್ಪ ಗೊರವರ್, ಮಂಜುನಾಥ ಚಕ್ಕಡಿ, ಸಣ್ಣಮಲ್ಲಪ್ಪ ಮೇಟಿ, ಪ್ರಕಾಶ್ ಅರಸನಕೆರೆ, ಶಿವಪ್ಪ ಕಲ್ಗುಡಿ, ಜಂದೀಪೀರ್ ಬಾಗ್ಲಿ, ಚಾಂದ್ ಪಾಷ ಅಗಲಕೇರಿ,ಮಾರುತಿ ಲಿಂಗದಹಳ್ಳಿ,ಗೀತಾ ಲಂಗಟದ, ಶಿಲ್ಪ ಚಂದ್ರಶೇಖರ್ ಹಡಪದ್, ಶ್ರೀಮತಿ ನೇತ್ರಾವತಿ ರಾಘವೇಂದ್ರ ಶೆಟ್ಟಿ, ದೇವಕ್ಕ, ಲಕ್ಷ್ಮಿ ಪೋತುಂಡಿ, ಹನುಮವ್ವ ಮಡ್ಡಿ, ಶೈನಜಾ ಬೇಗಂ, ಮಹಮುದಾ ಬೇಗಂ, ಮಂಜುಳಾ ಮೇಟಿ, ಶಾಲಾ ಸಂಸ್ಥಾಪಕರಾದ ರಮೇಶ ಹೊಳೆಯಾಚೆ ಮುಖ್ಯೋಪಾಧ್ಯಾಯರಾದ ನಾಗರಾಜ ಬಡಿಗೇರ ಹಾಗೂ ಶಿಕ್ಷಕರ ಬಳಗ ಮತ್ತು ಮುದ್ದುಮಕ್ಕಳು ಉಪಸ್ಥಿತಿ ಇದ್ದರು.

# ಮದ್ಯ ಮಾರಾಟ ಮಾಡುವವರ ವಿರುದ್ಧ ಕ್ರಮಕ್ಕೆ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:

ತಾಲುಕಿನ ಈಚನಾಳ ಕ್ರಾಸ್ , ಈಚನಾಳ ತಾಂಡಾದ ಗ್ರಾಮಗಳಲ್ಲಿ ಅನೇಕ ಪಾನ್ ಶಾಪ್ ಹಾಗೂ ಸಣ್ಣ ಪುಟ್ಟ ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದು, ಅಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಈಚನಾಳ ಗ್ರಾಮ ಪಂಚಾಯತ ಮುಂಭಾಗದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟ,ರೈತ ಸಂಘ,ದಲಿತ ಸಂಘಟನೆಗಳ ಮುಖಂಡರು ಪ್ರತಿಭಟಿಸಿದರು.

ಇತ್ತಿಚಿನ ದಿನಗಳಲ್ಲಿ ಈಚನಾಳ ಸೇರಿದಂತೆ ಸುತ್ತಮುತ್ತಲಿನ ಕೆಲ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಿದ್ದು ಇದರಿಂದ ಗ್ರಾಮದ ಬಹುತೇಕ ಯುವಕರು,ವೃದ್ದರು, ಸಾರಾಯಿ ದಾಹಕ್ಕೆ ಬಲಿಯಾಗಿದ್ದಾರೆ. ಹಾಗಾಗಿ ಹಲವು ಕುಟುಂಬಗಳು ಬೀದಿಗೆ ಬಿದ್ದಿವೆ ,ಇದರಿಂದ ಕುಟುಂಬಗಳ ಕಲಹ ಗಳಿಂದ ಗ್ರಾಮದಲ್ಲಿ ಅಶಾಂತಿ ಉಂಟಾಗುತ್ತಿದೆ , ಈ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ, ಹಾಗಾಗಿ ಈ ಕೂಡಲೇ ಅಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಅಬಕಾರಿ ವೃತ್ತ ನಿರೀಕ್ಷಕರಾದ ಲಕ್ಷ್ಮೀದೇವಿ,ಹಾಗೂ ಪಿಡಿಒ ಬಸಯ್ಯ ರವರಿಗೆ ಸಂಘಟನೆಗಳ ಮುಖಂಡರು ಮನವಿ ಪತ್ರ ಸಲ್ಲಿಸುವ ಮೂಲಕ ಒತ್ತಾಯಿಸಿದರು.

ಈ ಸಂಧರ್ಭದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಯಂಕಮ್ಮ ಮೇಟಿ, ಕಾರ್ಯದರ್ಶಿ ಚಂದ್ರಿಕಾ, ಸರಸ್ವತಿ ಬಡಿಗೇರ್,ಶೋಭಾ ಮೇಟಿ,ರೈತ ಸಂಘದ ಸಹ ದೇವಪ್ಪ ಕರಡಿ,ದಲಿತ ಸಂಘಟನೆಯ ಮಲ್ಲರೆಡ್ಡೆಪ್ಪ ದೊಡ್ಡಮನಿ, ಸೇರಿದಂತೆ ವಿವಿಧ ಸಂಘಟನೆಗಳ ಅನೇಕ ಮುಖಂಡರು ಹಾಜರಿದ್ದರು.

# ಮುಖಂಡರು ಸಿಎಂ ಭೇಟಿ



ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:

:ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಯ್ಯನವರನ್ನು ರಾಯಚೂರು ಜಿಲ್ಲೆಯ ಮುಖಂಡರು ಭೇಟಿಯಾಗಿ ಮುಖ್ಯಮಂತ್ರಿಯಾಗಿ ದೀರ್ಘಾವಧಿಗೆ ಕಾರ್ಯನಿರ್ವಹಿಸಿದ್ದಕ್ಕಾಗಿ ಶುಭ ಕೋರಲಾಯಿತು. ಈ ಸಂದರ್ಭದಲ್ಲಿ ಶಾಸಕರಾದ ಹಪನಗೌಡ ಬಾದರ್ಲಿ, ಬಸನಗೌಡ ದದ್ದಲ, ವಿಧಾನ ಪರಿಷತ್ ಸದಸ್ಯರಾದ ಎ.ವಸಂತ ಕುಮಾರ, ಶರಣಗೌಡ ಬಯ್ಯಾಪುರ ಹಾಗೂ ಮಾಜಿ ಸಚಿವರಾದ ಮಲ್ಲಿಕಾರ್ಜುನ ನಾಗಪ್ಪ, ಪಾಮಯ್ಯ ಮುರಾರಿ, ಕೆ.ಅಸ್ಲಂ ಪಾಶಾ, ರಾಮಕೃಷ್ಣ ನಾಯಕ, ಶ್ರೀನಿವಾಸ, ಶ್ರೀನಿವಾಸ ಶಿಂಥೆ, ಡಾ.ರಝಾಕ ಉಸ್ತಾದ, ಉಪಸ್ಥಿತರಿದ್ದರು.

## ಲಕ್ಷ್ಮಿ ನಾರಾಯಣ ನಾಗವಾರ ಪುಣ್ಯಸ್ಮರಣೆ:

# ಜನಜಾಗೃತಿ ಸಮಾವೇಶ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:

ದಲಿತ ಚೇತನ ಲಕ್ಷ್ಮಿನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ಪ್ರಯುಕ್ತ ಜ.12 ರಂದು 'ರಾಜ್ಯ ಮಟ್ಟದ ಜನಜಾಗೃತಿ ಸಮಾವೇಶ' ಶಿವಮೊಗ್ಗೆ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ದ.ಸಂ.ಸ ನಾಗವಾರ ಬಣದ ರಾಜ್ಯ ಸಂಘಟನಾ ಸಂಚಾಲಕ ಪ್ರಭುಲಿಂಗ ಮೇಗಳಮನಿ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.ಈ ಸಮಾವೇಶವನ್ನು ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅವರು ಉದ್ಘಾಟಿಸಲಿದ್ದು, ಹುಬ್ಬಳ್ಳಿ ಧಾರವಾಡ ಪೂರ್ವ ಕ್ಷೇತ್ರ ಶಾಸಕ ಹಾಗೂ ಬೆಂಗಳೂರ ಕೊಳಚೆ ನಿರ್ಮೂಲನೆ ಮಂಡಳಿ ಅಧ್ಯಕ್ಷ ಅಬ್ಬಯ್ಯ ಪ್ರಸಾದ್ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಿದ್ದಾರೆ. ನಾಡಿನ ಪ್ರಗತಿಪರ ಚಿಂತಕರು, ಸಾಹಿತಿಗಳು, ದಲಿತಪರ ಸಂಘಟನೆಗಳು, ದಿ.ಲಕ್ಷ್ಮಿನಾರಾಯಣ ನಾಗವಾರ ಒಡನಾಡಿಗಳು ಆಗಮಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದ್ದಾರೆ.



ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಬೆಂಗಳೂರಿನ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿ ನಿರ್ಮಲನಂದನಾಥ ಸ್ವಾಮಿಜಿ ಅವರನ್ನು ಭೇಟಿಯಾಗಿ ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಆಹ್ವಾನ ನೀಡಿದರು.

# ಜ.09 ರಂದು ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿ ನಗರದ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 110/11ಕೆವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಫೀಡರ್ ಎಫ್–46, ಎಫ್–47 ಮತ್ತು ಎಫ್–25 ರ ಲಿಂಕ್ ಲೈನ್ ಕಾಮಗಾರಿಕೈಗೊಳ್ಳುತ್ತಿರುವುದರಿಂದ ಜ.09 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ

ನಗರದ ಆರ್.ಕೆ ಮಿಲ್ ರೋಡ್, ಬಾಪೂಜಿ ನಗರ ಮತ್ತು ಸರ್ಕಲ್, ರಾಣಿತೋಟ, ಕಣೆಕಲ್ ಬಸ್‌ಸ್ಟಾಂಡ್, ಮಾರ್ಕೆಟ್, ಟೋಪಿಗಲ್ಲಿ, ಮರಿಸ್ವಾಮಿ ಮಠ, ಇಂಡಸ್ಟ್ರಿಯಲ್ ಏರಿಯಾ ಹಂತ–1, ಮಾರೆಮ್ಮನ ಗುಡಿ ಹಿಂದುಗಡೆ ಏರಿಯಾ, ಆಂಧ್ರಾಳು ರಸ್ತೆ, ಕೊಲಮಿ ಚೌಕ್, ಮಿಲ್ಲರ್ ಪೇಟೆ, ಆಂಧ್ರಾಳು ಸೇರಿದಂತೆ ಇನ್ನೂ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ರಮ ಮದ್ಯ ಮಾರಾಟ ಆರೋಪ

## ಅಬಕಾರಿ ಅಧಿಕಾರಿಯ ಅಮಾನತುಗೆ ಒತ್ತಾಯ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:

ತಾಲೂಕಿನಲ್ಲಿ ಅಕ್ರಮ ಮದ್ಯ ಮಾರಾಟ ನಿಯಂತ್ರಿಸುವಲ್ಲಿ ಅಬಕಾರಿ ಇಲಾಖೆ ವಿಫಲವಾಗಿದೆ ಎಂದು ಆರೋಪಿಸಿ, ಲಿಂಗಸುಗೂರು ಅಬಕಾರಿ ವಲಯದ ಸರ್ಕಲ್ ಇನ್ಸ್ಪೆಕ್ಟರ್ ಲಕ್ಷ್ಮೀದೇವಿ ಅವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ವಿವಿಧ ಸಂಘಟನೆಗಳ ಮುಖಂಡರು ಲಿಂಗಸಗೂರು ಸಹಾಯಕ ಆಯುಕ್ತರು ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕ ಶಾಂತಿ ಕದಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರು ನೀಡಿದವರ ಮಾಹಿತಿಯನ್ನು ಬಹಿರಂಗಪಡಿಸಿ ಬೆದರಿಕೆ ಹಾಕಲಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ.

ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಅಧಿಕಾರಿಯನ್ನು ಅಮಾನತು ಮಾಡಿ ತನಿಖೆ ನಡೆಸಬೇಕು ಹಾಗೂ ದೂರುದಾರರಿಗೆ ರಕ್ಷಣೆ ಒದಗಿಸಬೇಕು ಎಂದು ಸಂಘಟನೆಗಳು ಆಗ್ರಹಿಸಿವೆ. ಮನವಿಗೆ ಸ್ಪಂದಿಸದಿದ್ದರೆ ಅಬಕಾರಿ ಇಲಾಖೆಯ ವಿರುದ್ಧ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈಸಂದರ್ಭದಲ್ಲಿ ಹನುಮಂತ ,ಹನುಮಂತ. ಅಮರೇಶ್ ಗೋಸ್ಲೆ,ಬಸವರಾಜ ಗೋಸ್ಲೆ,ಮಲ್ಲಿಕಾರ್ಜುನ ಸರ್ಜಾಪುರ ,ಮೌನೇಶ್ ಗೋರೆಬಾಳ, ಸೇರಿದಂತೆ ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಸೂಚನೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ::

ಎಲ್ಲ ಸರ್ಕಾರಿ ಶಾಲೆಗಳಿಗೆ ಒಳ್ಳೆಯ ಕಟ್ಟಡ ಮತ್ತು ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ಕಲ್ಪಿಸಲು ಪ್ರಯತ್ನಿಸುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಶಾಲೆಯ ಶಿಕ್ಷಕರು ಮತ್ತು ಇಲಾಖೆಯ ಅಧಿಕಾರಿಗಳು ಶ್ರಮಿಸಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಶಾಲೆಯ ಮುಖ್ಯಗುರುಗಳು ಮತ್ತು ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಸಂಚಾರದ ನಿಮಿತ್ತ ಗುರುವಾರ ವಡಗಾಂವ ಹೋಬಳಿ ವ್ಯಾಪ್ತಿಯ ಖಾಶೆಂಪೂರ(ಬಿ), ಜಂಬಗಿ, ಮಹಾರಾಜವಾಡಿ, ಸೋರಳ್ಳಿ ಸೇರಿದಂತೆ ವಿವಿಧ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಎಲ್ಲ ಶಿಕ್ಷಕರು ಪ್ರತಿದಿನ ಬರುತ್ತಾರಾ ? ಎಲ್ಲ ತರಗತಿಗಳು ಸರಿಯಾಗಿ ನಡೆಯುತ್ತವೆಯೇ ? ಎಲ್ಲರೂ ಸರಿಯಾಗಿ ಪಾಠ ಮಾಡುತ್ತಾರಾ ? ಶಾಲೆಯಲ್ಲಿ ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ, ಮಧ್ಯಾಹ್ನದ ಬಿಸಿಯೂಟ ಸರಿಯಾಗಿ ಮಾಡುತ್ತಿದ್ದಾರಾ ? ಎಂದು ಮಕ್ಕಳಿಗೆ ವಿವಿಧ ಪ್ರಶ್ನೆಗಳನ್ನು ಕೇಳಿ ಸರ್ಕಾರಿ ಶಾಲೆಗಳ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು.

ಖಾಶೆಂಪೂರ ಹಾಗೂ ಕೆಲವೊಂದು ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಿರುವುದನ್ನು ಗಮನಿಸಿ, ಮುಖ್ಯಗುರುಗಳಿಂದ ವಿವರಣೆ ಪಡೆದರು. ಮಕ್ಕಳ ಸಂಖ್ಯೆ ಕಡಿಮೆಯಿರುವ ಶಾಲೆಗಳನ್ನು ರಾಜ್ಯ ಸರ್ಕಾರ ಮುಚ್ಚಲು ಹೊರಟಿದೆ. ಶಾಲೆ ಮುಚ್ಚಿದರೆ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರಿಗೂ ತೊಂದರೆ–ಯಾಗುತ್ತದೆ. ಹಾಗಾಗಿ ಎಲ್ಲ ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ದಾಖಲಾತಿ ಹೆಚ್ಚಿಸಬೇಕು. ಇದಕ್ಕಾಗಿ ಶಿಕ್ಷಕರು ಗ್ರಾಮದ ಪ್ರತಿ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸುವ ಕೆಲಸ ಮಾಡಬೇಕೆಂದು ಹೇಳಿದರು.

ಸರ್ಕಾರಿ ಶಾಲೆಗಳಿಗೆ ಉತ್ತಮ ಕಟ್ಟಡಗಳು, ಮೂಲಸೌಕರ್ಯ, ಸ್ಮಾರ್ಟ್ ತರಗತಿಗಳು, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ, ವಿದ್ಯಾರ್ಥಿವೇತನ ಸೇರಿದಂತೆ ಹಲವು ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಬಡ ಮತ್ತು ಮಧ್ಯಮ ವರ್ಗದವರು ಖಾಸಗಿ ಶಾಲೆಗಳಿಗೆ ಲಕ್ಷಾಂತರ ಖರ್ಚು ಮಾಡುವ ಬದಲು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಬೇಕೆಂದು ಮನವಿ ಮಾಡಿದರು.

ಶಿಕ್ಷಣದ ಅಭಿವೃದ್ಧಿ ನನ್ನ ಮೊದಲನೇ ಆದ್ಯತೆಯಾಗಿದ್ದು, ಶಾಲೆ ಕಾಲೇಜುಗಳ ಅಭಿವೃದ್ಧಿಗೆ ಬೇಕಾದಷ್ಟು ಅನುದಾನ ಕೊಡಲು ಸಿದ್ಧನಿದ್ದೇನೆ. ಶಾಲೆ, ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಏನಾದರೂ ಕೊರತೆಯಿದ್ದರೆ ನನಗೆ ಕೇಳಿ, ಎಲ್ಲವನ್ನು ಒದಗಿಸುತ್ತೇನೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಪ್ರಯತ್ನಿಸಿ ಎಂದು ಮನವಿ ಮಾಡಿದರು.

ಖಾಶೆಂಪೂರ, ವಡಗಾಂವ, ಜಂಬಗಿ, ಮಹಾರಾಜವಾಡಿ, ವಲ್ಲೇಪೂರ, ಸೋರಳ್ಳಿ, ಕಂದಗೂಳ ಹಾಗೂ ಖಾನಾಪೂರನಲ್ಲಿ ಗ್ರಾಮ ಸಂಚಾರ ನಡೆಸಿ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ ವಿವಿಧ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರು. ಇದೇ ವೇಳೆ ಗ್ರಾಮಸ್ಥರು, ಸಿಸಿ ರಸ್ತೆ, ಚರಂಡಿ, ಸಮುದಾಯ ಭವನ, ಮಂದಿರಗಳ ಜೀರ್ಣೋದ್ಧಾರ, ಶಾಲೆಗಳಲ್ಲಿ ಹೆಚ್ಚುವರಿ ತರಗತಿ ಕೋಣೆಗಳ ನಿರ್ಮಾಣ, ಸ್ಮಶಾನ ಭೂಮಿ ಸಮಸ್ಯೆ, ಫಾರ್ಮೇಶನ್ ರಸ್ತೆ, ಹೊಸ ಓಣಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಸೇರಿದಂತೆ ನಾನಾ ಸಮಸ್ಯೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು. ಎಲ್ಲ ಬೇಡಿಕೆಗಳನ್ನು ಆದ್ಯತೆಗೆ ಅನುಗುಣ ಈಡೇರಿಸುವುದಾಗಿ ಶಾಸಕರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಿಸಿ ರಸ್ತೆ, ಶಾಲೆ ಉನ್ನತೀಕರಣ ಕಾಮಗಾರಿ, ಹೈ ಮಾಸ್ಟ್ ವಿದ್ಯುತ್ ದೀಪ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಹೇಶ ಪಾಟೀಲ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಾಯತ್ರಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇಮಲಪ್ಪ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಮಾರುತಿ ರಾಠೋಡ, ಎಡಿ–ಎರ್ ರಾಜಶ್ರೀ, ಜೆಸ್ಕಾಂ ಎಇಇ ರವಿ ಕಾರಬಾರಿ, ಸಣ್ಣ ನೀರಾವರಿ ಇಲಾಖೆಯ ಸಂಗಮೇಶ ಖಳೂರೆ, ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಸಚಿನ ರಾಠೋಡ, ಖಂಡೋಬಾ ಕಂಗಟೆ, ಪ್ರಕಾಶ ಮೇತ್ರೆ, ಶಿವರಾಜ ಖಳೂರೆ, ಮಲ್ಲಪ್ಪ ನೇಳಗೆ, ಪ್ರಕಾಶ ಜೀರ್ಗೆ, ನೌನಾಥ, ಸಂದೀಪ ಪಾಟೀಲ, ಪ್ರದೀಪ ಪವಾರ, ಬಾಬುರಾವ ಮಸ್ಕಲೆ, ಅರವಿಂದ ಟೊಣಪೆ, ಪ್ರಕಾಶ ಖಾನಾಪೂರ, ವಿಜಯ ನಾಗೂರ, ಮಂಜು ಸ್ವಾಮಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ನಗರ ಸ್ವಚ್ಛತೆ ಸಂಚಾರ ಸಮಸ್ಯೆ ಪರಿಹಾರಕ್ಕೆಭಾವಣಿ ವ್ಯಾಪಾರಸ್ಥರ ಕ್ಷೇಮಭಿವೃದ್ಧಿ ಸಂಘದ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:




ನಗರದ ಸ್ವಚ್ಛತೆ, ಧೂಳು ಮುಕ್ತ ಸೌಂದರ್ಯೀಕರಣ, ಸುಗಮ ಸಂಚಾರ, ಸಾರ್ವಜನಿಕರ ಸುರಕ್ಷತೆ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಭಾವಣಿ ವ್ಯಾಪಾರಸ್ಥರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಸುಮಂತ ಕನಕಗಿರಿ ನೇತೃತ್ವದಲ್ಲಿ ಸಹಾಯಕ ಆಯುಕ್ತರು ಹಾಗೂ ಪುರಸಭೆ ಆಡಳಿತಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರದ ಪ್ರಮುಖ ರಸ್ತೆಗಳಲ್ಲಿ ಧೂಳಿನ ಸಮಸ್ಯೆ, ಬೀದಿ ನಾಯಿಗಳು ಹಾಗೂ ಬಿಡಾಡಿ ದನಗಳ ಹಾವಳಿ, ಹದಗೆಟ್ಟ ರಸ್ತೆಗಳು, ಘನತ್ಯಾಜ್ಯ ಮತ್ತು ಮುಸುರಿ ನೀರನ್ನು ರಸ್ತೆ ಮೇಲೆ ಚೆಲ್ಲುವ ವ್ಯಾಪಾರಿಗಳಿಂದ ಸಂಚಾರಕ್ಕೆ ತೆ–ೊಂದರೆ ಉಂಟಾಗುತ್ತಿದೆ ಎಂದು ಸಂಘ ಆರೋಪಿಸಿದೆ. ಬಸ್ ನಿಲ್ದಾಣ ವೃತ್ತ, ಬಸವಸಾಗರ ವೃತ್ತ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ತಳ್ಳುಬಂಡಿ ವ್ಯಾಪಾರಿಗಳ ಅವ್ಯವಸ್ಥೆ ಹಾಗೂ ಶಬ್ದ ಮಾಲಿನ್ಯ ಸಾರ್ವಜನಿಕರಿಗೆ ತೀವ್ರ ತೊಂದರೆ ನೀಡುತ್ತಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಆಹಾರ ಗುಣಮಟ್ಟದ ಪರಿಶೀಲನೆ, ಸಾರ್ವಜನಿಕ ಶೌಚಾಲಯಗಳ ನಿರ್ಮಾಣ, ಬೀದಿ ದೀಪಗಳ ದುರಸ್ತಿ, ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಸಂಘ ಒತ್ತಾಯಿಸಿದೆ. ಈ ಎಲ್ಲಾ ಸಮಸ್ಯೆಗಳನ್ನು ಹತ್ತು ದಿನಗಳೊಳಗೆ ಪರಿಹರಿಸದಿದ್ದಲ್ಲಿ ಲಿಂಗಸುಗೂರು ಬಂದ್‌ಗೆ ಕರೆ ನೀಡಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘ ಎಚ್ಚರಿಕೆ ನೀಡಿದೆ. ಈ ಸಂದರ್ಭದಲ್ಲಿ ಸಿದ್ದು ಬಡಿಗೇರ ನಿರ್ಮಲ ಡಾಗಾ ನಾಗಭೂಷಣ ಮಂಜುನಾಥ್ ಮಲ್ಲಿಕಾರ್ಜುನ ಕೆಂಭಾವಿ ಪಟ್ಟಣದ ವ್ಯಾಪಾರಿಗಳು ಹಿರಿಯರು ಯುವಕರು ಉಪಸ್ಥಿತರಿದ್ದರು.

# ಭಾರತ ಸೇವಾ ರತ್ನ ಪ್ರಶಸ್ತಿಗೆ ಅಮ್ಜದ್ ಖಾನ್ ಆಯ್ಕೆ



• ಮಲ್ಮನ ನುಡಿ ವಾರ್ತೆ ಸುರಪುರ:

ಇದೇ ದಿನಾಂಕ 13ರಂದು ಬೆಂಗಳೂರಿನ ಕಲಾ ಗ್ರಾಮದಲ್ಲಿ 2026ರ ನಡೆಯಲಿರುವ ಪ್ರೆಸ್ ಕ್ಲಬ್ ಇವರ ಸಂಯೋಗದಲ್ಲಿ

ನಡೆಯಲಿರುವ ಪ್ರೆಸ್ ಕ್ಲಬ್ ಪ್ರಶಸ್ತಿ ಕಾರ್ಯಕ್ರಮದಲ್ಲಿ ಕಾನೂನು ಕ್ಷೇತ್ರದಲ್ಲಿ ವಕೀಲರಾದ ಅಮ್ಜದ್ ಖಾನ್ ಅವರನ್ನು ಪ್ರಶಸ್ತಿ ಗೆ ಆಯ್ಕೆ ಮಾಡಲಾಗಿದೆ.

ಬಾಲ್ಯದಿಂದಲೇ ವಕೀಲ ವೃತ್ತಿ ಸೇರಬೇಕೆಂದು ಕನಸು ಕಟ್ಟಿ–ಕೊಂಡು ಬಂದಂತ ಅಮ್ಜದ್ ಖಾನ್ ಅವರಿಗೆ ಕ್ಷೇತ್ರದಲ್ಲಿ ವಕೀಲ್ ವೃತ್ತಿ ತೃಪ್ತಿ ತಂದಿದೆ.

ವಕೀಲರಾದ ಅಮ್ಜದ್ ಖಾನ್ ಅವರಿಗೆ ಕಾನೂನು ಕ್ಷೇತ್ರದ ಪ್ರಸಸ್ತಿ ಆಯ್ಕೆಯಾಗಿದ್ದು ಸ್ನೇಹಿತರು ಸಹ ಉದ್ಯೋಗಗಳು ಸಾರ್ವಜನಿಕರು ಬಂಧು ಬಳಗದಿಂದ ಹರ್ಷ ವ್ಯಕ್ತಪಡಿಸಿದ್ದಾರೆ.

ಇದರ ಮುಂದಿನ ಕಾನೂನು ಕ್ಷೇತ್ರದಲ್ಲಿ ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.



• ಮಲ್ಮನ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಡೊಣಗಾಪೂರ ಗ್ರಾಮದಲ್ಲಿ ಎನ್ ಆರ್ ಎಲ್ ಎಂ ವತಿಯಿಂದ ಬ್ರಹ್ಮ ಕಮಲ ಸಂಜೀವಿನಿ ಮಹಿಳಾ ಒಕ್ಕೂಟ–ದ ನೇತೃತ್ವದಲ್ಲಿ ಸಂಜೀವಿನಿ ಒಕ್ಕೂಟದ ವಾರ್ಷಿಕ ಮಹಾಸಭೆ ಜರುಗಿತು. ಈ ಸಂದರ್ಭದಲ್ಲಿ ಗ್ರಾ.ಪ ಅಧ್ಯಕ್ಷ ದೀಪಕ್ ಆಳಂದಿ, ಸದಸ್ಯರುಗಳಾದ ಜಗದೀಶ್ ಹೂಗಾರ ,ಬ್ರಹ್ಮ ಕಮಲ ಒಕ್ಕೂಟದ ಅಧ್ಯಕ್ಷರಾದ ನಾಗಮೀನಾ ಬರಗಾಲೆ.

ಕಾರ್ಯದರ್ಶಿ ಕಲ್ಪನಾ ಬೊಂಬಳಗೆ, ಸವಿತಾ ನೀಳಗೆ, ಸರೋಜನಾ ಕೊರಾಲೆ. ಎಲ್ ಸಿ ಆರ್ ಪಿ ಹಾಗೂ ಪಶುಸಖಿ ಸೇರಿದಂತೆ ವಿವಿಧ ಸ್ವಸಾಹಯ ಸಂಘಗಳ ಮಹಿಳೆಯರು ಉಪಸ್ಥಿತರಿದ್ದರು.

# ಮೂಲಭೂತ ಸೌಕರ್ಯ ಒದಗಿಸಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು:



ತಾಲ್ಲೂಕಿನ ಚಿಕ್ಕಸೂಗೂರು ಗ್ರಾಮ ಪಂಚಾಯತಿ ಪಕ್ಕದಲ್ಲಿಯೇ ಇರುವ ನಿವೇಶನಗಳ ಸ್ಥಳದಲ್ಲಿಯೇ ನಿರ್ಮಿಸಲು ಉದ್ದೇಶಿರುವ ಉದ್ಯಾನವ ತಡೆಹಿಡಿದು ಚಿಕ್ಕಸೂಗೂರು ಗ್ರಾಮದ ಬಹುಮುಖ್ಯ ಮೂಲಭೂತ ಸೌಕರ್ಯ ಕೈಗೊಳ್ಳಬೇಕು ಎಂದು ದಲಿತ ಸೇನೆ ಮುಖಂಡರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ತಾಲ್ಲೂಕಿನ ಚಿಕ್ಕಸೂಗೂರು ಗ್ರಾಮ ಪಂಚಾಯತಿಯ ಚಿಕ್ಕಸೂಗೂರು ಗ್ರಾಮಕ್ಕೆ ಸಂಬಂಧಪಟ್ಟಂತೆ ಹಲವಾರು ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ಅದರಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿಯ ಬಡಾವಣೆಗೆ ಸಂಬಂಧಪಟ್ಟಂತೆ ಸುರ್ವಣ ಕಾಲೋನಿಯಿಂದ ಪ.ಜಾತಿ ಬಡಾವಣೆಯ ಮೂಲಕ ಸ್ಮಶಾನದ ರಸ್ತೆಯವರೆಗೆ ಇರುವ ರಾಜ್ ಕಾಲುವೆ ನಿರ್ಮಾಣ, ಸಂಗಮೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಪರಿಶಿಷ್ಟ ಜಾತಿಯ ಏರೀಯಾದ ಚರಂಡಿ ನಿರ್ಮಾಣ ಹಾಗೂ ಪ.ಜಾತಿಯ ಜನತಾ ಕಾಲೋನಿಯಿಂದ ಹೈದರಬಾದ ಮುಖ್ಯ ರಸ್ತೆಗೆ ಮೂರು ಸಂಪರ್ಕ ರಸ್ತೆಗಳ ನಿರ್ಮಾಣ ಹಾಗೂ ಶ್ರೀ ಆಂಜಿನಯ್ಯ ದೇವಸ್ಥಾನದ ಪಕ್ಕದಲ್ಲಿ ಹಾದೂ ಹೋಗುವ ರಾಜ್ ಕಾಲುವೆಯ ಹೊಸ ನಿರ್ಮಾಣ ಮತ್ತು ವಡೂರು ಕ್ರಾಸ್‌ನಲ್ಲಿರುವ ಅತೀಕ್ರಮಣಗೊಂಡಿರುವ ಅನಧಿಕೃತ ಶೆಡ್‌ಗಳನ್ನು ತೆರವುಗೊಳಿಸಿ, ಸದರಿ ಸ್ಥಳದಲ್ಲಿ ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೈಟೆಕ್ ಶೌಚಾಲಯ ಹಾಗೂ ಉತ್ತಮ ಬಸ್ ನಿಲ್ದಾಣ ಕಟ್ಟಡ ನಿರ್ಮಾಣ ಅತ್ಯಂತ ಅವಶ್ಯಕ ಮೂಲಭೂತ ಸಮಸ್ಯೆಗಳಾಗಿವೆ. ಇಷ್ಟೆಲ್ಲಾ ಸಮಸ್ಯೆಗಳು ಇದ್ದರೂ ಕೂಡ ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸರೋಜಮ್ಮ ತಮ್ಮ ಮೇಲಾಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿ, ನಿವೇಶನಗಳಲ್ಲಿ ಮೇಲಾಧಿಕಾರಿಗಳ ಆದೇಶ ಇದೆ ಎಂದು ಹೇಳಿ ಉದ್ಯಾನ ನಿರ್ಮಿಸಲು ಉದ್ದೇಶಿಸಿರುವುದು ಕಾನೂನು ಬಾಹೀರವಾಗಿದೆ ಎಂದು ದೂರಿದರು. ಆದುದರಿಂದ ಮೇಲೆ ತೋರಿಸಿದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಸದರಿ ಉದ್ಯಾನವನದ ಯೋಜನೆಯನ್ನು ಕೈಬಿಟ್ಟು ಮೇಲೆ ತೋರಿಸಿದ ಮೂಲಭೂತ ಸೌಕರ್ಯ ಒದಗಿಸಬೇಕು. ಸದರಿ ಉದ್ಯಾನವನದ ಹಣಕಾಸನ್ನು ಮತ್ತು ಚಿಕ್ಕಸೂಗೂರು ಪಂಚಾಯತಿಗೆ ಈಗಾಗಲೇ ಮಂಜೂರು ಆಗಿರುವ ಸುಮಾರು ನಾಲ್ಕು ಕೋಟಿ ಅರವತ್ತು ಲಕ್ಷ ರೂಪಾಯಿಗಳ ಅನುದಾನದಲ್ಲಿ ಸದರಿ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಮಾರುತಿ ಚಿಕ್ಕಸೂಗೂರು, ಸುರೇಶಬಾಬು, ಕೃಷ್ಣಮಾರ್ಚಲ, ಬಾಬು ಸೇರಿದಂತೆ ಉಪಸ್ಥಿತರಿದ್ದರು.

# ವಿ.ಬಿ.ಜಿ ರಾಮ ಜಿ ಯೋಜನೆಯಿಂದ ಗಾಂಧಿಜಿ ಕನಸು ನನಸು ಸಾಧ್ಯ: ಎನ್.ರವಿಕುಮಾರ




• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ವಿ.ಬಿ.ಜಿರಾಮಜಿಯೋಜನೆಯಿಂದ ಮಹಾತ್ಮ ಗಾಂಧಿಜಿಯವರ ಕನಸ್ಸಾಗಿದ್ದ ರಾಮರಾಜ್ಯದ ಪರಿಕಲ್ಪನೆ ಪೂರ್ಣಗೊಳಿಸುವ ಉದ್ದೇಶ ಈ ಯೋಜನೆಯದ್ದಾಗಿದ್ದು, ಮನರೆಗಾ ಕೇವಲಗಾಂಧಿಜಿಯವರನ್ನು ಕಾಗದಕ್ಕೆ ಸೀಮಿತಗೊಳಿಸಲಾಗಿತ್ತೆಂದು ವಿಧಾನ ಪರಿಷತ್ತಿನ ಮುಖ್ಯ ಸಚೇತಕರಾದ ಎನ್.ರವಿಕುಮಾರ ತಿಳಿಸಿದರು.

ಗುರುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ವಿಪಕ್ಷಗಳು ಈ ಯೋಜನೆಯನ್ನು ಟೀಕಿಸಿ ಬಿಜೆಪಿ ಗಾಂಧಿಜಿಯವರ ಹೆಸರು ತೆಗೆದು ಹಾಕಿದೆ ಎಂದು ಹೇಳುತ್ತಿವೆ. ವಾಸ್ತವವೆಂದರೆ ಗಾಂಧಿಜಿಯವರು ಸದಾ ರಾಮ ರಾಜ್ಯದ ಕನಸ್ಸನ್ನೆ ಕಾಣುತ್ತಿದ್ದರು. ಅವರ ಆರಾದ್ಯ ದೈವ ಪ್ರಭು ಶ್ರೀರಾಮ. ಹಾಗಾಗಿ ಮೋದಿಜಿಯವರು ರಾಮನ ಹೆಸರನ್ನು ಇಟ್ಟು ಗಾಂಧಿಜಿಯವರ ಸಂಕಲ್ಪ ಪೂರ್ಣ ಮಾಡಲು ಮುಂದಾಗಿದ್ದಾರೆ ಎಂದರು.

100 ದಿನ ಇದ್ದ ಕೆಲಸದ ದಿನಗಳನ್ನು ಹೆಚ್ಚಿಸಿ 125ಕ್ಕೆ ಏರಿಸಲಾಗಿದೆ. ಇದರಿಂದ ಉದ್ಯೋಗ ದಿನ ಹೆಚ್ಚಾಯ್ತು. ಕೂಲಿಕಾರರ ಆರ್ಥಿಕ ಮಟ್ಟ ಸುಧಾರಿಸಲು ಸಹ ಇದು ಸಾಧ್ಯವಾಯಿತು. ಕೃಷಿ ಸಮಯದಲ್ಲಿ 60 ದಿನಗಳ ಕಾಲ ಈ ಯೋಜನೆ ನಿಲ್ಲಿಸುವ ಮೂಲಕ ಹಳ್ಳಿಗಳಲ್ಲಿನ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದೆ. ಮನರೆಗಾದಲ್ಲಿ ಒಂದು ತಿಂಗಳಿಗೊಮ್ಮೆ ಕೂಲಿ ನೀಡಲಾಗುತ್ತಿತ್ತು. ಈ ಯೋಜನೆಯಿಂದ ವಾರಕ್ಕೆ, ಹೆಚ್ಚೆಂದರೆ 15 ದಿನಕ್ಕೊಮ್ಮೆ ಕೂಲಿ ನೀಡುವ ಯೋಜನೆ ಜಾರಿಗೆ ತರಲಾಗಿದೆ. ನಕಲಿ ಕಾರ್ಡ್ಗಳ ಹಾಗೂ ಹಣದ ಸೋರಿಕೆ ತಡೆಯಲು ಎಐ ತಂತ್ರಜ್ಞಾನ ಬಳಿಸಿ ಅದರ ಕಣ್ಗಾವಲಿನಲ್ಲಿ ಯೋಜನೆ ಸುರಕ್ಷಿತವಾಗಿರಲಿದೆ. ಕೆಲಸದ ದಿನಗಳು ಹೆಚ್ಚಿಸಿರುವುದರಿಂದ ಹಾಗೂ ಮೊದಲು 11,300 ಕೋಟಿ ಇದ್ದ ಹಣವನ್ನು ಹೆಚ್ಚಿಗೆ ಮಾಡಿ ಅದನ್ನು 86,000 ಕೋಟಿಗಳಿಗೆ ಹೆಚ್ಚಿಸಿರುವುದರಿಂದ ಗ್ರಾಮೀಣ ಭಾಗದಲ್ಲಿ ರಸ್ತೆಗಳು, ಒಳ ಚರಂಡಿ, ಸಮುದಾಯ ಭವನ ನಿರ್ಮಾಣ, ಕೆರೆಗಳ ಹೂಳೆತ್ತುವಿಕೆ, ಹೊಸ ಕೆರೆಗಳ ನಿರ್ಮಾಣ ಸೇರಿದಂತೆ ಗ್ರಾಮೀಣ ವಿಕಾಸಕ್ಕೆ ಇದು ಅನುಕೂಲ ಆಗಲಿದೆ. ಜನರು ಗೂಳೆ ಹೋಗುವುದನ್ನು ಇದರಿಂದ ತಪ್ಪುತ್ತದೆ. ಸ್ಥಳಿಯವಾಗಿ ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ಹಾಗೂ ಆರ್ಥಿಕ ಸುಭಿಕ್ಷೆ ದೊರೆಯಲಿದ್ದು, ಇದು 2047ರ ವಿಕಸಿತ ಭಾರತದ ವಿಕಾಸದ ಹಾದಿ ಸುಗಮಗೊಳಿಸಲಿದೆ ಎಂಬುದನ್ನು ಸಿದ್ಧರಾಮಯ್ಯ ಹಾಗೂ ಡಿ.ಕೆ ಶಿವಕುಮಾರ ಅರ್ಥ ಮಾಡಿಕೊಳ್ಳಲಿ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಮಾತನಾಡಿ, ಹುಮನಾಬಾದ್‌ನಲ್ಲಿ ಅಕ್ರಮ ಲೆಔಟ್ ಧಂದೆ ನಡೆಯುತ್ತಿದ್ದು, ಅದನ್ನು ತಡೆಯಬೇಕೆಂದು ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ನಮ್ಮ ಶಾಸಕರಾದ ಸಿದ್ದು ಪಾಟೀಲ ಅವರು ವಿನಂತಿಸುವಾಗ ವಿಧಾನ ಪರಿಷತ್ ಸದಸ್ಯರಾದ ಭೀಮರಾವ ಪಾಟೀಲ ಹಾಗೂ ಅವರ ಸಹೋದರ ಎಮ್.ಎಲ್.ಸಿ ಡಾ.ಚಂದ್ರಶೇಖರ ಪಾಟೀಲ ಅವರು ನಮ್ಮ ಶಾಸಕರ ಮೇಲೆ ಹಲ್ಲೆಗೆ ಯತ್ನಿಸಿದಲ್ಲದೆ ಅವಾಚ್ಯ ಶಬ್ದಗಳನ್ನು ಉಪಯೋಗಿಸಿರುವುದು ನಾಚಿಕೆಗೇಡಿನ ಸಂಗತಿ. ಹಲ್ಲೆ ಎಸಗಿದ ಎಮ್.ಎಲ್.ಸಿ ಸಹೋದರರಿಬ್ಬರ ವಿರೂದ್ಧ ರಾಜ್ಯ ಸರ್ಕಾರ ಸಮೊಟೊ ಕೇಸ್ ದಾಖಲಿಸಿ ತಪ್ಪಿತಸ್ತರ ವಿರೂದ್ಧ ಕ್ರಮ ಜರುಗಿಸಬೇಕೆಂದು ಕೋರಿದರು. ಒಂದು ವಾರದೊಳಗೆ ಹಲ್ಲೆಗೈದವರ ವಿರೂದ್ಧ ಕ್ರಮ ವಹಿಸಬೇಕು ಹಾಗೂ ಅಕ್ರಮ ಲೆಔಟ್ ರದ್ದು ಮಾಡಬೇಕು. ಇಲ್ಲದೆ ಹೋದಲ್ಲಿ ಜನವರಿ 12ರಂದು ಉಗ್ರಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿಗಳು ಹಾಗೂ ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪ ಔರಾದೆ, ಮಹಾನಗರ ಪಾಲಿಕೆ ಸದಸ್ಯ ಶಶಿ ಹೊಸಳ್ಳಿ, ಪಕ್ಷದ ಪ್ರಮುಖರಾದ ಬಸವರಾಜ ಪವಾರ, ರಾಜಕುಮಾರ ನೆಮತಾಬಾದ್, ಸುಭಾಷ ಮಡಿವಾಳ, ಬಾಬುರಾವ ಮಲ್ಕಾಪುರೆ, ಶ್ರೀನಿವಾಸ ಚೌಧರಿ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

ಇದೇ ವೇಳೆ ಹಿರಿಯ ಪತ್ರಕರ್ತ ಲಿ.ನಾಗಶೆಟ್ಟಿ ಧರಂಪುರ ಅವರ ಅಗಲಿಕೆಗಾಗಿ ಎರಡು ನಿಮಿಷ ಮೌನ ಆಚರಿಸಿ ಶೃದ್ದಾಂಜಲಿ ಸಲ್ಲಿಸಲಾಯಿತು.

# ಚೀಟಿ ವ್ಯವಹಾರ 800ಕ್ಕೂ ಹೆಚ್ಚು ಜನರನ್ನು ಸೇರಿಸಿ 100 ಕೋಟಿ ರೂ. ಹಣ ವಂಚನೆ





• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ದೇವಿನಗರ ನಿವಾಸಿ ವೆಂಕಟೇಶ್ (ತಂದೆ:ಕಟ್ಟೇಗೌಡ, ವಯಸ್ಸು 50) ಎಂಬಾತ ಚೀಟಿ ವ್ಯವಹಾರ ನಡೆಸುತ್ತಿದ್ದು, ಸಾರ್ವಜನಿಕರಿಂದ ಸುಮಾರು 800ಕ್ಕೂ ಹೆಚ್ಚು ಜನರನ್ನು ಚೀಟಿಯಲ್ಲಿ ಸೇರಿಸಿ ಸುಮಾರು 100 ಕೋಟಿ ರೂ.

ಹಣವಂಚನೆ ಮಾಡಿ ಪರಾರಿಯಾಗಿರುವ ಘಟನೆ ಬಳ್ಳಾರಿಯಲ್ಲಿ ಬೆಳಕಿಗೆ ಬಂದಿದೆ.

ವಂಚನೆಗೆ ಒಳಗಾದವರು ಇಂದು ಬಳ್ಳಾರಿ ಬ್ರೂಸ್ಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪ್ರಕರಣ ದಾಖಲಾಗಿದೆ.

ಆರೋಪಿಯು ಹೆಚ್ಚಿನ ಲಾಭದ ಆಮಿಷವೊಡ್ಡಿ ಜನರಿಂದ ಹಣ ಸಂಗ್ರಹಿಸಿ, ಬಳಿಕ ಹಣದೊಂದಿಗೆ ನಾಪತ್ತೆಯಾಗಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದು, ಆರೋಪಿಯ ಪತ್ತೆಗೆ ಕ್ರಮ ವಹಿಸಲಾಗಿದೆ.

ಈ ಘಟನೆ ಹೊರಬಿದ್ದ ನಂತರ ಬಳ್ಳಾರಿ ನಗರದ ನಾಗರಿಕರು, ವಿಧಿ ವ್ಯಾಪಾರಿಗಳು ಹಾಗೂ ವಿವಿಧ ವೃತ್ತಿ ವ್ಯಾಪಾರ ನಡೆಸುತ್ತಿರುವವರು ತೀವ್ರ ಆತಂಕ ವ್ಯಕ್ತಪಡಿಸಿದ್ದು,

ವಂಚನೆಗೆ ಒಳಗಾದ ಇನ್ನಷ್ಟು ಜನರು ಮುಂದೆ ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಚೀಟಿ ವ್ಯವಹಾರದಲ್ಲಿ ಹಣ ಹೂಡಿದವರು ತಮ್ಮ ಹಣ ಕಳೆದುಕೊಂಡಿರುವ ಅನುಮಾನದಿಂದ ಗುಂಪುಗಳಾಗಿ ಚರ್ಚೆ ನಡೆಸುತ್ತಿದ್ದು, ಕೆಲವರು ಈಗಾಗಲೇ ಪೊಲೀಸ್ ಠಾಣೆಗೆ ದೂರು ಸಲ್ಲಿಸಲು ಮುಂದಾಗಿರುವುದು ಕಂಡುಬಂದಿದೆ.

ಈ ಪ್ರಕರಣ ಬಳ್ಳಾರಿ ನಗರದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದ್ದು, ವಂಚನೆಜಾಲ ಇನ್ನಷ್ಟು ವಿಸ್ತಾರವಾಗಿರುವ ಶಂಕೆ ವ್ಯಕ್ತವಾಗಿದೆ.

# ಸೌರಭ ದಾಸ ಸಾಹಿತ್ಯ ವಿದ್ಯಾಲಯದ ಪರೀಕ್ಷೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಮಧ್ವ ಸಂಘದಲ್ಲಿ ಹಾಗೂ ಶ್ರೀ ರಾಘವೇಂದ್ರ ಶ್ರೀ ಮಠದಲ್ಲಿ ವಿಶ್ವ ಮಧ್ವ ಮಹಾ ಪರಿಷತ್‌ನ ಅಂಗ ಸಂಸ್ಥೆಯಾದ ಸೌರಭ ದಾಸ ಸಾಹಿತ್ಯ ವಿದ್ಯಾಲಯದಿಂದ ಆಯೋಜಿಸಿದ್ದ ವಿವಿಧ ಪರೀಕ್ಷೆಗಳು ನಡೆದವು. ಕಳೆದ ಜ.3 ಹಾಗೂ 4 ರಂದು ದಾಸ, ದಾಸ ಶ್ರೀ, ದಾಸ ನಿಧಿ, ದಾಸ ರತ್ನ, ದಾಸ ಶಿರೋಮಣಿ, ದಾಸ ಭಾವ, ದಾಸ ಸಾಗರ, ದಾಸ ದರ್ಶನದ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆದರು. ಪಂ.ಕರಣಂ ಶ್ರೀನಿವಾಸ್ ಆಚಾರ ಹಾಗೂ ಪಂ.ಹನುಮಂತ ಆಚಾರ್ ನಂದಿಹಳ್ಳಿ ಅವರು ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳನ್ನು ಉದ್ಘಾಟಿಸಿ, ಪರೀಕ್ಷೆಗಳಿಗೆ ಚಾಲನೆ ನೀಡಿದರು. ಇದಕ್ಕೂ ಮುನ್ನ ನಗರದ ಶ್ರೀಮದುತ್ತರಾಧಿ ಮಠದಲ್ಲಿ ದಾಸ ಸೌರಭ ಸಂಚಾಲಕಿ ಸೌಭಾಗ್ಯ ಕಾವಿ ಅವರ ನೇತೃತ್ವದಲ್ಲಿ ಶ್ರೀಮಠದ ಆಚಾರ್ಯ-ರಿಂದ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಪಂ. ಕರಣಂ ಶ್ರೀನಿವಾಸ್ ಆಚಾರ ಅವರು ಮಾತನಾಡಿ, ಶ್ರೀ ಉತ್ತರಾದಿ ಮಠದ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥರ ಪರಮಾನುಗ್ರಹದಿಂದ ಹಾಗೂ ಹಿರಿಯರ ಪುಣ್ಯದ ಫಲವಾಗಿ ಸೌರಭ ದಾಸ ಸಾಹಿತ್ಯದ ವಿದ್ಯಾಲಯದಿಂದ ಪರೀಕ್ಷೆಗಳು ನಡೆಯುತ್ತಿದ್ದು, ಸಂತಸ ಮೂಡಿಸಿದೆ. ಈ ಪರೀಕ್ಷೆಗಳು 9ನೇ ವರ್ಷಕ್ಕೆ ಕಾಲಿಟ್ಟಿದೆ. ವಿದ್ಯಾಲಯದ ಅಧ್ಯಕ್ಷ ಪಂ.ಪ್ರಮೋದ್ ಆಚಾರ ಪೂಜಾರ್ ಅವರ ಅವಿರತ ಶ್ರಮದಿಂದ ವರ್ಷದಿಂದ ವರ್ಷಕ್ಕೆ ಹೆಚ್ಚು ಆಸಕ್ತ ಮಹಿಳೆಯರು, ಪುರುಷರು, ವಯೋವೃದ್ಧರು ಸೇರಿ ಎಲ್ಲ ವರ್ಗದವರು ಪರೀಕ್ಷೆಯಲ್ಲಿ ಭಾಗವಹಿಸುತ್ತಿದ್ದಾರೆ. ಈ ಪರೀಕ್ಷೆಗಳಿಂದ ಎಲ್ಲರಿಗೂ ಜ್ಞಾನ ವೃದ್ಧಿಯಾಗಲಿದೆ ಎಂದರು. ಪಂ.ಹನುಮಂತ ಆಚಾರ್ ನಂದಿಹಳ್ಳಿ ಅವರು ಮಾತನಾಡಿ, ಸೌರಭ ಅಂದ್ರೆ ಸುರಭಿ ಎಂದರ್ಥ, ಸುರಭಿ ಅಂದ್ರೆ ಗೋವಿನ ಹೆಸರು, ಸೌರಭ ಎನ್ನುವ ಗೋವಿನ ಹಾಲು ಸದಾ ಅಮೃತವನ್ನು ನೀಡುತ್ತಿದೆ. ಸುರಭಿ ಎನ್ನುವ ಹಸುವಿನ ಹಾಲು ಕರೆಯಲು ಕೃಷ್ಣ ಬಂದ, ಇಲ್ಲಿ ಸೌರಭ ಎಂಬ ಹಸುವಿನ ಹಾಲನ್ನು ಕರೆಯಲು ಪಂ.ಪ್ರಮೋದ್ ಆಚಾರ ಬಂದ್ರು, ಸೌರಭ ಅಂದ್ರೆ, ಸಂಸ್ಕೃತದಲ್ಲಿ (ಸುಸ್ತು) ಚೆನ್ನಾಗಿ ಎಂದರ್ಥ ಎಂದರು. ದಾಸ ಸಾಹಿತ್ಯದ ಮೌಲ್ಯಗಳ ಬಗ್ಗೆ ಅರಿವು ಮೂಡಿಸಲು ಹಾಗೂ ವಿದ್ಯಾಲಯದ ಬಗ್ಗೆ ಮಾಹಿತಿ ನೀಡುವ ಮೂಲಕ ಪ್ರತಿ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ದಾಸ ಸಾಹಿತ್ಯದ ಆಸಕ್ತರನ್ನು ಒಗ್ಗೂಡಿಸುವಲ್ಲಿ ಶ್ರೀ ಸೌರಭ ದಾಸ ಸಾಹಿತ್ಯ ಬಳ್ಳಾರಿ ವಿಭಾಗ್ ಎಲ್ಲರ ಸಹಕಾರದಿಂದ, ಸೌಭಾಗ್ಯ ಅವರ ಶ್ರಮದಿಂದ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುತ್ತಿದೆ. ವಿಶ್ವದಾದ್ಯಂತ 130 ಕೇಂದ್ರಗಳಲ್ಲಿ 15 ಸಾವಿರಕ್ಕೂ ಹೆಚ್ಚು ಸದಸ್ಯರಿಗೆ ಏಕ ಕಾಲದಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಇದು ಸೌರಭ ದಾಸ ಸಾಹಿತ್ಯ ವಿದ್ಯಾಲಯದ ಹೆಮ್ಮೆಯಾಗಿದೆ ಎಂದರು. ಈ ಸಂದರ್ಭದಲ್ಲಿ ಪರಿಮಳ ಶ್ರೀನಿವಾಸ್ ಆಚಾರ ಕರಣಂ ಇದ್ದರು.

# ರಕ್ತದಾನದ ಮೂಲಕ ಪ್ರಾಣ ಉಳಿಸಲು ಮುಂದಾಗಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ರಕ್ತದಾನ ಶಿಬಿರವನ್ನು ಆಯೋಜಿಸುವ ಮೂಲಕ ಜೀವವನ್ನು ಉಳಿಸುವ ಕೆಲಸ ಯುವ ರೆಡ್ ಕ್ರಾಸ್ ಮಾಡುತ್ತಿದೆ ಎಂದು ವಿಜಯನಗರ ಶ್ರೀಕೃಷ್ಣದೇವರಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ ಮುನಿರಾಜು ಅವರು ಹೇಳಿದರು.

ಬುಧವಾರ ವಿಶ್ವವಿದ್ಯಾಲಯದ ಡಾ.ಬಿ.ಆರ್

ಅಂಬೇಡ್ಕರ್ ಸಭಾಂಗಣದಲ್ಲಿ ಬಳ್ಳಾರಿ ಯುವ ರೆಡ್ ಕ್ರಾಸ್ ಘಟಕ ಹಾಗೂ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿಗಳಿಗೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ರಕ್ತದಾನ ಮಾಡುವುದರಿಂದ ವಿಶ್ವವಿದ್ಯಾಲಯದ ಕೀರ್ತಿ ಹೆಚ್ಚಾಗುತ್ತದೆ. ಒಬ್ಬ ವ್ಯಕ್ತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ. ಯುವಕರು ರಕ್ತದಾನ ಮಾಡಲು ಮುಂದಾಗಬೇಕು. ರಕ್ತದಾನದ ಮಾಡುವುದರಿಂದ ಆರೋಗ್ಯಕ್ಕೆ ಹಲವಾರು ಪ್ರಯೋಜನಗಳಿವೆ. ಯುವ ಜನತೆ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿರಿ. ವಿವಿಯ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಹೆಚ್ಚು ರಕ್ತದಾನ ಮಾಡುವವರನ್ನು ವಿವಿಯ ವತಿಯಿಂದ ಅತ್ಯುತಮ ಗೌರವ ಪ್ರಶಸ್ತಿ ನೀಡುವುದಾಗಿ ಹೇಳಿದರು.

ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಎಮ್.ಎ ಶಕೀಬ್ ಅವರು ಮಾತನಾಡಿ, ಕಾಲಕಾಲಕ್ಕೆ ರಕ್ತದಾನ

ಮಾಡುವುದರಿಂದ ಆರೋಗ್ಯ ಸ ಮ ತೋ ಲ ನ ವಾ ಗಿ ರ ಲು ಸಹಾಯಕವಾಗುತ್ತದೆ ಎಂದರು.

ಬಳಿಕ ರೆಡ್ ಕ್ರಾಸ್ ಸಂಸ್ಥೆ ಬೆಳೆದು ಬಂದ ಹಾದಿ ಹಾಗೂ ಅದರ ಪ್ರಾಮುಖ್ಯತೆಯನ್ನು ತಿಳಿಸಿದರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ರೆಡ್‌ಕ್ರಾಸ್ ಘಟಕದ 100ಕ್ಕು ಹೆಚ್ಚು ಕಾರ್ಯಕ್ರಮಾಧಿಕಾರಿಗಳು ಉಪಸ್ಥಿತರಿದ್ದರು.

ವಿವಿಯ ಯುವ ರೆಡ್ ಕ್ರಾಸ್ ನೋಡಲ್ ಅಧಿಕಾರಿ ಡಾ.ರಾಜೇಂದ್ರ ಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಂದಿಸಿದರು. ಮೇಘರಾಜ ಅತಿಥಿಗಳನ್ನು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ವಿವಿಯ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

# ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ಡಾ.ಸುಮನ್ ಅಧಿಕಾರ ಸ್ವೀಕಾರ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ಬಳ್ಳಾರಿ ಜಿಲ್ಲೆಯ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಡಾ.ಸುಮನ್ ಡಿ.ಪೆನ್ನೇಕರ್ ಅವರನ್ನು ನೇಮಿಸಿ ಸರ್ಕಾರ ಆದೇಶಿಸಿದ್ದು, ಅವರು ಗುರುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು.

ಗುಪ್ತವಾರ್ತೆ ವಿಭಾಗದ ಉಪ ಪೊಲೀಸ್ ಆಯುಕ್ತರಾಗಿದ್ದ ಡಾ.ಸುಮನ್ ಡಿ.ಪೆನ್ನೇಕರ್ ಅವರು 2013 ನೇ ಬ್ಯಾಚ್ ನ ಐಪಿಎಸ್ ಅಧಿಕಾರಿಯಾಗಿದ್ದಾರೆ.

ಈ ಹಿಂದೆ ನಿಯೋಜನೆಗೊಂಡಿದ್ದ ಎಸ್‌ಪಿ ರಂಜೀತ್ ಕುಮಾರ್ ಬಂಡಾರು ಅವರು ಅಧಿಕಾರ ಹಸ್ತಾಂತರಿಸಿದರು.

# ಅಸ್ಕಿ ಫೌಂಡೇಶನ್ ಸೇವಾ ಕಾರ್ಯ ಶ್ಲಾಘನೀಯ: ಶಿವರಾಜ



• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**

ತಮ್ಮ ಫೌಂಡೇಶನ್ ದ ಮೂಲಕ ಜಾತಿ ಮತ ಭೇದವಿಲ್ಲದೆ ಸಮಾಜದ ಎಲ್ಲ ವರ್ಗದ ಜನರ ಸೇವೆಯನ್ನು ಮಾಡುತ್ತಿರುವ ಸಮಾಜ ಸೇವಕ ಸಿ.ಬಿ.ಅಸ್ಕಿ ಅವರ ಕಾರ್ಯ ಅತ್ಯಂತ ಶ್ಲಾಘನೀಯ ಎಂದು ಯುವ ಮುಖಂಡ ಶಿವರಾಜ ಗುಂಡಕನಾಳ(ನಾಗೂರ) ಹೇಳಿದರು. ಗುರುವಾರ ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠದಲ್ಲಿ ಸಿ.ಬಿ.ಅಸ್ಕಿ ನೇತೃತ್ವದ ಅಸ್ಕಿ ಫೌಂಡೇಶನ್ ಕೊಣ್ಣೂರ ವತಿಯಿಂದ ಹಮ್ಮಿಕೊಂಡ 2026ರ ನೂತನ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು. ಫೌಂಡೇಶನ್ ಅಧ್ಯಕ್ಷ, ಸಮಾಜ ಸೇವಕ ಸಿ.ಬಿ.ಅಸ್ಕಿ ಅವರು ಮಾತನಾಡಿ ನಮ್ಮ ಫೌಂಡೇಶನ್ ಮೂಲಕ ನಾನು ನನ್ನ ಶಕ್ತಿಗನುಸಾರವಾಗಿ ಕೆಲವು ಸೇವಾ ಕಾರ್ಯಗಳನ್ನು ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರವಿದೆ. ಈ ಬಾರಿ ನಮ್ಮ ಫೌಂಡೇಶನ್ ದಿಂದ ಹೊರ ತಂದ ನೂತನ ಕ್ಯಾಲೆಂಡರ್ ಬಹಳ ವಿಶಿಷ್ಟವಾಗಿದ್ದು ನಮ್ಮ ಮತಕ್ಷೇತ್ರದಲ್ಲಿ ನಡೆಯಲಿರುವ ಎಲ್ಲಾ ಪ್ರಮುಖ ಕಾರ್ಯಕ್ರಮಗಳ ಮಾಹಿತಿಯನ್ನು ಒಳಗೊಂಡಿದೆ. ಇದು ಶ್ರೀ ಮಠದಲ್ಲಿ ಪೂಜ್ಯರ ಹಾಗೂ ಮುಸ್ಲಿಂ ಧರ್ಮಗುರುಗಳ ಸಮ್ಮುಖದಲ್ಲಿ ಬಿಡುಗಡೆಗೊಳ್ಳುತ್ತಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ ಎಂದರು. ಸಾನಿಧ್ಯ ವಹಿಸಿ ವೇ.ಮೂ.ಮುರುಗೇಶ ವಿರಕ್ತಮಠ ಮಾತನಾಡಿ ಅಸ್ಕಿ ಅವರು ಶ್ರೀ ಮಠದ ಭಕ್ತರಾಗಿದ್ದಾರೆ ಅವರಿಗೆ ಖಾಸ್ಗತ ಅಜ್ಜನ ಆಶೀರ್ವಾದ ಸದಾ ಇದೆ ಅವರು ಇನ್ನೂ ಉತ್ತರೋತ್ತರವಾಗಿ ಬೆಳೆಯಲಿ ಎಂದರು. ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ ಸಮ್ಮುಖ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಎಸ್.ಎಚ್.ಪಾಟೀಲ(ಬಾವೂರ), ಹುಸೇನ ಜಮಾದಾರ, ವೀರೇಶ ಬಾಗೇವಾಡಿ, ಇಬ್ರಾಹಿಂ ಮನ್ಸೂರ, ವಿಜಯಸಿಂಗ್ ಹಜೇರಿ, ಪರಶುರಾಮ ತಂಗಡಗಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ, ಜೈಭೀಮ ಮುತ್ತಗಿ, ಶಮ್ಮುದ್ದೀನ ನಾಲಬಂದ, ಮಹಾಂತೇಶ ಬೊಮ್ಮನಹಳ್ಳಿ, ಬಸವರಾಜ ಜೀರಲಭಾವಿ(ಬಳಗಾನೂರ), ರೆಹಮಾನ್ ಅವಟಿ(ಕೊಣ್ಣೂರ), ಸದ್ದಾಮ್ ಮನಗೂಳಿ, ವೀರೇಶಗೌಡ ಅಸ್ಕಿ, ರಾಮನಗೌಡ ಹೊಸಮನಿ, ಎಲ್ಲಪ್ಪ ಮಾದರ, ಆಸಿಫ್ ಕೆಂಭಾವಿ, ರಮೇಶ ಹಿಪ್ಪರಗಿ, ಆನಂದ್ ಅಸ್ಕಿ, ಮಲ್ಲು ಢವಳಗಿ, ಆಬೀದ ಲಾಹೋರಿ, ಶಾಹಿದ್ ಶಿವಣಗಿ ಹಾಗೂ ಫೌಂಡೇಶನ್ ಪದಾಧಿಕಾರಿಗಳು ಇದ್ದರು.

# ಅಧಿಕಾರ ಸ್ವೀಕಾರ

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**



ಉಪ ವಿಭಾಗದ ಕಾರಿ ಕಚೇರಿಯಲ್ಲಿ ನೂತನ ಉಪ ವಿಭಾಗಾಧಿಕಾರಿಯಾಗಿ ಕುಮಾರಿ ಕಾವ್ಯರಾಣಿ ರವರು ಅಧಿಕಾರ ಸ್ವೀಕರಿಸಿದರು ಈ ಸಂದರ್ಭದಲ್ಲಿ ತಾಸಿಲ್ದಾರ್ ಮಂಜುನಾಥ್ ಹಾಗೂ ಉಪಯುಭಾಗಾಧಿಕಾರಿಯ ಕಚೇರಿಯ ತಹಸಿಲ್ದಾರ್ ಯಾದವ್ ಗಿರೀಶ್ ಹಾಗೂ ಇನ್ನಿತರ ಅಧಿಕಾರಿ ಗಳು ನೂತನ ಉಪಯು ವಿಭಾಗ ಧಿಕಾರಿ ಕಾವ್ಯ ರಾಣಿ. ಹೂ ಗುಜ್ಜೆ ನೀಡಿ ಶುಭ ಕೋರಿದರು

# ಕಪ್ಪುಪಟ್ಟಿ ಧರಿಸಿ ಮುಷ್ಕರ



ಹುಣಸೂರು: ನಗರದ. ಎಚ್ ಪಿ ಬಿ ಎಸ್ ಸರ್ಕಾರಿ ಪ್ರಾಥಮಿಕ ಹಿರಿಯ ಬಾಲಕರ ಶಾಲೆಯಲ್ಲಿ ಅಖಿಲ ಭಾರತ ಶಿಕ್ಷಕರ ಫೆಡರೇಶನ್ ಮತ್ತು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕರೆಯ ಮೇರೆಗೆ ಸೇವಾ ನಿರತ ಶಿಕ್ಷಕರಿಗೆ ಟಿಇಟಿ ಪರೀಕ್ಷೆ ಬರೆಯಲು ಸುಪ್ರೀಂ ಕೋರ್ಟ್ ಆದೇಶವನ್ನು ಮಾಡಿರುವುದನ್ನು ಖಂಡಿಸಿ ಸರ್ಕಾರ ವಿಶೇಷ ನಿಯಮಾವಳಿ ರೂಪಿಸುವ ಮೂಲಕ ರದ್ದುಪಡಿಸುವಂತೆ ಕೋರಿ ದೇಶಾದ್ಯಂತ ಕಪ್ಪುಪಟ್ಟಿ ಧರಿಸಿ ಮುಷ್ಕರ ಕೈಗೊಂಡಿದ್ದು ಈ ಸಂಬಂಧ ಹುಣಸೂರು ಹಂಗಾಮಿ ಆಧ್ಯಕ್ಷರಾದಂತ ಶ್ರೀಮತಿ ಜಿಎನ್ ಜ್ಯೋತಿರವರು ಹಾಗೂ ತಾಲ್ಲೂಕಿನ ಶಿಕ್ಷಕರ ಸಂಘದ ಪ್ರತಿನಿಧಿಗಳು ಮತ್ತು ಬಹುತೇಕ ಶಿಕ್ಷಕರು ಕಪ್ಪು ಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸುವ ಮೂಲಕ ಮುಷ್ಕರದಲ್ಲಿ ಭಾಗಿಯಾದರು.

ಸಂದರ್ಭದಲ್ಲಿ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷರಾದ ನರಸಿಂಹರವರು ಸಿಆರ್‌ಪಿ ಮಹಮ್ಮದ್ ಫಾರೂಕ್, ಊಕಃಖ ಶಾಲೆಯ ಮುಖ್ಯ ಹಾಗೂ ಸಾಹಿತಿ ಡಾ ಶಿಕ್ಷಕರಾದ ಮಾಧು ಪ್ರಸಾದ್, ಬಲಕೆರೆ ಶಾಲೆಯ ಮುಖ್ಯ ಶಿಕ್ಷಕರಾದ ಸಿಎಸ್ ಮಹೇಶ್, ಸಹ ಶಿಕ್ಷಕರುಗಳಾದ ವೀಣಾ ವಸಂತ ಕುಮಾರಿ ಜಯರಾಮೇಗೌಡ ಚೆಲುವರಾಜು ಕೃಷ್ಣಮೂರ್ತಿ ಸೋಮಸುಂದರ ಭಾಗಿಯಾಗಿದ್ದರು

## ಐ.ಎ.ಎಸ್, ಕೆ.ಎ.ಎಸ್ ಆಕಾಂಕ್ಷಿಗಳಿಗೆ ಕಾರ್ಯಾಗಾರ

# ಸಾಧನೆಗೆ ಪರಿಣಾಮಕಾರಿ ಅಧ್ಯಯನ ಮುಖ್ಯ: ಕುರೇರ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**




ಗುರಿ ಸಾಧನೆಗೆ ಪರಿಣಾಮಕಾರಿ ಅಧ್ಯಯನ ತಂತ್ರಗಳು ಮತ್ತು ಸಮಯ ನಿರ್ವಹಣೆ ಮುಖ್ಯವಾಗಿದೆ ಎಂದು ಜಿ.ಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ವಿದ್ಯಾರ್ಥಿಗಳಿಗೆ ಹೇಳಿದರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಭಾಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿ.ಪಂ ಕೌಶಲ್ಯಾಭಿವೃದ್ಧಿ, ತೋಟಗಾರಿಕೆ ವಿವಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಐ.ಎ.ಎಸ್, ಕೆ.ಎ.ಎಸ್ ಸ್ಪರ್ಧಾತ್ಮಕ ಆಕಾಂಕ್ಷಿಗಳಿಗೆ ಹಮ್ಮಿಕೊಂಡ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರಲ್ಲಿಯೂ ವಿಶ್ವವನ್ನು ಆಳುವ ಶಕ್ತಿ ಇರುತ್ತದೆ. ಇದಕ್ಕೆ ಪರಿಶ್ರಮ, ನಿರಂತರ ಪ್ರಯತ್ನ ಬೇಕಾಗುತ್ತದೆ ಎಂದು ತಿಳಿಸಿದರು.

ಹುಟ್ಟಿನಿಂದ ಎಲ್ಲರೂ ಬುದ್ದಿವಂತರಾಗಿ ಹುಟ್ಟುವದಿಲ್ಲ. ಬೆಳೆದು ಬಂದ ಹಾದಿ, ಪ್ರಯತ್ನದ ಫಲದಿಂದ ಯಶಸ್ಸು ಕಂಡುಕೊಂಡಿರುತ್ತಾರೆ. ಭಯ ಇಲ್ಲದಿದ್ದರೇ ಗುರಿ ಸಾಧನೆ ಮಾಡಲು ಸಾಧ್ಯವಾಗುವದಿಲ್ಲ. ಸಮಸ್ಯೆಗಳು ಇದ್ದಾಗ ಮಾತ್ರ ಅವುಗಳಿಗೆ ಪರಿಹಾರ ಕಂಡುಕೊಂಡು ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ. ನಾನು ಸಹ ಗ್ರಾಮೀಣ ಭಾಗದಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತು, ನಂತರ 6 ರಿಂದ 12ನೇ ತರಗತಿವರೆಗೆ ನವೋದಯ ವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ್ದೇನೆ. ಆಗ ಇಷ್ಟೊಂದು ಅನುಕೂಲ ಇರಲಿಲ್ಲ. ನಮಗೆ ಮಾರ್ಗದರ್ಶಕರೆಂದರೆ ಶಿಕ್ಷಕರಾಗಿದ್ದರು ಎಂದು ಕುರೇರ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತೋಟಗಾರಿಕೆ ವಿವಿಯ ಕುಲಪತಿ ಡಾ.ವಿಷ್ಣುವರ್ಧನ ಮಾತನಾಡಿ, ಅಸಾಧ್ಯವಾದುದು ಯಾವುದು ಇರುವದಿಲ್ಲ. ಕಠಿಣ ಪರಿಶ್ರಮ, ಸತತ ಪ್ರಯತ್ನ ಇದ್ದರೆ ಸಾಕು ಅಂದು-ಕೊಂಡ ಕಾರ್ಯ, ದ್ಯೇಯವನ್ನು ತಲುಪಲು ಸಾಧ್ಯವಾಗುತ್ತದೆ. ಐ.ಎ.ಎಸ್ ಎಂಬುದು ಕೇವಲ ಹುದ್ದೆ ಅಲ್ಲ, ದೇಶದ ನ್ಯಾಯಯುತವಾಗಿ ಸೇವೆ ಇದಾಗಿದೆ. ಉನ್ನತ ಮಟ್ಟದ ಹುದ್ದೆ ಇದಾಗಿದ್ದು, ಓರ್ವ ಐ.ಎ.ಎಸ್ ಅಧಿಕಾರಿ ಜಿಲ್ಲೆಯ ಚಿತ್ರಣವನ್ನೇ ಬದಲಾಯಿಸುವ ಸಾಮರ್ಥ್ಯ ಹೊಂದಿರುತ್ತಾರೆ ಎಂದರು.

ಕಾರ್ಯಾಗಾರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ವಿಶೇಷ ಆಹ್ವಾನಿತರಾಗಿ ಆಗಮಿಸಿದ ಬೆಂಗಳೂರು, ದೆಹಲಿ ಇನ್‌ಸ್ಟೈಟ್‌ನ ನಿರ್ದೇಶಕ ಜಿ.ಬಿ.ವಿನಯಕುಮಾರ ಅವರು ಐ.ಎ.ಎಸ್, ಕೆ.ಎ.ಎಸ್ ಪರೀಕ್ಷೆ ತಯಾರಿಗೆ ಆರಂಭಿಕ ಸವಾಲುಗಳನ್ನು ನಿಭಾಯಿಸಲು ಮತ್ತು ಪರೀಕ್ಷೆಗಳನ್ನು ಯಶಸ್ವಿಯಾಗಿ ಮಾಡುವ ಕುರಿತು ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ತೋಟಗಾರಿಕೆ ವಿವಿಯ ಡೀನ್ ಡಾ.ಬಾಲಾಜಿ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಬೆಳಗಾವಿ ಜಿ.ಎಸ್.ಟಿ ಸಹಾಯಕ ಆಯುಕ್ತ ಶಾನೂರ ಜಮಾದಾರ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಗುರುಪಾದಯ್ಯ ಹಿರೇಮಠ, ತೋಟಗಾರಿಕೆ ವಿವಿಯ ಡೀನ್ ಡಾ.ಶಾಂತಪ್ಪಟಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಶಿವಾನಂದ ಪಟ್ಟಣಶೆಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಇಲಾಖೆಯ ವಸತಿ ನಿಯಲದ, ತೋಟಗಾರಿಕೆ ವಿವಿಯ ಹಾಗೂ ಇತರೆ ಕಾಲೇಜು ಸೇರಿ ಒಟ್ಟು 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ನೇತ್ರದಾನ ಮಾಡಿ ಅಂಧರ ಬಾಳಿಗೆ ಬೆಳಕಾಗಿ: ಡಾ.ಭಾಗ್ಯಾ ಪಾಟೀಲ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಪ್ರತಿಯೊಬ್ಬ ಮನುಷ್ಯ ನಿಧನದ ನಂತರದೇಹದಪ್ರಮುಖಅಂಗಾಂಗಳ ದಾನಕ್ಕೆಮುಂದಾಗಬೇಕು.ಅದರಲ್ಲೂ ನೇತ್ರ ದಾನದ ಮೂಲಕ ಅಂ-ಧರ ಬಾಳಿಗೆ ಬೆಳಕಾಗಲು ದೃಢ ಸಂಕಲ್ಪ ಮಾಡಬೇಕು ಎಂದು ನಗರದ ಧನುಷ್ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಯ ನಿರ್ದೇಶಕಿ ಹಾಗೂ ಲಯನ್ಸ ಕ್ಲಬ್‌ನ ಡಾ.ಭಾಗ್ಯಾ ಪಾಟೀಲ ಹೇಳಿದರು.

ನಗರದ ಸಿ.ವಿ.ಅಥಣಿ ಕಲ್ಯಾಣ ಮಂಟಪದಲ್ಲಿ ಲಯನ್ಸಕ್ಲಬ್,ಬಿವಿವಿ ಸಂಘದ ನೇತ್ರ ಭಂಡಾರ ಮತ್ತು ಪಾರದರ್ಶಕ ಪಟಲ ಜೋಡಣಾ ಕೇಂದ್ರದಆಶ್ರಯದಲ್ಲಿಹಮ್ಮಿಕೊಂಡಿದ್ದ ನೇತ್ರದಾನ ಹಾಗೂ ಅಂಗಾಂಗ ದಾನಗಳ ಮಹತ್ವ,ಸ್ವಯಂ ಪ್ರೇರಿತ ನೋಂದಣಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ನಮ್ಮ ದೇಶ, ರಾಜ್ಯದಲ್ಲಿ ಸಾವಿರಾರು ಜನರು ಕಣ್ಣಿಲ್ಲದೇ ಜೀವನ ನಡೆಸುತ್ತಿದ್ದಾರೆ.

ಅವರ ಬಳಿ ಹಲವು ರೀತಿಯ ಪ್ರತಿಭೆ ಇದ್ದರೂ, ಕಣ್ಣಿಲ್ಲದೇ ಬಾಳು ಕತ್ತಲಾಗಿರುತ್ತದೆ. ಅಂತವರ ಬಾಳಿಗೆ ಬೆಳಕಾಗಲು ನೇತ್ರದಾನ ಅವಶ್ಯವಿದೆ. ಪ್ರತಿದಿನ ನೂರಾರು ಜನರು, ವಿವಿಧ ಕಾರಣಕ್ಕೆ ನಿಧನರಾಗುತ್ತಾರೆ.

ಆದರೆ ಮೂಢ ನಂಬಿಕೆ ಅಥವಾ ಮತ್ಯಾವುದೇ ಕಾರಣದಿಂದ ಅಂಗಾಂಗ ದಾನ ಮಾಡಲು ಮುಂದೆ ಬರುವುದಿಲ್ಲ ಎಂದ ಡಾ.ಪಾಟೀಲ, ಮನುಷ್ಯನ ದೇಹದಲ್ಲಿ ಇರುವ ಕೆಲವು ಪ್ರಮುಖ ಅಂಗಾಂಗ ದಾನದಿಂದ ಬೇರೊಬ್ಬರ ಬದುಕು ಹಸನಾಗುತ್ತದೆ. ನಿಧನದ ಬಳಿಕ ಪರೋಪಕಾರಿಯಾಗಲು ಮತ್ತೊಬ್ಬರ ಜೀವನಕ್ಕೆ ಬೆಳಕಾಗಲು ಅಂಗಾಂಗ ದಾನ ಮಾಡಬೇಕು. ಈ ನಿಟ್ಟಿನಲ್ಲಿ ಲಯನ್ಸ ಕ್ಲಬ್‌ನಿಂದ ನೇತ್ರದಾನ ಹಾಗೂ ಅಂಗಾಂಗ ದಾನದ ಕುರಿತು ಜಾಗೃತಿ, ನೋಂದಣಿ ಕಾರ್ಯಕ್ರಮ ನಡೆಸುತ್ತಿರುವುದು ಸಮಾಜಮುಖಿ ಕಾರ್ಯಕ್ರಮ. ಇದರ ಪ್ರಯೋಜನ ಪ್ರತಿಯೊಬ್ಬರೂ ಪಡೆಯಬೇಕು ಎಂದು ಸಲಹೆ ನೀಡಿದರು.

ಬಿವಿವಿ ಸಂಘದ ಎಸ್.ಎನ್. ಎಂ.ಸಿ ವೈದ್ಯಕೀಯ ಕಾಲೇಜಿನ ನೇತ್ರತಜ್ಞೆಡಾ.ಜಯಶ್ರೀ ನಾಗಾವಿ, ನೇತ್ರದ ಬಗ್ಗೆ ಹಾಗೂ ನೇತ್ರದಾನದ ಮಹತ್ವ,ಮರಣದ ನಂತರ ಅದನ್ನು ಪಡೆದುಕೊಳ್ಳುವ ರೀತಿ ಕುರಿತು ವಿವರಿಸಿದರು.

ನೇತ್ರದಾನದಿಂದ ಓರ್ವ ಅಂಧರ ಬಾಳಿಗೆ ಬೆಳಕು ನೀಡಬಹುದು. ಪ್ರತಿಯೊಬ್ಬರೂ ತಮ್ಮ ನಿಧನದ ಬಳಿಕ ನೇತ್ರ ದಾನಕ್ಕೆ ಮುಂದಾಗಬೇಕು ಎಂದು ಕೋರಿದರು.

ಹಿರಿಯ ನೇತ್ರ ತಜ್ಞ, ಲಯನ್ ಲಿಂಗರಾಜ ಚಂದರಗಿ,ಪ್ರತಿಯೊಬ್ಬರೂ ನೇತ್ರ ದಾನ ಮಾಡಲು ಮುಂದೆ ಬರಬೇಕು ಎಂದರು. ಇದೇ ವೇಳೆ ಸುಮಾರು 45 ಜನ ನೇತ್ರದಾನ ಮಾಡಲುಹೆಸರುನೋಂದಾಯಿಸಿದರು. ಅಂಗಾಂಗ ದಾನಗಳ ಮಹತ್ವದ ಬಗ್ಗೆ ಮೂತ್ರಪಿಂಡ ರೋಗ ತಜ್ಞ ಡಾ.ಚಿರಾಗ್ ವಿವರಿಸಿದರು.

ಲಾಯನ್ಸ್‌ಕ್ಲಬ್ ಅಧ್ಯಕ್ಷ ಡಿಂಕೇಶ ಬರಾನಪುರ, ಕಾರ್ಯದರ್ಶಿ ಸೂರಜ್ ಪಾಟೀಲ, ಖಜಾಂಚಿ ಚನ್ನಬಸು ದಂಡಿನ, ಎಂ.ಜೆ. ಎಫ್. ಡಾ.ರಾಘವೇಂದ್ರ ವನಕಿ ಉಪಸ್ಥಿತರಿದ್ದರು. ಮೀರಾ ಸಫಾರಿ ಪ್ರಾರ್ಥಿಸಿದರು.

ಲಯನ್ಸ ಬ್ರಾಂಚ್ ಕ್ಲಬ್ ಅಧ್ಯಕ್ಷೆ ತೃಪ್ತಿ ದರ್ಬಾರ್ ಸ್ವಾಗತಿಸಿದರು. ದೀಪಾ ಶೀಲವಂತರ ವಂದಿಸಿದರು.

ಕಾರ್ಯಕ್ರಮದಲ್ಲಿ ಸುಮಾರು 30ಕ್ಕೂ ಹೆಚ್ಚು ವಿವಿಧ ಮಹಿಳಾ ಸಂಘಟನೆಯ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಗೂ ಲಾಯನ್ಸ ಸಂಸ್ಥೆಯ ಎಲ್ಲ ಸದಸ್ಯರು ಹಾಗೂ ಬ್ರಾಂಚ್ ಕ್ಲಬ್‌ನ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಜಿ.ಪಂ ಸಿಇಓ ವಿವಿಧೆಡೆ ಅನಿರೀಕ್ಷಿತ ಭೇಟಿ

# ಕಾಮಗಾರಿಗೆ ವೇಗ ಪ್ರಗತಿ ಸಾಧಿಸದಿದ್ದರೆ ಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಬಾದಾಮಿ ತಾಲೂಕಿನ ವಿವಿಧಗ್ರಾಮಗಳಲ್ಲಿನಡೆಯುತ್ತಿರುವ ಅಭಿವೃದ್ಧಿ ಹಾಗೂ ಸಾರ್ವಜನಿಕಸೇವಾ ಸಂಬಂಧಿತ ಕಾಮಗಾರಿಗಳ ಸ್ಥಳಕ್ಕೆ ಜಿ.ಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈಸಮಯದಲ್ಲಿಮೂಲಸೌಕರ್ಯ ಅಭಿವೃದ್ಧಿ, ಸ್ವಚ್ಛತೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟ ಹಾಗೂ ಪ್ರಗತಿಯನ್ನು ಪರಿಶೀಲಿಸಿದರು. ಬಾದಾಮಿ ತಾಲೂಕಿನ ಹೂಲಗೇರಿ ಗ್ರಾ.ಪಂ ವ್ಯಾಪ್ತಿಯಲ್ಲಿನಿರ್ಮಾಣವಾಗುತ್ತಿರುವ ಕಸ ವಿಲೇವಾರಿ ಘಟಕದ ಕಾಮಗಾರಿಯನ್ನು ಪರಿಶೀಲಿಸಿ ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಎಂದು ಸೂಚಿಸಿದರು. ಕಾಮಗಾರಿಗಳಲ್ಲಿ ನಿರ್ಲಕ್ಷ್ಯ ತೆ-ೂರಿದರೆ ಹಾಗೂ ನಿಗದಿತ ಅವಧಿಯಲ್ಲಿ ಪ್ರಗತಿ ಸಾಧಿಸದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಂತರ ಕೆರೂರಿನ ಬಿಡಿಸಿಸಿ ಬ್ಯಾಂಕ್‌ಗೆ ಭೇಟಿ ನೀಡಿ, ಬ್ಯಾಂಕಿನ ಕಾರ್ಯವೈಖರಿ, ಗ್ರಾಹಕ ಸೇವೆ, ಸಾಲ ವಿತರಣೆ ಹಾಗೂ ರೈತರು ಮತ್ತು ಸ್ವಸಹಾಯ ಸಂಘಗಳಿಗೆ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಸಾರ್ವಜನಿಕರಿಗೆ ಪಾರದರ್ಶಕ ಹಾಗೂ ಸಮಯೋಚಿತ ಸೇವೆ ಒದಗಿಸುವಂತೆ ಬ್ಯಾಂಕ್ ಸಿಬ್ಬಂದಿಗೆ ಸೂಚನೆ ನೀಡಿದರು.

ಬಾದಾಮಿ ತಾಲೂಕಿನ ಕುಳಗೇರಿ ಕ್ರಾಸ್‌ನಲ್ಲಿ ನಡೆಯುತ್ತಿರುವ ಸಿಸಿ ರಸ್ತೆ ಕಾಮಗಾರಿಯನ್ನು ಪರಿಶೀಲಿಸಿದ ಅವರು, ಗುಣಮಟ್ಟದ ಸಾಮಗ್ರಿಗಳನ್ನು ಬಳಸಿಕೊಂಡು ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಕಾಮಗಾರಿಗಳಲ್ಲಿ ವಿಳಂಬವಾದರೆ ಅಥವಾ ನಿರೀಕ್ಷಿತ ಪ್ರಗತಿ ಸಾಧಿಸದಿದ್ದರೆ ಯಾವುದೇ ರೀತಿಯ ಸಡಿಲಿಕೆ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಇದೇ ವೇಳೆ ಕುಳಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಂ.ಆರ್. ಎಫ್ ಘಟಕದ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿ, ಕಸ ವಿಂಗಡಣೆ ಹಾಗೂ ಮರುಬಳಕೆಯ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಕುರೇರ ಸೂಚಿಸಿದರು.

ಕುಳಗೇರಿ ಕ್ರಾಸ್‌ನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಸಿಇಓ ಶಶಿಧರ ಕುರೇರ ಅವರು, ಅಲ್ಲಿನ ಔಷಧ ದಾಸ್ತಾನು, ಸ್ವಚ್ಛತೆ ಮತ್ತು ಮೂಲಸೌಕರ್ಯಗಳನ್ನು ಪರಿಶೀಲಿಸಿ, ಸಾರ್ವಜನಿಕರಿಗೆ ನಿರಂತರ ಮತ್ತು ಗುಣಮಟ್ಟದ ಆರೋಗ್ಯ ಸೇವೆ ಒದಗಿಸಬೇಕು ಎಂದು ನಿರ್ದೇಶನ ನೀಡಿದರು. ಖಾನಾಪೂರ ಎಸ್. ಕೆ ಗ್ರಾಮದಲ್ಲಿ ನಡೆಯುತ್ತಿರುವ ಸಿಸಿ ರಸ್ತೆ ಕಾಮಗಾರಿಯನ್ನು ಪರಿಶೀಲಿಸಲಾಯಿತು. ಜೊತೆಗೆ ಗೋವಿಂದಕೊಪ್ಪ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢ ಶಾಲೆಯ ನೂತನ ಕೊಠಡಿ ನಿರ್ಮಾಣ ಕಾಮಗಾರಿಯನ್ನೂ ಪರಿಶೀಲಿಸಿ, ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು. ವಿಳಂಬ ಅಥವಾ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

# ಮಹಿಳೆಯರ ಮೇಲಿನ ದೌರ್ಜನ್ಯದ ಕಡಿವಾಣ ಯಾವಾಗ?: ಮಲ್ಲಾಡಿ

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು :**

ಹಬ್ಬಳ್ಳಿ ಘಟನೆಯ ಬಗ್ಗೆ ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಕುರಿತು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಡಾ .ಪ್ರಫುಲ್ಲ ಮಲ್ಲಾಡಿ ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ.

ಹುಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಘಟನೆ ಅತ್ಯಂತ ಆತಂಕಕಾರಿ ಹಾಗೂ ಖಂಡನೀಯವಾಗಿದ್ದು. ಯಾವುದೇ ಹುದ್ದೆ, ಅಧಿಕಾರ ಅಥವಾ ಯೂನಿಫಾರ್ಮ್ ಮಹಿಳೆಯರ ಗೌರವವನ್ನು ತುಳಿಯುವ ಹಕ್ಕು ನೀಡುವುದಿಲ್ಲ. ಕಾನೂನು ಮತ್ತು ಶಿಸ್ತು ಕಾಪಾಡುವ ಜವಾಬ್ದಾರಿ ಹೊಂದಿರುವ ವ್ಯವಸ್ಥೆಯೊಳಗೇ



ಮಹಿಳೆಯರ ಮೇಲಿನ ದೌರ್ಜನ್ಯ ಆರೋಪಗಳು ಕೇಳಿಬರುವುದು ಸಂಪೂರ್ಣ ರಾಜ್ಯ ಸರ್ಕಾರದ ವ್ಯವಸ್ಥೆಯ ವೈಫಲ್ಯವನ್ನು ತೋರಿಸುತ್ತದೆ. ಮಹಿಳೆಯರ ಗೌರವ, ಭದ್ರತೆ ಮತ್ತು ಮೂಲಭೂತ ಹಕ್ಕುಗಳಿಗೆ ಧಕ್ಕೆ ಉಂಟುಮಾಡುವ ಯಾವುದೇ ಘಟನೆಗಳನ್ನು ಸಮಾಜ ಹಾಗೂ ರಾಜ್ಯ ಗಂಭೀರವಾಗಿ ಪರಿಗಣಿಸಲೇಬೇಕು.

ಹುಬಳ್ಳಿಯ ಕೇಶ್ವಪೂರದಲ್ಲಿ ಬಿಜೆಪಿ ಕಾರ್ಯಕರ್ತೆ ಸುಜಾತರನ್ನು ಬಂದಿಸುವ ನೆಪದಲ್ಲಿ ಅವರನ್ನ ವಿವಸ್ತ್ರಗೊಳಿಸಿ ಅಮಾನುಷವಾಗಿ ಥಳಿಸಿದ್ದು, ಇದಕ್ಕೆ ಕಾಂಗ್ರೆಸ್ ಮಹಿಳಾ ಕಾರ್ಪೊರೇಟರ್ ಸುವರ್ಣ ಹೆಸರು ತಾಗಳುಹಾಕಿಕೊಂಡಿದ್ದು ಈ ದುಷ್ಕೃತ್ಯ ದ ವಿರುದ್ಧ ತಟಸ್ಥ ಮತ್ತು ಪಾರದರ್ಶಕ ತನಿಖೆ,ತಪ್ಪಿತಸ್ಥರ ವಿರುದ್ಧ ತಕ್ಷಣ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು,

ಈ ಪ್ರಕರಣದಲ್ಲಿ ಕೇವಲ ಒಂದು ಪ್ರಕರಣವಲ್ಲ ರಾಜ್ಯದಲ್ಲಿ ಮಹಿಳೆಯರು ಎಷ್ಟು ಸುರಕ್ಷಿತರಾಗಿದ್ದಾರೆ ಎಂಬ ಪ್ರಶ್ನೆಯನ್ನು ಇದು ಎತ್ತಿ ತೋರಿಸುತ್ತದೆ.

ಮಹಿಳೆಯರ ಸುರಕ್ಷತೆ ಬರಿ ಘೋಷಣೆ ಮಾತ್ರವಾಗಿರಬಾರದು; ಅದು ಆಡಳಿತದ ಮೊದಲ ಆದ್ಯತೆಯಾಗಬೇಕು ಎಂದು ಡಾ.ಪ್ರಫುಲ್ಲ ಮಲ್ಲಾಡಿ ರವರು ಅಭಿಪ್ರಾಯ ವ್ಯಕ್ತಪಡಿಸಿದರು.

## ಪ್ರತಿಭಾ ಪುರಸ್ಕಾರ ವಾಣಿಜ್ಯ ಸುಮನ ಸಂಚಿಕೆ ಬಿಡುಗಡೆ

# ವಾಣಿಜ್ಯ ಶಿಕ್ಷಣ ಜ್ಞಾನ ಬೆಳೆಸುವ ಶಕ್ತಿ



**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಾಣಿಜ್ಯ ಶಿಕ್ಷಣದ ಮಹತ್ವ ದಿನೇದಿನೇ ಹೆಚ್ಚುತ್ತಿದ್ದು, ಅದು ವಿದ್ಯಾರ್ಥಿಗಳಿಗೆ ಕೇವಲ ಉದ್ಯೋಗ ಪಡೆಯುವ ಸಾಧನವಾಗದೆ ಉದ್ಯಮಶೀಲತೆ, ನಾಯಕತ್ವ ಹಾಗೂ ಆರ್ಥಿಕ ಜ್ಞಾನವನ್ನು ಬೆಳೆಸುವ ಶಕ್ತಿಯಾಗಿದೆ ಎಂದು ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಹೇಳಿದರು.

ನಗರದ ಬ.ವಿ.ವಿ.ಸಂಘದ ಬಸವೇಶ್ವರ ಪದವಿ ಪೂರ್ವ ವಾಣಿಜ್ಯ ಮಹಾವಿದ್ಯಾಲಯದ ವತಿಯಿಂದ ಬುಧವಾರ ಸಂಘದ ನೂತನ ಸಭಾಭವನದಲ್ಲಿ ಜರುಗಿದ 2025-26ನೇ ಸಾಲಿನ ಪ್ರತಿಭಾ ಪುರಸ್ಕಾರ, 'ವಾಣಿಜ್ಯ ಸುಮನ' ವಾರ್ಷಿಕ ಸಂಚಿಕೆ ಬಿಡುಗಡೆ ಹಾಗೂ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಶಿಕ್ಷಣ ಅಂಕಗಳ ಗಳಿಕೆಗೆ ಮಾತ್ರ ಸೀಮಿತವಾಗಬಾರದು. ಅದು ವ್ಯಕ್ತಿತ್ವ ನಿರ್ಮಾಣ, ನೈತಿಕ ಮೌಲ್ಯಗಳ ಬೆಳವಣಿಗೆ ಹಾಗೂ ಸಮಾಜಮುಖಿ ಚಿಂತನೆಗೆ ದಾರಿ ತೋರಿಸಬೇಕು ಎಂದರು.

ಸಂಘದಲ್ಲಿ ಶಿಕ್ಷಣದ ಜೊತೆಗೆ ವ್ಯಕ್ತಿತ್ವ ನಿರ್ಮಾಣದಂತ ನೈತಿಕ ಮೌಲ್ಯಗಳನ್ನು ಕಲಿಸುತ್ತಿರುವುದು ಹೆಮ್ಮೆಯ ಸಂಗತಿ. ವಾಣಿಜ್ಯ ಕ್ಷೇತ್ರವು ದೇಶದ ಆರ್ಥಿಕ ಬೆನ್ನೆಲುಬಾಗಿದ್ದು ಈ ಕ್ಷೇತ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಬಹುದು. ಉದ್ಯಮ ಆರಂಭಿಸುವ ಧೈರ್ಯ, ಹೊಸ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲು ಬೇಕಾದ ಚಾತುರ್ಯ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಮೂಗನೂರಮಠ ಹೇಳಿದರು.

ಇಂದಿನ ಯುವಜನತೆ ಶಿಸ್ತು, ಸಮಯಪಾಲನೆ ಮತ್ತು ಮೌಲ್ಯಾಧಾರಿತ ಬದುಕನ್ನು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿಕೊಳ್ಳಬೇಕು ಎಂದು ಕರೆ ನೀಡಿದ ಅವರು, ಸತತ ಪರಿಶ್ರಮ, ಆತ್ಮವಿಶ್ವಾಸ ಮತ್ತು ಸ್ಪಷ್ಟ ಗುರಿಯೊಂದಿಗೆ ಮುಂದುವರೆದರೆ ಯಶಸ್ಸು ಖಚಿತ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ಜಗನ್ನಾಥ ಚವ್ಹಾಣ ಮಾತನಾಡಿ, ಮಹಾವಿದ್ಯಾಲಯದ ಶೈಕ್ಷಣಿಕ ಗುಣಮಟ್ಟ, ಅಧ್ಯಾಪಕರ ಶ್ರಮ ಹಾಗೂ ವಿದ್ಯಾರ್ಥಿಗಳ ಪರಿಶ್ರಮದ ಫಲವಾಗಿದೆ, ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳು ಜೀವನದ ಹೊಸ ಹಂತಕ್ಕೆ ಕಾಲಿಡುತ್ತಿದ್ದು ಆತ್ಮವಿಶ್ವಾಸ, ಮೌಲ್ಯನಿಷ್ಠೆ ಹಾಗೂ ಸಮಾಜದ ಜವಾಬ್ದಾರಿಯೊಂದಿಗೆ ಮುಂದಿನ ಪಯಣವನ್ನು ಯಶಸ್ವಿಯಾಗಿ ಸಾಗಿಸಬೇಕು ಎಂದರು.

ಇದೇ ಸಂದರ್ಭದಲ್ಲಿ 'ವಾಣಿಜ್ಯ ಸುಮನ' ವಾರ್ಷಿಕ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಂಯೋಜ-ಕರಾದ ಶ್ರೀಮತಿ ಜಿ.ಎಸ್.ಶೆಲ್ಲಿಕೇರಿ ಸ್ವಾಗತಿಸಿದರು. ಬಿ.ವೈ.ಬಂಡವಾಳಕರ ಪರಿಚಯಿಸಿದರು. ಮುನೀರ್‌ಹುನಗುಂದ ವಾರ್ಷಿಕ ವರದಿ ವಾಚಿಸಿದದರು. ಶ್ರೀಮತಿ ಸುಹಾಸಿನಿ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಸಂಗೀತಾ ಗರಗದಮಠ ವಂದಿಸಿದರು. ಮಹಾವಿದ್ಯಾಲಯದ ಉಪನ್ಯಾಸಕರು, ಕಚೇರಿ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸಿದ್ದೇಶ್ವರ ಶ್ರೀಗಳು ಶಿಸ್ತುಬದ್ಧ ಜೀವನಕ್ಕೆ ಆದರ್ಶ: ವೀರಣ್ಣ ಚರಂತಿಮಠ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**20ನೇಶತಮಾನದ ಶ್ರೇಷ್ಠ ಸಂತ ಸಿದ್ದೇಶ್ವರ ಶ್ರೀಗಳ ಜ್ಞಾನಸಂಪತ್ತು ಅಪಾರ. ಅವರ ಸರಳ ಬದುಕಿನ ಸೂತ್ರ, ಶಿಸ್ತು, ನಿಷ್ಠೆ ಎಲ್ಲರ ಬದುಕಿಗೆ ಆದರ್ಶವಾಗಿವೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.



ನಗರದ ವಿದ್ಯಾಗಿರಿಯ ವಚನ ರಕ್ಷಕ ಗೆಳೆಯರ ಬಳಗದಿಂದ ಕುದರಿಕನ್ನೂರ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮಿಗಳ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಬಾಗಲಕೋಟೆಗೂ ಸಿದ್ದೇಶ್ವರ ಶ್ರೀಗಳಿಗೂ ಅಪಾರ ನಂಟಿತ್ತು. ಅವರ ಪ್ರವಚನಕ್ಕೆ ಸಾವಿರ-ಸಾವಿರ ಭಕ್ತರು ನಸುಕಿನಲ್ಲಿ ಆಗಮಿಸುತ್ತಿದ್ದರು. ನಾವು ಸ್ವಾಮಿ ವಿವೇಕಾನಂದರನ್ನು ನೋಡಿಲ್ಲ ಆದರೆ ಅವರ ಎಲ್ಲ ಆದರ್ಶಗಳನ್ನು ಶ್ರೀಗಳಲ್ಲಿ ಕಂಡೆವು ಎಂದರು.

20 ನೇ ಶತಮಾನದ ಶ್ರೇಷ್ಠ ಸಂತರಾಗಿ ನಮಗೆಲ್ಲಾ ಜ್ಞಾನದ ಮಾರ್ಗವನ್ನು ತೋರಿಸಿದ್ದಾರೆ. ಅವರ ತೋರಿದ ಮಾರ್ಗದರ್ಶನದಲ್ಲಿ ಎಲ್ಲರೂ ಜೀವನ ಸಾಗಿಸಿದರೆ ಅದುವೇ ಅವರಿಗೆ ನಾವು ನೀಡುವ ಗುರುವಂದನೆಯಾಗಿದೆ ಎಂದು ಹೇಳಿದರು. ಪ್ರಾಧ್ಯಾಪಕ ಡಾ.ಜಿ.ಜಿ.ಹಿರೇಮಠ ಉಪನ್ಯಾಸ ನೀಡಿ, ಶ್ರೀಗಳು ಶತಮಾನ ಕಂಡ ಜೇಬಿಲ್ಲದ ಸಂತ. ಅವರು ಪ್ರಪಂಚಕ್ಕೇ ಆದರ್ಶಪ್ರಾಯರಾಗಿದ್ದರು. ಹೊಟ್ಟೆ, ನೆತ್ತಿ, ಮತ್ತು ನಾಲಿಗೆಯನ್ನು ಶುದ್ಧವಾಗಿರಿಸಿಕೊಂಡ ಸಾಧಕರಾಗಿದ್ದ ಅವರು ಪ್ರಕೃತಿಯಲ್ಲೆ ದೈವ ಕಂಡವರು. ತಂಗಾಳಿಯಾಗಿ ಜ್ಞಾನದ ಪರಿಮಳವನ್ನು ಸೂಸಿದವರು. ಭಗವದ್ಗೀತೆ ಹಾಗೂ ಸಿದ್ಧಾಂತ ಶಿಖಾಮಣಿಯನ್ನು ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೆ ವಿದ್ವಾಂಸದ ನೆಲೆಗೆ ತಗೆದುಕೊಂಡು ಹೋಗಿ ಅದನ್ನು ದಾಖಲಿಸಿದ ಕೀರ್ತಿ ಸಿದ್ದೇಶ್ವರ ಶ್ರೀಗಳದ್ದು, ಗುರುಗಳಾದವರು ಹೀಗೇ ಇರಬೇಕು ಎಂದು ತೋರಿಸಿಕೊಟ್ಟವರು ಸಿದ್ದೇಶ್ವರ ಶ್ರೀಗಳು ಎಂದರು.

ಸಿದ್ದೇಶ್ವರ ಶ್ರೀಗಳ ಒಡನಾಡಿ ಶಿಷ್ಯ ಜ್ಞಾನಯೋಗಾಶ್ರಮದ ಹರ್ಷಾನಂದ ಸ್ವಾಮಿಗಳು ಮಾತನಾಡಿ, ಶ್ರೀಗಳು ಕರುಣಾ ಸಾಗರವಾಗಿದ್ದರು. ಬಡವರ ಮೇಲೆ, ಪರಿಸರ, ಪ್ರಾಣಿಗಳ ಮೇಲೆ ಅಪಾರ ಕರುಣೆ ತೋರುತ್ತಿದ್ದರು ಅವರ ಮೊದಲ ಆದ್ಯತೆ ಜ್ಞಾನ ದಾಸೋಹ, ಅನ್ನದಾಸೋಹವಾಗಿತ್ತು ಎಂದು ನುಡಿದರು. ಮೈಗೂರು ಶಿವಾನಂದ ಮಠದ ಗುರುಪ್ರಸಾದ ಸ್ವಾಮಿಗಳು ಹಾಗೂ ದಿವ್ಯ ಸಾನಿಧ್ಯ ವಹಿಸಿದ್ದ ವಿದ್ಯಾಗಿರಿಯ ಕನ್ನೂರ ಹಿರೇಮಠದ ವಿಶ್ವರಾಜೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಶಾಸ್ತ್ರೀಯ ಸಂಗೀತ ಪಂಡಿತರಾದ ಜಯತೀರ್ಥ ತಾಸಗಾಂವಕರ ವಚನಗಾನ ನಮನ ನಡೆಸಿಕೊಟ್ಟರು. ಚಂದ್ರಶೇಖರ ಆಲೂರ ತಬಲಾ ಹಾಗೂ ಪ್ರಕಾಶ ರುದ್ರಸ್ವಾಮಿಮಠ ಹಾರ್ಮೋನಿಯಮ್ ಸಾಥ ನೀಡಿದರು. ಇದೇ ಸಂಧರ್ಭದಲ್ಲಿ ಸಾಧಕರಿಗೆ, ಭಾರತೀಯ ರಕ್ಷಣಾ ಪಡೆಯ ನಿವೃತ್ತ ಯೋಧರಿಗೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ. ವೃದ್ಧಾಶ್ರಮಕ್ಕೆ ಆಹಾರ ವಿತರಣೆ,

ಅನಾಥ ಮಕ್ಕಳಿಗೆ ಸಹಾಯ ಧನ ವಿತರಣೆ ಹಾಗೂ ಬಡ ಶಾಲಾ ಮಕ್ಕಳಿಗೆ ನೋಟ ಬುಕ್, ಕಂಪಾಸುಗಳನ್ನು ವಿತರಿಸಲಾಯಿತು.

ಸಾಹಿತಿ ರಾಜು ಗಡ್ಡಿಯವರು ರಚಿತ "ಖಾಲಿ ಕೊಡಗಳು" ಹಾಗೂ ಜಿ.ಎಮ್.ಸಿಂಧೂರ ಅವರ ಕವನ ಸಂಕಲನ " ಬಿಂಬ " ಬಿಡುಗಡೆ ಮಾಡಲಾಯಿತು. ಶ್ರೀಶೈಲ ಡೆಂಗಿ ಉಪಸ್ಥಿತರಿದ್ದರು. ವಚನ ರಕ್ಷಕ ಗೆಳೆಯರ ಬಳಗದ ಸಂಚಾಲಕ ಮುತ್ತು ಮಡಿವಾಳರ ಪ್ರಾಸ್ತವಿಕವಾಗಿ ಮಾತನಾಡಿದರು. ಶಿವಾನಂದ ಕುಂಬಾರ ಸ್ವಾಗತಿಸಿದರು. ಎಸ್. ಎಸ್.ತೆಗ್ಗಿ ವಂದಿಸಿದರು. ಡಾ.ರವಿ. ಕೋಟೆಣ್ಣವರ ಪರಿಚಯಿಸಿದರು. ಮೋಹನದೇಶಪಾಂಡೆ ನಿರೂಪಿಸಿದರು.

## ಕೆಲವಡಿ ಪ್ರೌಢಶಾಲೆಯಲ್ಲಿ ಪಾಲಕರ ಸಭೆ

# ಪಾಲಕರ ಸಹಕಾರ, ಶಿಕ್ಷಕರ ಮಾರ್ಗದರ್ಶನ ಮಕ್ಕಳ ಸಾಧನೆ ಪೂರಕ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಮಕ್ಕಳು ಪರಿಶ್ರಮದೊಂದಿಗೆ ಅಧ್ಯಯನದಲ್ಲಿ ತೊಡಗಬೇಕು. ಪಾಲಕರ ಸಹಕಾರ, ಶಿಕ್ಷಕರ ಮಾರ್ಗದರ್ಶನ ಮಕ್ಕಳ ಸಾಧನೆಗೆ ಪೂರಕವಾಗುತ್ತದೆ ಎಂದು ಮುಖ್ಯೋಪಾಧ್ಯಾಯ ಸಂಗಮೇಶ ಕಲ್ಲೂರು ಹೇಳಿದರು.

ಜಿಲ್ಲೆಯ ಗುಳೇದಗುಡ್ಡ ತಾಲೂಕಿನ ಕೆಲವಡಿಯ ಲಕ್ಷ್ಮೀ ರಂಗನಾಥ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ಮಕ್ಕಳ ಪಾಲಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಾಲೆಯಲ್ಲಿರುವ ಪ್ರತಿಯೊಬ್ಬ ಶಿಕ್ಷಕರು ಎಲ್ಲಾ ಮಕ್ಕಳ ಶಿಕ್ಷಣದ ಪ್ರಗತಿಗೆ ಪೂರಕವಾಗಿ ಪಠ್ಯಗಳನ್ನು ನಿಗಧಿತ ಅವಧಿಯಲ್ಲಿ ಮನಮುಟ್ಟುವಂತೆ ಹೇಳಿ ಪೂರ್ಣಗೊಳಿಸಿದ್ದು, ಮುಂಬರುವ ಸರಣಿ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುತ್ತಿದ್ದಾರೆ ಅದಕ್ಕೆ ಪಾಲಕರು ಮನೆಯಲ್ಲಿ ಮಕ್ಕಳ ಓದಿನ ಕಡೆಗೆ ಗಮನಕೊಡಬೇಕು. ಮಕ್ಕಳಿಗೆ ಮನೆಯಲ್ಲಿ ಓದುವ ಪರಿಸರ ನಿರ್ಮಿಸಿಕೊಟ್ಟರೆ ಅವರು ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಪಾಲಕರಪರವಾಗಿಡಾ.ಚಂದ್ರಶೇಖರ ಕಾಳನ್ನವರ ಮಾತನಾಡಿ, ಇಂದಿನ ದಿನಮಾನದಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಅವಶ್ಯಕ ಮೂಲಭೂತ ಸೌಲಭ್ಯಗಳು ಸರಿಯಾಗಿ ದೊರೆಯುತ್ತಿವೆ. ಈ ಪ್ರೌಢಶಾಲೆಯಲ್ಲಿ ಸಮಯಕ್ಕೆ ಸರಿಯಾಗಿ ಮಾರ್ಗದರ್ಶನ ಮಾಡುವ ಆದರ್ಶ ಮುಖ್ಯೋಪಾಧ್ಯಾಯರಿದ್ದಾರೆ, ಮಕ್ಕಳಿಗೆ ಕಲಿಕೆಗೆ ಪ್ರೇರಣೆ, ಸ್ಫೂರ್ತಿ ತುಂಬುವ ಉತ್ತಮ ಬೋಧನೆ ಮಾಡುವ ಶಿಕ್ಷಕರ ವೃಂದ ಇರುವದರಿಂದ ಕೆಲವಡಿ ಸರಕಾರಿ ಪ್ರೌಢ ಶಾಲೆಯು ಮಾದರಿ ಪ್ರೌಢಶಾಲೆ ಆಗಲು ಸಾಧ್ಯವಾಗಿದೆ. ಈ ಪ್ರೌಢಶಾಲೆಯ ಪ್ರಗತಿಗೆ ಎಲ್ಲಾ ಪಾಲಕರ ಸಂಪೂರ್ಣ ಸಹಾಯ, ಸಹಕಾರ ಇರುತ್ತದೆ ಎಂದು ಹೇಳಿದರು.

ಸಭೆಯಲ್ಲಿದ್ದ ಪಾಲಕರು ತಮ್ಮ ತಮ್ಮ ಮಕ್ಕಳ ಶಿಕ್ಷಣ ಚಟುವಟಿಕೆಗಳ ಕುರಿತು ಅಭಿಪ್ರಾಯ ಹಂಚಿಕೊಂಡರು. ಆಯಾ ವಿಷಯಗಳ ಶಿಕ್ಷಕರು ಮಕ್ಕಳ ಪಾಲಕರಿಗೆ ಶೈಕ್ಷಣಿಕ ಪ್ರಗತಿಯ ಕುರಿತು ಸಂಪೂರ್ಣ ಮಾಹಿತಿ ನೀಡಿದರು.

ಸಭೆಯಲ್ಲಿ ಹೊನ್ನಪ್ಪಗೌಡ ಗೌಡರ, ಪುಂಡಲೀಕ ಬಡಕನ್ನವರ, ಚೆನ್ನನಗೌಡ ಗೌಡರ, ರಮೇಶ ದಂಡನ್ನವರ, ಮಂಜುನಾಥ ಬಡಿಗೇರ ಹಾಗೂ ಶಿಕ್ಷಕರಾದ ಬಿ.ಆರ್.ಪಾಟೀಲ,ಜಯಶ್ರೀಕೊವಳ್ಳಿ, ಎಸ್.ಹೆಚ್.ಬಾದಾಮಿ, ರಮೇಶ ಬೀಳಗಿ, ಬಿ.ಕೆ.ರಕ್ಕಸಗಿ, ನಾಗರಾಜ ಸಲಕಿ, ಶರೀಫಾ ಸುಲ್ತಾನ, ಗೀರಿಶ ಕೊಣ್ಣೂರು ಉಪಸ್ಥಿತರಿದ್ದರು.

# ಎಐಕೆಕೆಎಂಎಸ್ ಪ್ರತಿಭಟನಾಕಾರರ ಶೀಘ್ರ ಬಿಡುಗಡೆಗೆ ಒತ್ತಾಯಿಸಿ ಪ್ರತಿಭಟನೆ.




ಗುರುಮಠಕಲ್: ವಿಜಯಪುರ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಒತ್ತಾಯಿಸಿ ಪ್ರತಿಭಟನಾಕಾರರ ಬಂಧನವನ್ನು ಖಂಡಿಸಿ ಅಖಿಲ ಭಾರತ ಕಿಸಾನ್ ಖೇತ್ ಮಜ್ದೂರ್ ಸಂಘಟನ್ (ಎಐಕೆಕೆಎಂಎಸ್) ಮತ್ತು (ಎಐಯುಟಿಯುಸಿ) ಸದಸ್ಯರು ಪಟ್ಟಣದ ಅಂಬಿಗರ ಚೌಡಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಎಐಕೆಕೆಎಂಎಸ್ ಯಾದಗಿರಿ ಜಿಲ್ಲಾಧ್ಯಕ್ಷ ಶರಣಗೌಡ ಮಾತನಾಡಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಪ್ರಸ್ತಾಪವನ್ನು ವಿರೋಧಿಸಿ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ್ ಅವರ ನಿವಾಸದ ಹೊರಗೆ ಪ್ರತಿಭಟನಾಕಾರರು ಪ್ರತಿಭಟನೆ ನಡೆಸಿದಾಗ 27 ಜನರ ಬಂಧನವಾಗಿತ್ತು, ಪ್ರತಿಭಟನಾಕಾರರಾದ ಭಗವನ್ ರೆಡ್ಡಿ, ಅರವಿಂದ ಕುಲಕರ್ಣಿ, ಸಂಗನ ಬಸವ ಸ್ವಾಮೀಜಿ, ಭೋಗೇಶ್ ಸೊಲ್ಲಾಪುರ, ಹಾಗೂ ಸಿದ್ರಾಮ ಹಳ್ಳೂರರನ್ನು ಸೇರಿ 6 ಜನರ ಮೇಲೆ ಜಮೀನು ರಹಿತವಾಗಿ ಬಂದಿಸಿರುವದನ್ನು ಖಂಡಿಸಿ ಶೀಘ್ರ ಅವರ ಬಿಡುಗಡೆ ಮಾಡಲು ಆಗ್ರಹಿಸಿದರು.

ಪೊಲೀಸ್ ಕ್ರಮವನ್ನು ಖಂಡಿಸಿದ ಸಂಘಟನೆಯು, ನ್ಯಾಯವನ್ನು ಕೋರಿ ನಡೆಯುತ್ತಿರುವ ಕಾನೂನುಬದ್ಧ ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಪ್ರತಿಭಟನಾಕಾರರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಎಐಯುಟಿಯುಸಿ ಜಿಲ್ಲಾಧ್ಯಕ್ಷೆ ಉಮಾದೇವಿ ಹೇಳಿದರು.

ಪ್ರತಿಭಟನೆಯಲ್ಲಿ ಎಐಕೆಕೆಎಂಎಸ್ ತಾಲ್ಲೂಕ ಅಧ್ಯಕ್ಷ ಸಿದ್ದಪ್ಪ ಹಿಮ್ಲಾಪುರ, ವೆಂಕಟ ರೆಡ್ಡಿ, ರಾಮಲಿಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ: 6ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**ಬಳ್ಳಾರಿ:

ಅಲ್ಪಸಂಖ್ಯಾತರಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ (ಆಂಗ್ಲ ಮಾಧ್ಯಮ) ಶಾಲೆಗಳ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ (ಸಿ.ಬಿ.ಎಸ್.ಇ) ಶಾಲೆಗಳ ದಾಖಲಾತಿಗಾಗಿ 2026-27ನೇ ಶೈಕ್ಷಣಿಕ ವರ್ಷಕ್ಕೆ 6ನೇ ತರಗತಿಗೆ ಉಚಿತ ಪ್ರವೇಶಕ್ಕಾಗಿ ಆನ್‌ಲೈನ್ ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮತ್ತು ಪಾಲಕರುಗಳು ಸೇವಾಸಿಂಧು ಪೋರ್ಟಲ್ ಲಿಂಕ್ ಃಣಣಠಿ://ಜತಿಛಿಟಿಜ-ಃಣಜಡಿತುಛಿಜ.ಇಚಿಡಿಟಚಿಣಚಿಞಚಿ.ರಠತ.ಟಿ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಫೆಬ್ರವರಿ 10 ಕೊನೆಯ ದಿನವಾಗಿದೆ. **ಮೊರಾರ್ಜಿ ದೇಸಾಯಿ ವಸತಿ ಶಾಲೆ ಹೆಸರು:**

ಕೊಳಗಲ್ಲಿನ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ(ಸಿ.ಬಿ.ಎಸ್.ಇ)ಯ ಪ್ರಾಂಶುಪಾಲರ ಮೊ.9844040035, ಬಳ್ಳಾರಿ ನಗರದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.9844040035, ಸಂಡೂರಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.9480933730, ಕಂಪ್ಲಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.7353346069, ಕುರುಗೋಡಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.7353346069, ಸಿರುಗುಪ್ಪದ ರಾರಾವಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.8861623814 ಗೆ ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನ ಅಜಾದ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ದೂ.08392-200125/224 ಹಾಗೂ ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತರ ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಮತ್ತು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಜು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಓದುಗರಿಗಾಗಿ ಮಲ್ಲಮ್ಮ ನುಡಿ ದಿನಪತ್ರಿಕೆ ಈಗ ಗುರುಮಠಕಲ್ ಅಂಗಡಿಗಳಲ್ಲಿ ಲಭ್ಯ.



**ಚಿಟಗುಪ್ಪ;** ಆಹಾರ ನಿರೀಕ್ಷಕರಾದ ಶೇಖರ್ ಅವರಿಗೆ 2026ನೇ ಸಾಲಿನ ಮಲ್ಲಮ್ಮ ನುಡಿ ಕ್ಯಾಲೆಂಡರ್ ವರದಿಗಾರ ರಾಜಕುಮಾರ ಆರ್. ಹಡಪದ ನೀಡಿದರು. ಈ ಸಂದರ್ಭದಲ್ಲಿ ಶ್ರೀಧರ್ ಇದ್ದರು.

## ಕನ್ನಡದ ಪುಸ್ತಕಗಳನ್ನು ಖರಿದಿಸೋಣ



**ಕೆಂಭಾವಿ:** ನಾಡು ನುಡಿಯನ್ನು ಉಳಿಸಿ ಬೆಳೆಸಲು ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಸೇರಿದಂತೆ ಕನ್ನಡಿಗರಾದ ನಾವುಗಳು ಕನ್ನಡದ ಪುಸ್ತಕಗಳನ್ನು ಅತ್ಯಾಸಕ್ತಿಯಿಂದ ಓದುವ ಹವ್ಯಾಸ ಮೈಗೂಡಿಸಿಕೊಳ್ಳಬೇಕು ಎಂದು ಪಟ್ಟಣದ ಶ್ರೀಮತಿ ಗಂಗೂಬಾಯಿ ಶಾಂತಗೌಡ ಪೋಲೀಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ನಾಗಪ್ಪ ಚಾವಲ್ಕರ್ ಹೇಳಿದರು.

ಪತ್ರಕರ್ತ ಸಾಹಿತಿ ವೀರಣ್ಣ ಕಲಕೇರಿ ರವರ ರಚನೆಯ ಜ್ಞಾನೋಜ ಮತ್ತು ಅಸ್ತಿತ್ವದ ಅನ್ವೇಷಣೆ ಒಟ್ಟು ನೂರು ಪ್ರತಿಗಳು ಖರೀದಿಸಿ ಮಾತನಾಡಿದ ಅವರು ನಮ್ಮ ಭಾಗದ ಅನೇಕ ಯುವ ಬರಹಗಾರರಿಂದ ಮೌಲ್ಯಯುತ ಕೃತಿಗಳು ಬರುತ್ತಿವೆ. ಕನ್ನಡತನವನ್ನು ಕಾಪಾಡಲು ಕನ್ನಡಿಗರಾದ ನಾವು ಪ್ರತಿಯೊಬ್ಬರೂ ಹೆಚ್ಚು ಹೆಚ್ಚು ಕನ್ನಡದ ಪುಸ್ತಕಗಳನ್ನು ಖರೀದಿಸುವ ಮೂಲಕ ಓದುವ ಸಂಸ್ಕೃತಿಯನ್ನು ಉಳಿಸಿ, ಬೆಳೆಸೋಣ ಎಂದರು.

ಈ ಸಂದರ್ಭದಲ್ಲಿ ಸಂಗಮೇಶ ಪಟ್ಟಣಕರ್, ಡಾ ಯಂಕನಗೌಡ ಪಾಟೀಲ್, ಲೇಖಕ ವೀರಣ್ಣ ಕಲಕೇರಿ, ಸಂದೀಪ್ ಸಂಶಿಕರ್, ರಿಯಾಜ್, ಮಾಳಪ್ಪ ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

## ಕ್ರೈಸ್ತ ಭಕ್ತಾಧಿಗಳಿಂದ ಮೂರುರಾಯರ ಹಬ್ಬ ಆಚರಣೆ



**ಮುದಗಲ್:** ಕ್ರೈಸ್ತ ಸಮೂದಾಯದವರು ಮೂರು ರಾಯರ ಹಬ್ಬ ಆಚರಣೆ ಮಾಡಿದರು.

ಪಟ್ಟಣದ ಬೇಗಂಪುರ ಪೇಟೆ 14ನೇ ಶತಮಾನದ ಪವಿತ್ರ ಹೃದಯ ದೇವಾಲಯದಲ್ಲಿ ಕ್ರೈಸ್ತ ಸಕಲ ಭಕ್ತಾಧಿಗಳು ಸಾಮೂಹಿಕವಾಗಿ ದೇವಾಲಯದಲ್ಲಿ ಯೆಸುವಿನ ಹೆಸರಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ಜರುಗಿದವು. ಸಾಯಂಕಾಲ ಯೇಸು ಕ್ರಿಸ್ತನ ಮೂರ್ತಿ ಮೆರವಣಿಗೆ ತೆರದವಾಹನದಲ್ಲಿ ಯೇಸುವಿನ ಮೂರ್ತಿಗೆ ಅಲಂಕಾರ ಮಾಡಿ, ವಿವಿಧ ಬಣ್ಣದ ಲೈಟಗಳಿಂದ ಕಂಗೊಳಿಸುತಿತ್ತು, ಭಕ್ತರು ಯೇಸುವಿನ ನಾಮಸ್ಮರಣೆ ಮಾಡುತ್ತ ಪಟ್ಟಣದ ವಿವಿಧ ಬೀದಿಯಲ್ಲಿ ಸಂಸಚರಿಸಿ, ಪುರಸಭೆ ರಂಗ ಮಂದಿರದ ಮುಂಭಾಗದಲ್ಲಿ ಫಾದರ ಅನಿಲ್ ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಅವರು ಯೇಸು ಹುಟ್ಟಿದ ಬಳಿಕ ಅವರನ್ನು ನೋಡಲು ಮೂವರು ಜ್ಞಾನಿಗಳು ಮನೆಯೊಳಗೆ ಹೋಗಿ ಮಗುವನ್ನು ತಾಯಿಯಾದ ಮರಿಯಲೋಂದಿಗೆ ನೋಡಿದರು. ಬಳಿಕ ಅವರನ್ನು ಪೂಜಿಸಿದರು. ಯೇಸು ಸ್ವಾಮಿ ಅವರು ಒಬ್ಬ ಮಹಾನ್ ವ್ಯಕ್ತಿಯಾಗಿದ್ದಾರೆ ಅವರ ಆದರ್ಶ ಗುಣಗಳನ್ನು ನಮ್ಮಲ್ಲಿಯೂ ಅಳವಡಿಕೊಂಡು ಸುದಿರ್ಘಮಾರ್ಗ ಹಿಡಿದು ಇನ್ನೊಬ್ಬರಿಗೆ ದಾರಿ ದೀಪವಾಗಬೇಕು ಎಂದು ತಿಳಿಸಿದರು. ವಸ್ತುವಷ್ಟೆಅಲ್ಲ, ದೈವ ಕಲ್ಪನೆಯನ್ನು ಸಹ ಏಕಾಂತ ದೃಷ್ಟಿಯಿಂದ ನೋಡದೆ, ಅನೇಕಾಂತ ದೃಷ್ಟಿಯಿಂದ ನೋಡುವದು ಉತ್ತಮವಾಹಿದೆ ಹೀಗಾಗಿ ದೇವರೂಬ್ಬ ನಾಮ ಹಲವು ಎಂಬ ವಾಕ್ಯ ಅರ್ಥ ಪೂರ್ಣವಾಗಿದೆ ಎಂದು ತಿಳಿಸಿದರು. ಮತ್ತೇ ವಿವಿಧ ಬೀದಿಗಳಲ್ಲಿ ಮುಂದುವರಿದ ಮೆರವಣಿಗೆಯಲ್ಲಿ ಭಕ್ತರೆಲ್ಲರೂ ಮೇಣದ ಭತ್ತಿ ಹಚ್ಚಿ ದೇವನ ನಾಮ ಸ್ಮರಣೆ ಮಾಡುತ್ತಾ, ಭಕ್ತರು ಯೇಸುವಿನ ಭಜನೆ ಮಾಡುತ್ತ ಚರ್ಚ ತಲುಪಿ ವಿವಿಧ ಧಾರ್ಮಿಕ ಪೂಜೆ ಸಲ್ಲಿಸಿ ಕಾರ್ಯಕ್ರಮ ಸಂಪನ್ನಗೊಳಿಸಿದರು.

ಈ ವೇಳೆ ಧರ್ಮ ಗುರುಗಳಾದ ಫಾದರ ಪೊನ್ನೂಸ್ವಾಮಿ, ಫಾದರ ವಿಜಯಕುಮಾರ, ಫಾದರ ಚಿನ್ನಪ್ಪ ಎಮ್ಮಿ, ಫಾದರ ದಾನಪ್ಪ, ಫಾದರ ಸುನಿಲ , ಮುಖಂಡರಾದ ಪೋಲರಾಜ, ಜೋಸೆಫ, ದುರ್ಗಪ್ಪ ಕಟ್ಟಿಮನಿ, ಪ್ರೇಮ, ಅತೋಣಿ, ಅನಿಲ, ಅಶೋಕ ಸೇರಿದಂತೆ ಯೇಸು ಸ್ವಾಮಿ ಭಕ್ತಾಧಿಗಳು ಉಪಸ್ಥಿತರಿದ್ದರು.

# ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿಗಳಿಗಾಗಿ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ)2024ನೇ ಸಾಲಿನ ಕೆಳಕಂಡ ವಾರ್ಷಿಕ ಪ್ರಶಸ್ತಿಗಳಿಗೆ ಪತ್ರಕರ್ತರಿಂದ ಆ ವರ್ಷದ ವರದಿ/ಲೇಖನ/ಸುದ್ದಿಛಾಯಾಚಿತ್ರಗಳನ್ನು ಆಹ್ವಾನಿಸಲಾಗಿದೆ. ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ, 3ನೇ ಮಹಡಿ, ಕಂದಾಯ ಭವನ, ಬೆಂಗಳೂರು–09 ಇಲ್ಲಿಗೆ ದಿನಾಂಕ 20–01–2026 ರೊಳಗೆ ತಲುಪುವಂತೆ ತಮ್ಮ ಸ್ವ ಪರಿಚಯದೊಂದಿಗೆ ಅರ್ಜಿಯನ್ನು ಕಳುಹಿಸಿಕೊಡಬೇಕು ಎಂದು ಕೆಯುಡಬ್ಲೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ತಿಳಿಸಿದ್ದಾರೆ.

**ಪ್ರಶಸ್ತಿಗಳ ವಿವರ**

- ಜಿ. ನಾರಾಯಣಸ್ವಾಮಿ ಪ್ರಶಸ್ತಿ (ಅತ್ಯುತ್ತಮ ಗ್ರಾಮಾಂತರ ವರದಿ)
- ಪಟೇಲ್ ಭೈರಹನುಮಯ್ಯ ಪ್ರಶಸ್ತಿ (ಅತ್ಯುತ್ತಮ ಮಾನವೀಯ ವರದಿ)
- ಗಿರಿಧರ್ ಪ್ರಶಸ್ತಿ (ಅತ್ಯುತ್ತಮ ಅಪರಾಧ ವರದಿ)
- ಬಿ. ಎಸ್.ವೆಂಕಟರಾಂ ಪ್ರಶಸ್ತಿ (ಅತ್ಯುತ್ತಮ ಸ್ಕೂಪ್ ವರದಿ)
- ಕೆ. ಎ. ನೆಟ್ಟಕಲಪ್ಪ ಪ್ರಶಸ್ತಿ (ಅತ್ಯುತ್ತಮ ಕ್ರೀಡಾ ವರದಿ)
- ಖಾದ್ರಿ ಶಾಮಣ್ಣ ಪ್ರಶಸ್ತಿ (ಅತ್ಯುತ್ತಮ ರಾಜಕೀಯ ವಿಮರ್ಶೆ)
- ಮಂಗಳ ಎಂ. ಸಿ. ವರ್ಗಿಸ್ ಪ್ರಶಸ್ತಿ (ವಾರ ಪತ್ರಿಕೆಯಲ್ಲಿ ಚಿತ್ರ ಲೇಖನಕ್ಕೆ)
- ತಗಡೂರು ಕಮಲಮ್ಮ ವೀರೇಗೌಡ ಪ್ರಶಸ್ತಿ (ರೈತಾಪಿ ಜನರ ಸಮಸ್ಯೆ ವರದಿ)
- ಆರ್.ಎಲ್.ವಾಸುದೇವರಾವ್ ಪ್ರಶಸ್ತಿ (ಅರಣ್ಯ ಕುರಿತ ಅತ್ಯುತ್ತಮ ವರದಿ)
- ಆರ್.ಎಲ್. ವಾಸುದೇವರಾವ್ ಪ್ರಶಸ್ತಿ (ವನ್ಯ ಪ್ರಾಣಿಗಳ ಕುರಿತ ಅತ್ಯುತ್ತಮ ವರದಿ)
- ಬಿ.ಜಿ.ತಿಮ್ಮಪ್ಪಯ್ಯ ಪ್ರಶಸ್ತಿ (ಆರ್ಥಿಕ ದುರ್ಬಲ ವರ್ಗದವರ ಕುರಿತ ಅತ್ಯುತ್ತಮ ವರದಿ)
- ಮಂಡಿಬೆಲೆ ಶಾಮಣ್ಣ ಸ್ಮಾರಕ ಪ್ರಶಸ್ತಿ (ಗ್ರಾಮೀಣ ಜನ–ಜೀವನದ ಅತ್ಯುತ್ತಮ ವರದಿಗೆ)
- ನಾಡಪ್ರಭು ಕೆಂಪೇಗೌಡ ಸ್ಮಾರಕ ಪ್ರಶಸ್ತಿ (ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲೆ ಅಭಿವೃದ್ಧಿ)
- ಯಜಮಾನ್ ಟಿ. ನಾರಾಯಣಪ್ಪ ಸ್ಮಾರಕ ಪ್ರಶಸ್ತಿ (ಜಿಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾದ ಕೃಷಿ ವರದಿ)
- ನಾಡಿಗೇರ ಕೃಷ್ಣರಾಯರ ಪ್ರಶಸ್ತಿ (ವಿಡಂಬನಾತ್ಮಕ ಲೇಖನಕ್ಕೆ)
- ಅತ್ಯುತ್ತಮ ಪುಟ ವಿನ್ಯಾಸಗಾರರು (ಡೆಸ್ಕ್ ನಲ್ಲಿ ಕೆಲಸ)
- ನ್ಯಾಯಾಲಯದ (ಕೋರ್ಟ್ ಬೀಟ್) ಅತ್ಯುತ್ತಮ ವರದಿ.
- ಸುಣ್ಣವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿ. (ಅತ್ಯುತ್ತಮ ಸೇನಾ ವರದಿ)
- ಕೆ.ಎನ್.ಸುಬ್ರಮಣ್ಯ ಪ್ರಶಸ್ತಿ ( ಇಂಗ್ಲೀಷ್ ಪತ್ರಿಕೆಯ ವರದಿ)
- ಟಿ.ಕೆ.ಮಲಗೊಂಡ ಪ್ರಶಸ್ತಿ (ಅತ್ಯುತ್ತಮ ತನಿಖಾ ವರದಿ)
- ಚಲನಚಿತ್ರ ನಟ, ನಿರ್ದೇಶಕ ದಿ. ದ್ವಾರಕೀಶ್ ಸ್ಮಾರಕ ಪ್ರಶಸ್ತಿ (ಚಲನಚಿತ್ರ ವಿಮರ್ಶಾ ವರದಿ)

**ವಿದ್ಯುನ್ಮಾನ (ಟಿವಿ)ವಿಭಾಗ**

- ಅತ್ಯುತ್ತಮ ತನಿಖಾ ವರದಿ
- ಅತ್ಯುತ್ತಮ ಸಾಮಾಜಿಕ, ಮಾನವೀಯ ವರದಿ
- ಅತ್ಯುತ್ತಮ ಯಾಂಕರ್ ಪ್ರಶಸ್ತಿ
- ಅತ್ಯುತ್ತಮ ರಾಜಕೀಯ ವಿಶ್ಲೇಷಣೆ

**ಷರತ್ತುಗಳು**

- ಪ್ರಶಸ್ತಿಗೆ 2024ಜನವರಿ 1ರಿಂದ 2024 ಡಿಸೆಂಬರ್ 31 ರೊಳಗೆ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟವಾದ ಲೇಖನ/ವರದಿ/ವಿಶೇಷ ವರದಿ ಸುದ್ದಿ ಛಾಯಾ ಚಿತ್ರಗಳನ್ನು ಕಳುಹಿಸಬೇಕು.
- ವರದಿ/ಲೇಖನ ಯಾವ ಪ್ರಶಸ್ತಿಗೆ ಎಂಬುದನ್ನು ಮುಖಪುಟದಲ್ಲಿ ಸ್ಪಷ್ಟವಾಗಿ ಬರೆದಿರಬೇಕು.
- ಅನುವಾದ ಮಾಡಿದ ವರದಿ/ಲೇಖನ ಪರಿಗಣಿಸುವುದಿಲ್ಲ. ಒಬ್ಬರು ಗರಿಷ್ಠ ಮೂರು ಪ್ರಶಸ್ತಿಕ್ಕಿಂತ ಹೆಚ್ಚು ಪ್ರಶಸ್ತಿಗೆ ಅರ್ಜಿ ಸಲ್ಲಿಸುವಂತಿಲ್ಲ.
- ರಾಜ್ಯ ಸಂಘ, ಜಿಲ್ಲಾ ಮತ್ತು ತಾಲ್ಲೂಕು ಸಂಘದ ಪದಾಧಿಕಾರಿಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.
- ವರದಿಗಳನ್ನು ಮೂರು ಪ್ರತಿಗಳಲ್ಲಿ (ಜೆರಾಕ್ಸ್ ಪ್ರತಿಗಳಾದರೆ ದೃಢೀಕೃತವಾದ ಪ್ರತಿ ಇರಬೇಕು.) ಕಳುಹಿಸಬೇಕು.
- ವಿದ್ಯುನ್ಮಾನ ಮಾಧ್ಯಮದ ಪ್ರಶಸ್ತಿಗಳ ಪ್ರವೇಶಕ್ಕೆ ವರದಿ ಪ್ರಸಾರವಾದ ಕ್ಲಿಪಿಂಗ್ (ಸಿಡಿ ಅಥವಾ ಪೆನ್‌ಡ್ರೈವ್) ಮತ್ತು ಅದರ ಸ್ಕ್ರಿಪ್ಟ್‌ಗಳನ್ನು ಸಂಪಾದಕರ ದೃಢೀಕರಣ ಸಹಿತ ಕಳುಹಿಸಬೇಕು.
- ಅರ್ಜಿ ಸಲ್ಲಿಸುವವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯತ್ವದ ಗುರುತಿನ ಕಾರ್ಡ್ ಮತ್ತು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.
- ವರದಿ ಜೊತೆಯಲ್ಲಿ ಸ್ವ ಪರಿಚಯ, ಪೂರ್ಣ ವಿಳಾಸ, ಮೊಬೈಲ್ ನಂಬರ್ ಮತ್ತು ಪಾಸ್ ಪೋರ್ಟ್ ಸೈಜ್ ಭಾವಚಿತ್ರ ಕಳುಹಿಸಬೇಕು.
- ಈಗಾಗಲೇ ಒಂದು ಬಾರಿ ಪ್ರಶಸ್ತಿಯನ್ನು ಪಡೆದವರು, ಮತ್ತೆ ಅದೇ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಷರತ್ತುಗಳನ್ನು ಉಲ್ಲಂಘಿಸಿ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಪ್ರಶಸ್ತಿಗೆ ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ಕೆಯುಡಬ್ಲ್ಯೂಜೆ ವಿಳಾಸಕ್ಕೆ ಕಳುಹಿಸಿಕೊಡಬೇಕು. ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಸಮೀಪದ ತೊಂಡಿಹಾಳ ಗ್ರಾಮದ ಗ್ರಾಮದೇವತೆ ಹುಲಿಗೆಮ್ಮದೇವಿ ಜಾತ್ರೆಹೆಸರಲ್ಲಿ ನಡೆಯುವ ಪ್ರಾಣಿಬಲಿ, ದೇವದಾಸಿ ಪದ್ಧತಿ, ಅರೆಬೆತ್ತಲೆ ಉರಳು ಸೇವೆ, ಮದ್ಯಪಾನ ಸೇರಿದಂತೆ ಯಾವುದೇ ಅನಿಷ್ಠ ಪದ್ಧತಿ ಕಡಿವಾಣ ಹಾಕಲಾಗುವುದು ಎಂದು ಲಿಂಗಸುಗೂರ ತಹಶೀಲ್ದಾರ್ ಕುಮಾರಿ ಸತ್ಯಮ್ಮದೇವಿ ಹೇಳಿದರು. ತೊಂಡಿಹಾಳ ಗ್ರಾಮದ ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಸಾರ್ವಜನಿಕ ಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಗುರುವಾರ ಮಾತನಾಡುತ್ತಾ ಇದೇ ತಿಂಗಳ 16 ರಿಂದ 18 ರ ವರೆಗೆ 3 ದಿನಗಳ ಕಾಲ ಜರುಗುವ ಜಾತ್ರಾ ಮಹೋತ್ಸವದಲ್ಲಿ ಭಕ್ತರು ಯಾವುದೇ ಅನಿಷ್ಠ ಪದ್ಧತಿ, ಮೂಢನಂಭಿಕೆಗೆ ಮಾರುಹೋಗದೆ, ಧಾರ್ಮಿಕ ಕ್ರಾರ್ಯಕ್ರಮದ ಮೂಲಕ ದೇವಿಯನ್ನು ಆರಾಧಿಸಬೇಕೆ ಹೊರತು



ದೇವರ ಹೆಸರಲ್ಲಿ ಪ್ರಾಣಿಬಲಿ, ದೇವದಾಸಿ ಪದ್ಧತಿ, ಅರೆಬೆತ್ತಲೆ ಸೇವೆ, ಮದ್ಯಪಾನ ಸೇರಿದಂತೆ ಅನೇಕ ಅನಿಷ್ಠ ಪದ್ಧತಿಗಳನ್ನು ಆಚರಣೆ ಮಾಡಬಾರದು ಎಂದರು. ಜಾತ್ರೆಯಲ್ಲಿ ಅನಿಷ್ಠ ಪದ್ಧತಿ ಆಚರಣೆ ಮಾಡುವವರ, ಪ್ರಚೋಧಿಸುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.ಜಾತ್ರೆಯಲ್ಲಿ ಭಕ್ತರಿಗೆ ಕುಡಿವ ನೀರು, ವಿದ್ಯುತ್ ದೀಪ, ರಸ್ತೆ, ಬಸ್ಸಿನ ಸೌಕರ್ಯ,ಸೇರಿದಂತೆ ಯಾವುದೇ ಮೂಲ ಸೌಕರ್ಯದ ತೊಂದರೆಯಾಗದಂತೆ ಜಾಗ್ರುತವಹಿಸಲು ಕಂದಾಯ ಇಲಾಖೆ ಹಾಗೂ ಹಲಕಾವಟಗಿ ಗ್ರಾ.ಪಂ.ಗೆ ವಹಿಸಲಾಗಿದೆ ಎಂದರು.

## ಪ್ರತಿಭಾ ಕಾರಂಜಿ ವಿಜೇತರಿಗೆ ಪ್ರೋತ್ಸಾಹ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಸಮೀಪದ ಜನತಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಿಧ್ಯಾರ್ಥಿಗಳು ತಾಲೂಕ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ದೆಯಲ್ಲಿ ವಿಜೇತ ವಿಧ್ಯಾರ್ಥಿಗಳಿಗೆ ಮಂಗಳವಾರ ಗ್ರಾಮಸ್ಥರು ಹಾಗೂ ಶಾಲಾ ಶಿಕ್ಷಕ ವೃಂದದವರಿಂದ ಸಂತಸ ವ್ಯಕ್ತಪಡಿಸಿ, ಪ್ರೋತ್ಸಾಹಿಸಿ ಅಭಿನಂದನೆ ಸಲ್ಲಿಸಿದರು.

ತಾಲೂಕ ಮಟ್ಟದ ಪ್ರತಿಭಾ ಕಾರಂಜಿ 3 ಸ್ಪರ್ದೆಯಲ್ಲಿ ವಿಜೇತರಾಗಿ ಶಾಲಾ ಕೀರ್ತಿ ಹಚ್ಚಿಸಿ ಸರ್ವರ ಪ್ರೀತಿಗೆ ಪಾತ್ರರಾದ ಕುಮಾರಿ ಮಹಾದೇವಿ ಧಾರ್ಮಿಕ ಪಠಣ ಸಂಸ್ಕೃತ ಸ್ಪರ್ದೆಯಲ್ಲಿ ದ್ವಿತಿಯ ಸ್ಥಾನ. ಛದ್ಮ ವೇಷ ಸ್ಪರ್ದೆಯಲ್ಲಿ ರಾಘವೇಂದ್ರಸ್ವಾಮಿ ವೇಷಧಾರಿಯಾದ ಅಮರೇಶ ದ್ವಿತಿಯ ಸ್ಥಾನ. ಕಥೆ ಹೇಳುವ ಸ್ಪರ್ದೆಯಲ್ಲಿ ಅಶೋಕ 7ನೇ ತರಗತಿ ದ್ವಿತಿಯ ಸ್ಥಾನಗಳಿಸಿದ ವಿಧ್ಯಾರ್ಥಿಗಳಿಗೆ, ಗ್ರಾಮಸ್ಥರಿಂದ ಹಾಗೂ ಶಾಲಾ ಶಿಕ್ಷಕ ವೃಂದದವರಿಂದ



ಸಂತಸ ವ್ಯಕ್ತಪಡಿಸಿ ಪ್ರೋತ್ಸಾಹಿಸಿ ಅಭಿನಂದನೆ ತಿಳಿಸಿದರು.

ಈ ವೇಳೆ ಶಾಲಾ ಮುಖ್ಯಗುರುಗಳು ಗುರುಬಸ್ಸಪ್ಪ, ಎಸ್ಡಿಎಂಸಿ ಅಧ್ಯಕ್ಷ ಅಮರೇಗೌಡ ಪಾಟೀಲ್, ಶಿಕ್ಷಕ ಮೌನೇಶ ವಿಶ್ವಕರ್ಮ, ರವಿಕುಮಾರ, ಜ್ಯೋತಿ ಹುಡೆದ್, ಜ್ಯೋತಿ ಯರದಿಹಾಳ, ಗೀತಾ ಗೌಡಪ್ಪನವರ್ ಸೇರಿದಂತೆ ಗ್ರಾಮಸ್ಥರು ಇದ್ದರು.

# ಮಲ್ಲಯ್ಯ ದೇವಸ್ಥಾನಕ್ಕೆ ಭಕ್ತರಿಂದ 21 ವರ್ಷದಿಂದ ಪಾದಯಾತ್ರೆ

• **ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ**

ಪಟ್ಟಣದ 4 ಮತ್ತು 5 ನೇ ವಾರ್ಡಗಳ ಮದ್ಯ ಭಾಗದಲ್ಲಿ ಬರುವ ಶ್ರೀ ಏಳು ಕೋಟಿ ಮಲ್ಲಯ್ಯ ಸ್ವಾಮಿಗೆ ಜ.6 ರಂದು ಸಂಜೆ 7 ಗಂಟಗೆ ಸಹಸ್ರ ಬಿಲ್ವಾರ್ಚನೆ ,ಪೂಜಾ ವಿದಿ,ವಿಧಾನಗಳಿಂದ ಸಮಿತಿಯವರಿಂದ ಹಾಗು ಭಕ್ತರಿಂದ ವಿಶೇಷ ಪೂಜಾ ಕಾರ್ಯಕ್ರಮ ಜರುಗಿತು. ಸಮಿತಿಯವರಾದ ಶಿವಕುಮಾರ ಭೂತೆ, ಶರಣಬಸಪ್ಪ ದಾನಕ್ಕೆ, ಫಕೀರಪ್ಪ ಗಾಣಗೇರ, ಮಹೇಶ ಭೂತೆ, ಮಲ್ಲಿಕಾರ್ಜುನಗೌಡ ಪೋಲಿಸ್ ಪಾಟಿಲ್, ರಾಮಣ್ಣ ನೆರೇಗಲ್ಲ, ತಿಪ್ಪಣ್ಣ ಉಪ್ಪಾರ, ಮಲ್ಲಿಕಾರ್ಜುನ ಸಾದರಖಾನ, ವಿಜಯ ಉಪ್ಪಾರ, ಮಲ್ಲಪ್ಪ ಭೂತೆ, ಬಸವರಾಜ ಕೊಪ್ಪಳ, ಶರಣಪ್ಪ ಎನ್. ಭಾವಿಕಟ್ಟಿ, ನಾಗರಾಜ ದಿವಟರ, ಈಶಪ್ಪ ಬನ್ನಿಕೊಪ್ಪ, ಅರ್ಚಕರಾದ ರುದ್ರಮ್ಮ ಸೇರಿದಂತೆ ಅಪಾರ ಭಕ್ತರು ಭಾಗವಹಿಸಿದ್ದರು. ಈ ವೇಳೆ ಗೊರವಯ್ಯ ನಾಗಪ್ಪ ಇಟಗಿ, ಶರಣ ಸಾಹಿತ್ಯ ಪರಿಷತ್ತು ಯಲಬುರ್ಗಾ ತಾಲೂಕ ಅದ್ಯಕ್ಷ ಸಂಗಪ್ಪ ಕೊಪ್ಪಳ, ಕಿಸಾನ್ ಸಮಿತಿ ಯ. ತಾಲೂಕು



ಅದ್ಯಕ್ಷ ದಾನನಗೌಡ ತೊಂಡಿಹಾಳ,ಕರ್ನಾಟಕ ರಾಜ್ಯ ರೈತ ಸಂಘದ ಯ. ತಾಲ್ಲೂಕು ಅದ್ಯಕ್ಷ ಶರಣಬಸಪ್ಪ ದಾನಕ್ಕೈ ಹಾಗು ಸಮಾಜ ಸೇವಕರಾದ ಸುರೇಶಗೌಡ ಶಿವನಗೌಡ್ರ, ಶಿವಪ್ಪ ಕೊಪ್ಪಳ ಇವರನ್ನ ಶ್ರೀ ಏಳು ಕೋಟಿ ಮಲ್ಲಯ್ಯ ಸಮಿತಿಯವರು ಸನ್ಮಾನಿಸಿದರು. ಬಳಿಕ ಭಕ್ತರು ಶ್ರೀ ಏಳು ಕೋಟಿ ಮಲ್ಲಯ್ಯ ದೇವಸ್ಥಾನದಿಂದ ಪ್ರಮುಖ ಬೀದಿಗಳ ಮೂಲಕ ಸಕಲ ವಾದ್ಯಗಳೊಂದಿಗೆ ಭಕ್ತರೆಲ್ಲರು ಪ್ರಾರ್ಥಿಸಿಕೊಂಡು, ರೈತರಿಗೆ, ಸರ್ವಜನತೆಗೆ ಮಳೆ ಬೆಳೆ ಚೆನ್ನಾಗಿ ಲಭಿಸಲಿ ಎಂದು ಮಕರ ಸಂಕ್ರಾಂತಿ ಹಬ್ಬದಂಗವಾಗಿ ಯಾದಗಿರಿ ಜಿಲ್ಲೆಯಲ್ಲಿ ಬರುವ ಶ್ರೀ ಏಳು ಕೋಟಿ ಮಲ್ಲಯ್ಯ ದೇವಸ್ಥಾನಕ್ಕೆ ಯಲಬುರ್ಗಾ, ಮೂಧೋಳ,ಮಾರನಾಳ,ಜಿ.ವೀ ರಾಪೂರ ,ಹನುಮಾಪೂರ ಹಾಗು ಸುತ್ತಮುತ್ತಲಿನ ನೂರಾರು ಭಕ್ತರು ಪಾದಯಾತ್ರೆ ಕೈ ಗೊಂಡರು.

# ವ್ಯಕ್ತಿಗೆ ಆರ್ಥಿಕ ಭದ್ರತೆಯೇ ಸಮಾಜದ ಸ್ವಾವಲಂಬನೆ

• **ಮಲ್ಲಮ್ಮ ನುಡಿ ವಾರ್ತೆ ಪೀಣ್ಯ, ದಾಸರಹಳ್ಳಿ**

ನೂರಾರು ವರ್ಷಗಳ ಕಾಲ ನಾವು ಪರಕೀಯರ ಗುಲಾಮರಾಗಿ ಸ್ವದೇಶಿ ಸ್ವಾವಲಂಬನೆಯನ್ನು ಮರೆತು ಹೋಗಿದ್ದೆವು, ಆದರೆ ಆ ಗುಲಾಮಗಿರಿ ವ್ಯವಸ್ಥೆಯಿಂದ ನಮ್ಮನ್ನ ಹೊರತರಲು ಮಹಾತ್ಮಗಾಂಧೀಜಿ, ಸುಭಾಷ್ ಚಂದ್ರಬೋಸ್, ಸ್ವಾಮಿ ವಿವೇಕಾನಂದರು ಸ್ವಾತಂತ್ರ್ಯ ಸಂಗ್ರಾಮದ ಮೂಲಕ ಹೋರಾಡಿ ಹೊರತರುವ ಕೆಲಸ ಮಾಡಿದರು ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ತಿಳಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಎಂಇಐ ಆಟದ ಮೈದಾನದಲ್ಲಿ ಸ್ವಾವಲಂಬನೆ ಪರಿಕಲ್ಪನೆಯ ಸ್ವದೇಶಿ ಜಾಗರಣಾ ಮಂಚ್ ಕರ್ನಾಟಕ ಆಯೋಜಿಸಿದ್ದ ಸ್ವದೇಶಿ ಮೇಳ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ದೇಶದ ಮಣ್ಣಿನ ಕಣಕಣದಲ್ಲೂ ನಮ್ಮ ಶಕ್ತಿ ಮೈಗೂಡಿಸಿಕೊಂಡರೆ ಮಾತ್ರ ಮನುಷ್ಯ ಜಗತ್ತಿನ ಶಕ್ತಿ ಆಗುತ್ತಾನೆ ಎಂದು ಸದಾನಂದಗೌಡ ಅಭಿಪ್ರಾಯ ಪಟ್ಟರು. ಅಲ್ಲದೇ ಒಬ್ಬ ವ್ಯಕ್ತಿಗೆ ಆರ್ಥಿಕ ಭದ್ರತೆಯೇ ಸಮಾಜದ ಸ್ವಾವಲಂಬನೆ ಎಂದು ತಿಳಿಸಿದ ಅವರು 1980ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಸಶಕ್ತಿ, ಸ್ವಾವಲಂಬನೆಸ್ವದೇಶಿ ವಿಚಾರಧಾರೆಗಳು ನಡೆಯಬೇಕೆಂಬ ಕನಸು ಹೊತ್ತಿದ್ದರು ಎಂದು ತಿಳಿಸಿದರು.

ಇದೇ ವೇಳೆ ಚಕ್ರವರ್ತಿ ಸೂಲಿಬೆಲೆ ಮಾತನಾಡಿ



ದೇಶದ ಯಾವ ಜಾಗದಲ್ಲಿ ಒಳ್ಳೆಯ ಕಾರ್ಯಕ್ರಮಗಳು ನಡೆಯುತ್ತವೆಯೋ ಆ ಜಾಗ ಪವಿತ್ರವಾಗಿರುತ್ತದೆ ಯಾವ ಜಾಗದಲ್ಲಿ ದೇಶದ್ರೋಹಿ ಚಟುವಟಿಕೆಗಳು ನಡೆಯುತ್ತವೆಯೋ ಆ ಜಾಗ ಅಪವಿತ್ರವಾಗಿರುತ್ತದೆ ಎಂದು ತಿಳಿಸಿದರು. ಇದೇ ವೇಳೆ ಮಾತನಾಡುತ್ತಿದ್ದ ಚಕ್ರವರ್ತಿ 1905 ರಲ್ಲಿ ಬ್ರಿಟೀಷರು ಪೂರ್ವ ಬಾಂಗ್ಲಾದೇಶ ಹಾಗೂ ಪಶ್ಚಿಮ ಬಾಂಗ್ಲಾದೇಶಗಳಾಗಿ ವಿಭಜನೆ ಮಾಡಿ ಹಿಂದೂ ಮುಸ್ಲಿಂ ಜನರ ನಡುವೆ ಕೋಮುಗಲಬೆ ಉಂಟು ಮಾಡಿದ್ದರು ಆ ಸಮಯವನ್ನು ಸಂಯಮ ಕಳೆದುಕೊಳ್ಳದೇ ಎರಡೂ ಕೊಮಿನವರು ಹೊಂದಾಗಿ ಬ್ರಿಟಿಷರ ವಸ್ತುಗಳನ್ನು ಉಪಯೋಗಿಸದಂತೆ ದಿಕ್ಕರಿಸಿದರು ಆನಂತರ ಹೋಳಾಗಿದ್ದ ಬಾಂಗ್ಲಾದೇಶ ಮತ್ತೆ ಒಂದಾಯಿತು ಎಂದು ತಿಳಿಸಿದರು.

ವಿಶ್ವಭಾರತಿ ಸಂತೋಷ ಗುರೂಜಿ ಮಾತನಾಡಿ ನಮ್ಮ ಮುಂದಿನ ಪೀಳಿಗೆ ನಶಿಸಿಹೋಗದಂತೆ ನೋಡಿಕೊಳ್ಳಬೇಕಾದರೆ ಪ್ರತಿಯೊಬ್ಬ ಹಿಂದೂ ದಂಪತಿಗಳು ಮೂರು ಮಕ್ಕಳನ್ನು ಮಾಡಿಕೊಳ್ಳಬೇಕೆಂಬ ಜಾಗೃತಿ ಮೂಡಿಸುವ ಕೆಲಸ ಆರಂಭಿಸಿದ್ದೇನೆ ಎಂದು ತಿಳಿಸಿದರು. ಶಾಸಕ ಎಸ್.ಮುನಿರಾಜು ಮಾತನಾಡಿ ಪ್ರಪಂಚದಲ್ಲಿ ಪರಿವರ್ತನೆ ಆಗದಂತಹ ದೊಡ್ಡ ರಾಷ್ಟ್ರ ಯಾವುದಾದರೂ ಇದ್ದರೆ ಅದು ನಮ್ಮ ಭಾರತ, ಯಾಕಂದರೆ ಆಂಗ್ಲರು ಬಿಟ್ಟು ಹೋದ ಅವರ ಸಂಸ್ಕೃತಿಗಳು ಅವರ ನಡೆನುಡಿಗಳನ್ನು ನಾವು ಪಾಲನೆ ಮಾಡುತ್ತಿದ್ದೇವೆ ಎಂದು ವಿಷಾದ ವ್ಯಕ್ತಪಡಿಸಿದರಲ್ಲದೇ ವಿದೇಶಿ ವಸ್ತುಗಳಿಗೆ ನಾವು ಸುಲಭವಾಗಿ ಹೊಂದಿಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವದೇಶಿ ಮೇಳದಲ್ಲಿ ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಪಿ.ಧಾನಪ್ಪ, ಸಂಯೋಜಕ ರವೀಂದ್ರ ಪೈ, ಸಹ ಸಂಯೋಜಕ, ದಾನಪ್ಪ, ಸಂಘಟಕ ಭರತ್ ಸೌಂದರ್ಯ, ಸಹ ಸಂಘಟಕ ಲಕ್ಷ್ಮಿ ವೆಂಕಟೇಶ್, ಸಂಚಾಲಕ ವಸಂತಮೂರ್ತಿ, ಸಹ ಸಂಚಾಲಕರಾದ ಉಮಾದೇವಿ ನಾಗರಾಜ್, ಸುಜಾತ ಮುನಿರಾಜು, ಶಿವಕುಮಾರ್,ಸೋಮಶೇಕರ್, ಲಕ್ಷ್ಮಣ ಗೌಡರು ಯುವ ಮುಖಂಡರಾದ ವಿನೋದ್ ಗೌಡ ಶಿವಕುಮಾರ್ ಮಧು ಮತ್ತಿತರು ಇದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)